Relief Works in Honnali Taluk.

*Q.—293. Sri D. PARAMESWARAPPA (Honnali).—

Will the Government be pleased to state :—

(*a*) whether they are aware that about 40 villages in Honnali taluk have been badly affected owing to failure of rains this year;

(*b*) the relief works proposed to be taken in such area to ameliorate the conditions of the people who are in distress?

A.—Sri M. V. KRISHNAPPA (Minister for Revenue).—

(*a*) In 30 villages crops have been affected to some extent.

(*b*) Ten relief works at an estimated cost of Rs. 25,500 are proposed to be taken up under "64 Famine" during March 1966.

2-00 P.M.

Business of the Day

MR. SPEAKER.—Before we take up the rest of the work for the day I want to invite the attention of the Hon ble Chief Minister and other Ministers to the fact that there are only 9 questions for tomorrow. Answers for 151 questions are overdue despite my best efforts.

SRI S. M. KRISHNA (Maddur).—For certain questions answers are available within the Secretarit itself. Even such questions are not being answered promptly.

SRI S. NIJALINGAPPA (Chief Minister).—I have issued instructions that they must be forthcoming.

MR. SPEAKER.—Tomorrow we will have only 9 questions. The Government may kindly see what could be done. Now, Sri P. F. D'Mellow will continue his speech.

BUDGET ESTIMATES FOR 1966-67—DEMANDS FOR GRANTS

DEMAND NOS. 17, 37 and 49.

(*Debate continued*)

MAJOR P. F. D'MELLOW (Nominated).—Mr. Speaker, Sir, as I was saying when the House rose last evening, I believe the Hon'ble Education Minister will recall the Memorandum which I was privileged to present both to the Hon'ble Chief Minister and himself in 1963, where I endeavoured to explain the need for Government to view my representations as based entirely on Article 30. I then submitted Sir, and I do so, with all due respect again today that to require Anglo-Indian schools to forego

every single benefit or relief that Government so generously provides for other educational institutions in the State, merely because of their insistence on preserving and maintaining the inviolability of the fundamental rights granted under article 30 of the Constitution to all minorities in the country based on religion or language would not, in my humble opinion, be in consonance with the spirit of liberal toleration enshrined in article 350A of the Constitution which provides that it is not only open to minorities to educate their children in their own mother tongue, but imposes an obligation on the State to even provide for such instruction.

Sir, I shall be failing in my duty were I not to admit to the many acts of kindness and genuine sympathy which I have been privileged to receive from the Hon'ble Education Minister whenever I had an occasion to represent the case of these Schools to him.

I acknowledge too the courtesy and desire to be helpful which I have found among all the officers of the Education Department with whom it has been my privilege to deal on matters connected with these schools.

All this I gladly acknowledge and I hope that Government on its part will try and understand that my only reason for returning as I have to this subject time and again, is because on my part I wish to be helpful too, I desire that I should try and convince Government that it only needs a fresh look at these schools from the angle I have now presented, from the angle of Article 30, as dealt with in the opinion of the Supreme Court in the Kerala Education Bill Reference, for many of the present difficulties to be resolved.

Sir, here are educational institutions which not even their worst critics will deny have attained a high order of excellence in the standards of education provided. Here are schools equipped to the very best standards in buildings, laboratories, libraries, equipment, and possessed of devoted and highly qualified staff, trained to the most modern teaching techniques in the country. Here are schools, proud of their country-wide reputation for the standard of discipline among their students and ex-students. Schools which have proved their worth, as second to none, in the country when India called for sacrifices and fidelity during the recent conflict with Pakistan Schools managed by men and women motivated with only a passion to bring all that is best in the sphere of education to those who may, of their own free will, choose to equip themselves for their future by passing through their portals and schools which are fully provided with a status under the Constitution of the Country but which nevertheless appear to labour under so much unnecessary misunderstanding and suspicion even when everything points to their entitlement to general and universal support.

Sir, I submit in all seriousness-that the Country needs every single educational institution which is found to conform to approved standards-Indeed we need many more such schools and colleges, and so long as these educational institutions are found to be established and administered under the authority of the common Constitution of the

(MAJOR P. F. D'MELLOW)

Country, it is our solemn duty to allow them to develop to their full stature, as centres of learning for the benefit of the Country as a whole.

As I have endeavoured to explain, Anglo-Indian Schools have been established, not for the exclusive benefit of any particular community, and today serve students drawn from every community, without let or hindrance. They exist because the Constitution so permits, and it is our solemn duty to up-hold the Constitution of our Country.

If we approach the question from this angle we shall find no difficulty in dealing with these minority run schools, when coming to provide ourselves with the further legislation that may be found desirable when the Education Commission comes to make its final Report.

We shall then come to understand and appreciate that these "Anglo Indian" Schools are as legitimately constituted, as any other which follow the public school pattern in education, such as the Sainik, the Central Government, the Army, Navy and Air Force schools which are welcomed by all State Governments, and permitted to function without let or hindrance.

Sir, I thank you and support the Demand.

†ಶ್ರೀಮತಿ ಬಿ. ಎಲ್. ಸುಬ್ಬಮ್ಮ (ಚಿಕ್ಕಮಗಳೂರು).—ಸ್ವಾಮಿ, ಈ ಸಭೆಯ ಮುಂದೆ ಇರತಕ್ಕಂಥ ವಿದ್ಯಾಭ್ಯಾಸ ಖಾತೆಗೆ ಸಂಬಂಧಪಟ್ಟ ಬೇಡಿಕೆಯನ್ನು ಅನುಮೋದಿಸುತ್ತಾ ಕೆಲವು ಮಾತುಗಳನ್ನಾಡಲು ಬಯಸುತ್ತೇನೆ. ದೇಶದ ಮುಂದಿನ ಜನತೆಯ ಅಭಿವೃದ್ಧಿಗಾಗಿ ಸಹಾಯಕ ಆಗಿರತಕ್ಕಂಥ 29,75,40,400 ರೂಪಾಯಿಗಳು ಇರತಕ್ಕ ಈ ಬೇಡಿಕೆಯನ್ನು ನಾನು ಅನುಮೋದಿಸುತ್ತಾ ಕೆಲವು ಮಾತುಗಳನ್ನಾಡಲು ಇಚ್ಛಿಸುತ್ತೇನೆ. ದೇಶದಲ್ಲಿ ಈ ವಿದ್ಯಾಭ್ಯಾಸದ ವಿಷಯದಲ್ಲಿ ಅನೇಕ ಸಮಿತಿಗಳನ್ನು ಮಾಡಿದರು. ಹಿಂದೆ ಸಿ. ಆರ್. ರೆಡ್ಡಿಯವರ ಕಮಿಟಿ ಎಜುಕೇಷನಲ್ ರೀಫಾರ್ಮ್ಸ್ ಕಮಿಟಿ ಹೀಗೆ ಅನೇಕ ತಜ್ಞರನ್ನು ಒಳಗೊಂಡಂಥ ಕಮಿಟಿಗಳು ವಿದ್ಯಾಭ್ಯಾಸದ ವಿಷಯದಲ್ಲಿ ಅನೇಕ ಹೊಸದಾಗಿರತಕ್ಕಂಥ ಸಲಹೆಗಳನ್ನುಳ್ಳ ತಮ್ಮ ವರದಿಗಳನ್ನು ಒಪ್ಪಿಸಿದರು. ವಿದ್ಯಾಭ್ಯಾಸದ ವಿಷಯದಲ್ಲಿ ಪರಿಣಿತರಾಗಿರತಕ್ಕವರು ವಿದ್ಯಾವಂತರಾಗಿರತಕ್ಕವರು ವಿದ್ಯಾಭ್ಯಾಸದ ವಿಷಯದಲ್ಲಿ ಮಾಡಿರುವ ಸಲಹೆ ಪ್ರಾಮುಖ್ಯವೇ ಹೊರತು ವಿದ್ಯಾಭ್ಯಾಸದ ಇಲಾಖೆಯಲ್ಲಿ ರಾಜಕೀಯಕ್ಕೆ ಸಿಕ್ಕಿ ಕಲಸ ಮಾಡುವಂತಾದರೆ ಅದರಿಂದ ಖಂಡಿತ ವಿದ್ಯಾಭ್ಯಾಸದ ಪ್ರಗತಿ ಆಗಲಾರದು. ಆದುದರಿಂದ ವಿದ್ಯಾಭ್ಯಾಸದ ವಿಷಯದಲ್ಲಿ ತಜ್ಞರ ವಿಷಯ ಮುಖ್ಯವಾದುದು. ರಾಜಕೀಯ ಕೈವಾಡ ಇರಬಾರದು. ಇದು ನನ್ನ ಮೊದಲನೆ ಪ್ರಾರ್ಥನೆ.

ನಮ್ಮ ಈ ವಿಸ್ತಾರ ದೇಶವಾದ ಮೈಸೂರಿನಲ್ಲಿ ಮೂರನೆಯ ಯೋಜನೆಯಲ್ಲಿ 200 ಹೈಸ್ಕೂಲುಗಳನ್ನು ಮಾಡಬೇಕೆಂದು ಒಂದು ಮಿತಿ ಇದೆ. ಆದರೆ ನಮ್ಮ ಸರ್ಕಾರದವರು ಹಳ್ಳಿಗಳಲ್ಲಿರತಕ್ಕಂತಹ ಮಕ್ಕಳು ವಿದ್ಯಾವಂತರಾಗಬೇಕೆಂಬ ಒಂದು ದೃಷ್ಟಿಯಿಂದ ಈ ಸಂಖ್ಯೆಯನ್ನು ದ್ವಿಗುಣ ಮಾಡಿರುವುದು ಬಹಳ ಸಂತೋಷದ ವಿಷಯ. ಆದರೆ ಮೂರು ವರ್ಷಗಳವರೆಗೂ ಈ ಶಾಲೆಗಳಿಗೆ ಗ್ರಾಂಟ್ ಇಲ್ಲ. ಆಮೇಲೆ ಕೊಡತಕ್ಕ ಭರವಸೆಗಳನ್ನು ಆ ಜನರು ಇಟ್ಟುಕೊಂಡಿದ್ದಾರೆ. ಆದರೆ ಮೂರು ವರ್ಷಗಳನಂತರ ಕೂಡ ಸರ್ಕಾರದವರು ಒದಗಿಸತಕ್ಕ ಪ್ರಶ್ನೆ ನಾವು ಸ್ವಲ್ಪ ಯೋಚನೆ ಮಾಡತಕ್ಕ ವಿಷಯವಾಗಿದೆ. ದೇಶದಲ್ಲಿ ಹೆಚ್ಚಾಗಿ ಖಾಸಗೀ ಸ್ಕೂಲುಗಳನ್ನು ಮಾಡಬೇಕು, ಅದರಿಂದ ವಿದ್ಯಾಭ್ಯಾಸ ಒಳ್ಳೇ ಅಭಿವೃದ್ಧಿಯಾಗಬೇಕು ಎಂಬ ಒಂದು ಅಭಿಪ್ರಾಯವನ್ನು ನಮ್ಮ ಸರ್ಕಾರದವರು ಇಟ್ಟುಕೊಂಡಿರಬೇಕು. ನಿನ್ನೆಯ ಪ್ರಶ್ನೋತ್ತರ ಸಮಯದಲ್ಲಿ ಒಂದು ವಿಷಯವನ್ನು ಹೇಳಿದರು. ಖಾಸಗೀ ಸ್ಕೂಲುಗಳಲ್ಲಿ ನಡೆಯತಕ್ಕ ವಿದ್ಯಾಭ್ಯಾಸ ಮತ್ತು ಖಾಸಗೀ ಸ್ಕೂಲ್ ಆಡಳಿತದ ವಿಷಯದಲ್ಲಿ ಸರ್ಕಾರದವರು ಹೆಚ್ಚಿನ ನಿಗ ತೆಗೆದುಕೊಳ್ಳದೆ ಹೋದರೆ ಈ ಖಾಸಗೀ ಸ್ಕೂಲುಗಳು ಏನಿವೆ, ಅವುಗಳು ಜನಗಳಿಗೆ ಒಂದು ತೊಂದರೆ ಕೊಡತಕ್ಕ ಸಂಸ್ಥೆಗಳಾಗುತ್ತವೆಯೇ ಹೊರತು ನಿಜವಾಗಿ ದೇಶದಲ್ಲಿ ಯಾವ ಉದ್ದೇಶವೂ ಇವುಗಳಿಂದ ಸಾಧನೆಯಾಗಲಾರದು ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಅನೇಕ ಸ್ಕೂಲುಗಳಲ್ಲಿ ಕೆಲಸಮಾಡತಕ್ಕ ಉಪಾಧ್ಯಾಯರುಗಳ ಪರಿಸ್ಥಿತಿ ತುಂಬಾ ಚಿಂತಾಜನಕವಾಗಿದೆ, ಎಂದು ನಾನು ತಿಳಿದುಕೊಂಡಿದ್ದೇನೆ. ಎಲ್ಲಾ ಸ್ಕೂಲುಗಳನ್ನು ಖಾಸಗಿ

ಯಾಗಿ ನಡೆಸತಕ್ಕ ಕಾಲದಲ್ಲಿ ಅಲ್ಲಿ ತುಂಬಾ ರಾಜಕೀಯ ಮತ್ತು ಜಾತೀಯತೆಯ ಪ್ರಶ್ನೆಗಳಿಗೆ ಅವಕಾಶ ಉಂಟಾಗಿ ನಿಜವಾಗಿ ಯಾರು ಅರ್ಹರಾಗಿದ್ದಾರೆ, ಯಾರು ಯೋಗ್ಯರಾಗಿದ್ದಾರೆ, ಅವರಿಗೆ ದೊರಕದೆ ಹೋಗುತ್ತದೆ. ಇಂದು ಅಲ್ಲಿನ ಸ್ಥಿತಿಯನ್ನು ನೋಡಿದರೆ ಒಂದು ಸ್ವಾರ್ಥಕ್ಕೆ ಉಪಯೋಗಿಸಿಕೊಳ್ಳತಕ್ಕ ಪರಿಸ್ಥಿತಿ ಉಂಟಾಗಿದೆ ಎಂದು ಹೇಳದೆ ವಿಧಿಯಿಲ್ಲ.

ನಿನ್ನೆ ಪ್ರಶ್ನೆ ಕೇಳಿದಾಗ ಸುಮಾರು 3 ಲಕ್ಷ 85 ಸಾವಿರ ರೂಪಾಯಿಗಳನ್ನು ಉಪಾಧ್ಯಾಯರು ಗಳಿಂದ ವಸೂಲು ಮಾಡಿ ಅದನ್ನು ಉಪಾಧ್ಯಾಯರುಗಳ ಅರ್ಹರಾದ ಮಕ್ಕಳಿಗೆ ಬಹುಮಾನ ಹಾಗೂ ವಿದ್ಯಾರ್ಥಿ ವೇತನಗಳನ್ನು ಕೊಡುವುದಕ್ಕಾಗಿ ಉಪಯೋಗಿಸಿಕೊಳ್ಳುತ್ತಾರೆ ಎಂದು ಹೇಳಿದ್ದಾರೆ. ಇದನ್ನು ನೋಡಿದರೆ, ಖಾಸಗೀ ಶಾಲೆಗಳನ್ನು ನಡೆಸತಕ್ಕವರು ಇಂತಹ ರೀತಿಯಲ್ಲಿ ಉಪಾಧ್ಯಾಯರುಗಳಿಂದ ವಸೂಲು ಮಾಡಿದರೆ ಪರಿಣಾಮ ಏನಾದೀತು ಎಂಬುದನ್ನು ನಾವು ಯೋಚನೆ ಮಾಡಬೇಕು. ಮತ್ತು ಸರ್ಕಾರದವರು ಕೆಲವು ಶಾಲೆಗಳಿಗೆ 85 ಪರ್‌ಸೆಂಟ್ ಸಹಾಯ ದ್ರವ್ಯವನ್ನು ಕೊಡುತ್ತಾರೆ. ಇನ್ನು ಕೆಲವು ಶಾಲೆಗಳಿಗೆ 100ಕ್ಕೆ 100 ಭಾಗ ಕೊಡುತ್ತಾರೆ. ಇದಕ್ಕೆ ಬದಲು ಪೂರ್ತಿಯಾಗಿ ಸರ್ಕಾರದವರೇ ವಹಿಸುವುದು ಸೂಕ್ತ ಎಂದು ನಾನಾದರೂ ಹೇಳುತ್ತೇನೆ. ಇವತ್ತು ಬಂಗಾಳದಲ್ಲಿ ನಾವು ನೋಡುವುದಾದರೆ, ಕೆಲವು ಖಾಸಗೀ ಶಾಲೆಗಳನ್ನು ಸರ್ಕಾರದವರೇ ಸ್ವಾಧೀನಕ್ಕೆ ತೆಗೆದುಕೊಂಡು ನಡೆಸುತ್ತಿದ್ದಾರೆ. ಆದರೆ ನಮ್ಮ ಸರ್ಕಾರವನ್ನು ನೋಡುವುದಾದರೆ, ನಮ್ಮ ವಿದ್ಯಾ ಇಲಾಖೆಯ ಮಂತ್ರಿಗಳು ಹೇಳುತ್ತಾರೆ, ನಮ್ಮ ಶಾಲೆಗಳನ್ನು ಕಾಲೇಜುಗಳನ್ನು ಯಾರಾದರೂ ಸಾರ್ವಜನಿಕರು ವಹಿಸಿಕೊಳ್ಳುವುದಾದರೆ ನಾವು ಅವರಿಗೆ ಬಿಟ್ಟು ಕೊಡುತ್ತೇವೆ ಎಂದು ಇದನ್ನು ನೋಡಿದರೆ ನಮಗೆ ಬಹಳ ಬೇಸರವಾಗುತ್ತದೆ. ಅದರಿಂದ ವಿದ್ಯಾಭ್ಯಾಸ ಸುಧಾರಣೆಯಾಗಲಾರದು ಎಂದು ನಾನು ತಿಳಿದುಕೊಂಡಿದ್ದೇನೆ.

ನಮ್ಮ ಈ ವರ್ಷದ ಆಯವ್ಯಯ ಪಟ್ಟಿಯನ್ನು ನೋಡುವುದಾದರೆ, 25 ಹೈಸ್ಕೂಲು ಕಟ್ಟಡಗಳಿಗೆ ಹಣವನ್ನು ಒದಗಿಸಿದ್ದಾರೆ. ಅದರ ವಿಷಯ ನಾವೇನಾದರೂ ಮಾತನಾಡಿದರೆ, ಅದು ಅನೀತಿಯಾಗುತ್ತದೆ ಮತ್ತು ಸರ್ಕಾರದವರಿಗೆ ಸ್ವಲ್ಪ ವ್ಯಸನವಾಗುವುದು. ಇದರಲ್ಲಿ ಕೆಲವು ಜಿಲ್ಲೆಗಳಲ್ಲಿ ಹೆಚ್ಚಿಗೆ ಒದಗಿಸಿದ್ದಾರೆ, ಕೆಲವು ಜಿಲ್ಲೆಗಳಲ್ಲಿ ಒದಗಿಸಲೇ ಇಲ್ಲ. ಆದರೆ ಈ 25 ಸ್ಕೂಲುಗಳಲ್ಲಿ ಒಂದು ಹೈಸ್ಕೂಲು ಒಂದು ಭಾಗಕ್ಕೆ ಸೇರಿದೆ, ಇನ್ನುಳಿದ 24 ಇನ್ನೊಂದು ಭಾಗಕ್ಕೆ ಸೇರಿದೆ. ಇದನ್ನೆಲ್ಲಾ ನೋಡಿದರೆ, ನಾವು ಚುನಾಯಿತರಾಗಿ ಬಂದಂತಹ ಸ್ಥಳಗಳಲ್ಲಿರುವ ಜನರಿಗೆ ನಾವು ಏನು ಉತ್ತರ ಕೊಡಬೇಕೆನ್ನುವುದನ್ನು ನಾವು ಇಂದು ಯೋಚನೆ ಮಾಡಬೇಕಾಗಿದೆ. ಇದನ್ನು ನ್ಯಾಯವಾದ ರೀತಿಯಿಂದ, ರಾಜ್ಯದ ಎರಡೂವರೆ ಕೋಟಿ ಜನರ ಮತ್ತು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಆಯವ್ಯಯ ಪಟ್ಟಿಯಲ್ಲಿ ನ್ಯಾಯವಾದ ರೀತಿಯಲ್ಲಿ ಹಣವನ್ನು ಒದಗಿಸುವುದು ಒಳ್ಳೆಯದು ಮತ್ತು ಇದರಲ್ಲಿ ಇಂತಹ ಚಿಕ್ಕ ಭಾವನೆಗಳಿಗೆ ಅವಕಾಶ ಇರಬಾರದು ಎಂದು ಹೇಳುತ್ತೇನೆ.

ಇನ್ನೊಂದು ವಿಷಯ ಹೇಳುವುದಾದರೆ, ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಉಪಾಧ್ಯಾಯರುಗಳಿಗೆ ಬೇಸಿಕ್ ಟ್ರೈನಿಂಗ್ ಸಂಸ್ಥೆಗಳನ್ನು ಮಂಜೂರು ಮಾಡಿದ್ದಾರೆ. ಸಿಂಧನೂರು, ಕಮಲಾಪುರ, ಚಿಕ್ಕನಹಳ್ಳಿ, ಮೊದಲಾದ ಕಡೆಗಳಲ್ಲಿ ಸಂಸ್ಥೆಯ ಕೆಲಸ ಪೂರ್ತಿಯಾದರೂ ಚಿಕ್ಕಮಗಳೂರಿನಲ್ಲಿ ಸೆಂಟ್ರಲ್ ಗ್ರಾಂಟ್ ಕೊಟ್ಟರೂ ಒಂದು ಕಟ್ಟಡ ಕಟ್ಟದೆ ಇರುವುದರಿಂದ ಅಲ್ಲಿನ ಜನರಿಗೆ ತುಂಬಾ ಅನ್ಯಾಯವಾಗಿದೆ. ಸರ್ಕಾರದವರು ದಯೆಯಿಟ್ಟು ಇದನ್ನು ಪರಿಶೀಲಿಸಬೇಕೆಂದು ಇಲ್ಲಿ ಹೇಳುತ್ತೇನೆ. ಹಾಗೇನೆ, ಪಾಲಿಟೆಕ್ನಿಕ್ ಹಾಸ್ಟೆಲ್ ವಿಚಾರದಲ್ಲೂ ಕೂಡ ಇನ್ನೂ ಏನೂ ಕ್ರಮ ತೆಗೆದುಕೊಳ್ಳದಿರುವುದು ತುಂಬಾ ವಿಷಾದಕರ. ಮೊನ್ನೆ ಒಂದು ಪ್ರಶ್ನೆಯಲ್ಲಿ ಹಾಸ್ಟೆಲುಗಳಿಲ್ಲದೆ ಹುಡುಗರಿಗೆ ತೊಂದರೆಯಾಗುವುದಿಲ್ಲವೇ ಎಂದು ಕೇಳಿದಾಗ ಮಾನ್ಯ ಮಂತ್ರಿಯವರು ಉತ್ತರದಲ್ಲಿ ತೊಂದರೆಯಾಗುವುದಿಲ್ಲ ಎಂದು ಹೇಳಿದರು. ಆದರೆ ಜಿಲ್ಲೆಯ ಹೊರಗಡೆಯಿಂದ ಬರುವ ಹಳ್ಳಿಯ ವಿದ್ಯಾರ್ಥಿಗಳಿಗೆ ಇಲ್ಲಿ ಬಂದು ವಿದ್ಯಾಭ್ಯಾಸ ಮಾಡಲು ತುಂಬಾ ಕಷ್ಟವಾಗುತ್ತದೆ. ಇದರಿಂದ ಅದನ್ನು ಕೂಡ ತೀವ್ರವಾಗಿ ಯೋಚನೆ ಮಾಡಬೇಕೆಂದು ನಾನು ಸರ್ಕಾರದಲ್ಲಿ ಪ್ರಾರ್ಥನೆ ಮಾಡುತ್ತೇನೆ. ಮತ್ತು ವಿದ್ಯಾ ಇಲಾಖೆಯವರು ವಿದ್ಯಾಭ್ಯಾಸದಲ್ಲಿ ಅನೇಕ ವಿಧವಾದಂತಹ ಪ್ರಯೋಗಗಳನ್ನು ಮಾಡುತ್ತಾರೆ. ಅದರಲ್ಲಿ ಮಲ್ಟಿಪರ್ಪಸ್ ಒಂದು ಪ್ರಯೋಗ. ಚಿಕ್ಕಮಗಳೂರು ಜಿಲ್ಲೆಗೆ ಸಾಧಾರಣ ಮೂರು ಲಕ್ಷ ರೂಪಾಯಿ ಬೆಲೆ ಬಾಳುವಂತಹ ಲೇತ್ ಮೇಶಿನ್ ಒದಗಿಸಿದ್ದಾರೆ. ನಾನು ಒಂದು ದಿವಸ ಕೇಳಿದಾಗ, ಮಾನ್ಯ ಮಂತ್ರಿಗಳು ಉತ್ತರ ಕೊಟ್ಟರು ಅದು ಕೆಡದ ಹಾಗೆ ಅದಕ್ಕೆ ಎಣ್ಣೆ ಹಾಕಿ ಇಡುತ್ತೇವೆ ಎಂದು. ಹೀಗೆ ಈ ತರಹ ಮೂರು ಲಕ್ಷ ರೂಪಾಯಿ ಹಣವನ್ನು ವ್ಯರ್ಥವಾಗಿ ಖರ್ಚು ಮಾಡಿದರೆ ಅದರಿಂದ ಏನು ಪ್ರಯೋಜನ ವಾಗುತ್ತದೆ ಎಂದು ನಾನಾದರೂ ಕೇಳಬಯಸುತ್ತೇನೆ. ಇದನ್ನು ಸರಿಯಾದ ರೀತಿಯಲ್ಲಿ ವಿಮರ್ಶೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

(ಶ್ರೀಮತಿ ಬಿ. ಎಲ್. ಸುಬ್ಬಮ್ಮ)

ಇನ್ನು ಸರ್ಕಾರದವರು ಹೈಸ್ಕೂಲುಗಳಲ್ಲಿ 11ನೇ ಸ್ಟ್ಯಾಂಡರ್ಡ್ ಪ್ರಾರಂಭ ಮಾಡಿದ್ದಾರೆ. ಇದು ಒಳ್ಳೆಯದು. ಆದರೆ 11ನೆಯ ಸ್ಟ್ಯಾಂಡರ್ಡ್‌ಗೆ ಪಾಠ ಹೇಳತಕ್ಕ ಉಪಾಧ್ಯಾಯರುಗಳ ವಿಷಯದಲ್ಲಿ ನಾವು ಯೋಚನೆ ಮಾಡಬೇಕು. ಎಂ.ಎ.,ಎಂ.ಎಸ್.ಸಿ. ಯಾದ ಮತ್ತು ಮೊದಲನೇ ತರಗತಿಯಲ್ಲಿ ಬಂದಂತಹ ಉಪಾಧ್ಯಾಯರುಗಳು ಇರುವಂತಹ ಕಾಲೇಜುಗಳಲ್ಲೇ ಪರೀಕ್ಷೆಗಳಲ್ಲಿ ಉತ್ತೀರ್ಣರಾಗತಕ್ಕಂತಹ ಸಂಖ್ಯೆಗಳನ್ನೇ ನೋಡಿದರೆ, ಅದು ಬಹಳ ಕಡಿಮೆಯಾಗಿದೆ. ಆದರೆ 11 ನೇ ಸ್ಟ್ಯಾಂಡರ್ಡನ್ನು ಮಾಡಿ ಅದಕ್ಕೆ ಸರಿಯಾದ ಉಪಾಧ್ಯಾಯರುಗಳು ಇಲ್ಲದೆ ಇದ್ದರೆ, ಸರ್ಕಾರಕ್ಕೆ ಅನಾವಶ್ಯಕವಾದ ಖರ್ಚಾಗುತ್ತದೆ, ಮತ್ತು ಸರ್ಕಾರದ ಉದ್ದೇಶ ನೆರವೇರುವುದಿಲ್ಲ. ಈ ವಿಷಯದಲ್ಲಿ ಸರ್ಕಾರದವರು ಖಂಡಿತವಾಗಿಯೂ ಯೋಚನೆ ಮಾಡಿ ಇದಕ್ಕೆ ಸರಿಯಾದ ವ್ಯವಸ್ಥೆಯಾಗುವಂತೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದಕ್ಕೋಸ್ಕರ ದೇಶದಲ್ಲಿರತಕ್ಕ, ತಜ್ಞರಾದವರ ಅಭಿಪ್ರಾಯಗಳನ್ನು ಹಾಗೂ ವಿದ್ಯಾವಂತ ಶಿಕ್ಷಕರ ಅನುಭವವನ್ನೂ ತೆಗೆದುಕೊಂಡು, ದೇಶದ ಹಿತ ದೃಷ್ಟಿಯಿಂದ, ಸುಧಾರಿಸಬೇಕೆಂದು ನಾನು ಹೇಳುತ್ತೇನೆ.

ಇನ್ನು ಸ್ಕೂಲುಗಳಲ್ಲಿರತಕ್ಕ ಉಪಾಧ್ಯಾಯರುಗಳನ್ನು ನೀವು ಧಾರವಾಡಕ್ಕೆ ಹೋಗಿ, ಎಂದು ಹೇಳುವುದರಿಂದ, ಅದರಲ್ಲೂ ಮಹಿಳೆಯರಿಗೆ ತುಂಬಾ ಅನಾನುಕೂಲವಾಗುತ್ತದೆ. ಇತ್ತೀಚೆಗೆ ಚಿಕ್ಕಮಗಳೂರಿನ ಐದು ಜನ ಮಹಿಳೆಯರಿಗೆ ಗುಲ್ಬರ್ಗಕ್ಕೆ ಹೋಗಿ ಎಂದು ಹೇಳಿದ್ದಾರೆ. ಸರ್ಕಾರದವರಿಗೆ ಈ ವಿಷಯದಲ್ಲಿ ಎಷ್ಟೋ ಬಾರಿ ಹೇಳಿದ್ದೇನೆ. ಮಹಿಳೆಯರಿಗೆ ಸ್ಥಳೀಯ ಸಂಸ್ಥೆಗಳಲ್ಲೇ ಅವಕಾಶ ಕೊಡಬೇಕೆಂದು. ಸರ್ಕಾರದವರು ಇನ್ನು ಮುಂದಾದರೂ ಈ ತರಹ ಮಾಡಬಾರದು, ಎಂದು ಹೇಳುತ್ತೇನೆ.

ಇನ್ನು ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಹಿಂದೆ ಎಲ್ಲಾ ಸಬ್ಜೆಕ್ಟುಗಳಲ್ಲೂ ಒಂದೇ ಸಾರಿ ಪಾಸ್ ಮಾಡಬೇಕೆಂದು ಇತ್ತು. ಆದರೆ ಈಗಿನ ಪರೀಕ್ಷೆಯು ಒಂದು ಇನ್‌ಸ್ಟಾಲ್‌ಮೆಂಟ್ ಪರೀಕ್ಷೆಯಾಗಿದೆ. ಇದರಿಂದ ವಿದ್ಯಾರ್ಥಿಗಳು ಅಕ್ಷರಸ್ಥರಾಗುತ್ತಾರೆಯೇ ಹೊರತು ವಿದ್ಯಾವಂತರಾಗುವುದಿಲ್ಲ.

ಮತ್ತು ದೇಶದಲ್ಲಿರುವ ಕಾಲೇಜುಗಳಲ್ಲಿ ಎಲ್ಲಾ ಕಡೆಗಳಲ್ಲೂ ಒಂದೇ ತೆರನಾದ ಫೀಸನ್ನು ವಸೂಲು ಮಾಡಬೇಕು. ನಾನಾ ಕಡೆಗಳಲ್ಲಿ ನಾನಾ ತರದ ಫೀಸನ್ನು ವಸೂಲು ಮಾಡುವುದು ಸರಿಯಲ್ಲ. ಇದರಿಂದ ಇಂದು ವಿದ್ಯಾಭ್ಯಾಸ ಎಂಬುದು ಒಂದು ಮಾರಾಟದ ರೀತಿ ನಡೆಯುತ್ತಾ ಇದೆ; ಇದು ಖಂಡಿತವಾಗಿಯೂ ನ್ಯಾಯವಾದುದಲ್ಲ. ಇನ್ನು ಬ್ಯಾಕ್‌ವರ್ಡ್ ಕ್ಲಾಸ್‌ನ ವಿದ್ಯಾರ್ಥಿಗಳು ಫೇಲಾದರೂ ಕೂಡ ಸ್ಕಾಲರ್‌ಶಿಪ್ ಕೊಡಬೇಕೆಂದು ಏನು ಇದೆ, ಆ ರೀತಿ ಕೊಡುವುದು ನ್ಯಾಯವಲ್ಲ. ಯಾರಿಗೆ ಅರ್ಹತೆ ಇದೆಯೋ, ಯಾರಿಗೆ ಚೆನ್ನಾಗಿ ನಂಬರು ಬರುತ್ತದೆಯೋ ಅವರಿಗೆ ಕೊಟ್ಟು, ಅಂಥವರಿಗೆ ಒಂದು ಉತ್ತೇಜನವನ್ನು ಕೊಡುವುದು ಬಹಳ ಒಳ್ಳೆಯದು ಎಂದು ನಾನು ಹೇಳಲಿಚ್ಛಿಸುತ್ತೇನೆ. ವಿದ್ಯಾಭ್ಯಾಸದ ಇಲಾಖೆಯಲ್ಲಿ ಆ ತರಹ ಹೆಚ್ಚಿನ ಸಾಮರ್ಥ್ಯತೆಯನ್ನು ಹೊಂದಿದವರಿಗೆ ಅವಕಾಶವನ್ನು ಕೊಡತಕ್ಕದ್ದು ಒಳ್ಳೆಯದು.

ಈಗ ಪದವೀಧರರಾಗಿರತಕ್ಕ ಅಧ್ಯಾಪಕರ ಬಡ್ತಿ ವಿಷಯದಲ್ಲಿ ಜಾಗ್ರತೆ ಪುನರಾಲೋಚನೆ ಮಾಡಬೇಕು. ಸೀನಿಯಾರಿಟಿ ಎನ್ನುವುದು ನಮ್ಮ ಮೈಸೂರು ದೇಶ ವಿಸ್ತಾರವಾದ ಮೇಲೆ ವಿದ್ಯಾಭ್ಯಾಸ ಇಲಾಖೆಯಲ್ಲಿ ಕೂಡ ಅಸಮಾಧಾನವನ್ನುಂಟುಮಾಡಿದೆ. ಹೀಗೆ ಮಾಡತಕ್ಕದ್ದು ಸರಿಯಲ್ಲ. ನಮ್ಮ ವಿದ್ಯಾ ಮಂತ್ರಿಗಳು ಕನ್ನಡಕ್ಕೆ ಪ್ರೋತ್ಸಾಹ ಕೊಡುತ್ತೇವೆಂದು ಹೇಳುತ್ತಾರೆ. ಎಸ್. ಎಸ್. ಎಲ್. ಸಿ. ತರಗತಿಗಳಿಗೆ ಗೊತ್ತು ಮಾಡಿರುವ ಕನ್ನಡ ಪುಸ್ತಕಗಳನ್ನು ನೋಡಿದರೆ ಕನ್ನಡ ಭಾಷೆ ಹಿಂದಿ, ಮರಾಠಿ, ಉರ್ದು ಈ ಭಾಷೆಗಳೆಲ್ಲ ಸೇರಿರುವ ಭಾಷೆಯಾಗಿದೆ. ಸ್ವಚ್ಛವಾದ ಕನ್ನಡ ಭಾಷೆಯನ್ನು ಉಪಯೋಗಿಸುವಂತೆ ಸರ್ಕಾರದವರು ಕೂಡ ಪ್ರಯತ್ನಮಾಡಬೇಕೆಂದು ಸರ್ಕಾರಕ್ಕೆ ತಿಳಿಸುತ್ತೇನೆ.

ಹಳ್ಳಿಗಳಲ್ಲಿರುವ ಅಧ್ಯಾಪಕರಿಗೆ ವಾಸದ ಮನೆಗಳನ್ನು ಒದಗಿಸಿಕೊಡಬೇಕೆಂದು ಹೇಳಿ ನನ್ನ ನಾಲ್ಕು ಮಾತನ್ನು ಮುಗಿಸುತ್ತೇನೆ.

Sri R. S. HEGDE (Honnavar).—Mr. Speaker, Sir, supporting today's demand, I should like to say with all said and done, education is the pride of the State. With three universities functioning and with free primary and secondary education, carrying the torch of knowledge to the very doors of the poorest of the poor. Government has reiterated its

belief and faith in Democracy that education is the very foundation and is undoubtedly the most fundamental part of a planned programme in a democratic set up. Government will be spending nearly one-fourth of its total revenue on education. Even if one makes a comparative study of the various budgetary patterns for education among the southern zonal States of the country, the *per capita* expenditure by this State does not fall short over those of other States in the country. Though the physical target in the Third Plan in Primary Education is not reached, in the field of secondary education, Government have exceeded the target; this Sir, is due to the incentive afforded by the Government and co-operation by the education minded people that have been responsible for the spread of secondary education throughout the nook and corner of the State. Sir, instead of establishing more schools now, it is time to consolidate and stablise the ones already started. Sir, primary, secondary and collegiate education are the three branches of educational development of the State and claims of any one of these cannot be neglected. They have to grow simultaneously. Government have been giving equal attention to all within the budgetary pattern of the State. The percentage of literacy recorded is encouraging and praiseworthy. Unfortunately, this rapid progress in the growth of educational institutions has, as suspected by educational experts, may result in lack of qualified teachers, equipment, textbooks, buildings and administrative efficiency. In fact, an Education Commission has been constituted by the Centre covering all aspects of edueation, and they have been asked to submit a comprehensive or draw up a comprehensive plan for the period between 1966 and 1981. The working group on education have laid great stress in achieving qualitative improvement at all levels. Education planners have been guided by the consideration that while access to edueation at all levels must be broadened and necessary expansion provided for all programmes, they have stressed improvement in quality so that education meets the need of a technologically developing country. Science teaching, reduction of disparity in the educationally developed, as between boys and girls, crash programme for training teachers, improvement of standards of teacher education, the improvement of, Sir, emoluments and service conditions of teachers at all levels have been accepted as the normal cardinal objectives.

[MR. DEPUTY SPEAKER in the Chair.]

The imporatance of teachers being given other benefits besides the triple benefit scheme like housing and other facilities of professional growth have been suggested, Setting up of science institutions where they will be concerned with curriculum and initiating measures for better laboratory work and opening of science clubs at the secondary schools where people can tackle special projects should be seriously contemplated with a view to improve the study and quality of science education. With this end in view Government have taken steps to decentralise the administrative machinery in education by proposing to constitute a special board for the conduct of SSLC education, proposals to have a

(SRI R. S. HEGDE)

district board for the administration of secondary and primary education and trying to have......

SRI G. V. GOWDA (Palya).—Board for examinations—the D. P. I. is replaced by this Board.

SRI R. S. HEGDE.—So far the examinations are being conducted by the Department. Now a special board is proposed to be constituted to decentralise to that extent the power of examining the various examiners, also to have a district board for the administrative of secondary and primary education, in trying to have a common syllabus for all higher secondary schools and by deputing teachers for post-graduate courses. In improving the lot of teachers at all levels of education, it is bound to give better results in examinations, which, in fact, will be an indirect savings to the State exchequer. Apart from the question of cost of living index point of view, Government have been spending about, perhaps, more than 500 rupees on every college student and 50 to 100 rupees on every boy or girl at the secondary stage. Failures in the examination will sustain loss to the exchequer. Improving the lot of teachers will result in qualitative education at all levels. Convent and Anglo-Indian schools must be treated on par with other secondary schools, as they have been doing good service in giving qualitative education.

Finally, Sir, I feel that Government should take measure in preventing or curing the student indiscipline which has been rampant these years. The Central Ministry of Education, specially the Central Minister for Education, has analysed and said that student indiscipline has been due to great leisure given to the students—that means holidays. So, the Central Ministry has suggested that instead of keeping idle the brains of the students, which is almost a devil's workshop, students must be provided with developmental work in the vacation so that their time can be spent usefully with developmental activities. About two years back, the Chief Minister of the State also said that students will be provided with some developmental works. But, unfortunately, the scheme has not been pushed through. Sir, I make the following suggestions to improve the tone, quality and the lot of teachers. Triple benefit scheme should be extended to all primary school teachers. Cheap design school buildings costing thousand to thousand five hundred rupees must be contemplated so that the problem of primary school buildings can be solved. Thirdly, the lot of Hindi teachers in secondary schools should be improved and they must be given graduate salary if they are qualified, and even if there is no full load of work in Hindi, they should be treated as full time teachers if they take other subjects.

2-30 P.M.

Fourthly this year many of the secondary schools could not appoin graduate teachers on account of short supply of graduates. Inevitably the

had to appoint undergraduates and the department has turned down the proposals of various managements to recognise these teachers for the purpose of grant. In view of the peculiar circumstance, the Government will kindly take note of the short supply of graduates and even for undergraduates in high schools their salary must be made admissible for the purpose ef giving grant. These are my suggestions.

Thank you very much for the opportunity given.

ಶ್ರೀ ಕೆ. ಎಸ್. ಸೂರ್ಯನಾರಾಯಣರಾವ್ (ಮೈಸೂರು ಸಿಟಿ).—ಮಾನ್ಯ ಅಧ್ಯಕ್ಷರೇ, ಇವತ್ತು ವಿದ್ಯಾ ಖಾತೆಯ ವಿಚಾರದಲ್ಲಿ ಮಾತನಾಡುತ್ತಾ ಕೆಲವು ವಿಷಯಗಳನ್ನು ನಾನು ಹೇಳಬೇಕೆಂದಿದ್ದೇನೆ. ಪ್ರೈಮರಿ ವಿಧ್ಯಾ ಕ್ಷೇತ್ರದಲ್ಲಿರುವ ಸೆಕೆಂಡರಿ ವಿಧ್ಯಾಭ್ಯಾಸ ಅಥವಾ ಕೊಲಿಜಿಯೇಟ್ ಭಾಗದಲ್ಲಿರುವ ವಿಧ್ಯಾಭ್ಯಾಸ-ಇವುಗಳ ದರ್ಜೆ ಕಡಿಮೆಯಾಗಿದೆ ಎಂಬ ಕೂಗು ಈ ದೇಶದಲ್ಲಿ ಕೇಳುತ್ತಾ ಇದೆ. ಈ ಕೂಗಿಗೆ ಕಾರಣವೇನೆಂಬುದನ್ನು ಯೋಚನೆಮಾಡಿದ್ದರೆ ಎಷ್ಟೋ ಈ ವಿದ್ಯಾ ಇಲಾಖೆಯಲ್ಲಿ ಪ್ರಗತಿ ಯನ್ನು ಕಾಣಬಹುದ್ದಾಗಿತ್ತು. ಆದರೆ ಈ ವಿದ್ಯಾಭ್ಯಾಸ ಇಲಾಖೆಗೆ ಆ ರೀತಿ ಯೋಚನೆಮಾಡುವುದಕ್ಕೆ ಪುರು ಷತ್ತು ಇಲ್ಲವೆಂದು ಕಾಣುತ್ತದೆ. ಅದರಿಂದಲೇ ದಿನೇದಿನೇ ಒಂದು ಹುತ್ತ ಬೆಳೆದುಕೊಂಡ ಹಾಗೆ ಇದು ಬೆಳೆದುಕೊಂಡು ಬರುತ್ತಾ ಇದೆ. ಒಳಗಡೆ ಟೊಳ್ಳು ಇದ್ದ ಹಾಗೆ...

ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಅದರೊಳಗೆ ಹಾವುಗಳೂ ಸೇರಿವೆ.

ಶ್ರೀ ಎಸ್. ಆರ್. ಕಂಠಿ (ವಿದ್ಯಾ ಶಾಖೆಯ ಸಚಿವರು).—ಹಾವುಗಳೇ !

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್.—ಆ ಹಾವುಗಳು ಹೇಗೆ ಸೇರಿಕೊಂಡಿವೆ ಎಂದು ಹೇಳಿದರೆ ಸರ್ಕಾರದಲ್ಲಿರತಕ್ಕ ಮಂತ್ರಿಗಳಿಗೆ ಇದರ ಮೇಲೆ ಒಂದು ಹತೋಟಿ ತಪ್ಪಿಹೋಗಿ ಅವರಿಗೆ ಬೇಕಾದ ಹಾಗೆ ವಿಧ್ಯಾಧಿಕಾರಿಗಳ ಕೈಲಿ ಕೆಲಸಮಾಡಿಸಿಕೊಂಡು ಈ ಇಲಾಖೆಯ ಆಡಳಿತವನ್ನು ನಡೆಸಿ ಕೊಂಡು ಬರುತ್ತಿದ್ದಾರೆ. ಅವರೇ ಹಾವುಗಳು, ಇವರೇ ಹುತ್ತದ ಹಾಗೆ ಬೆಳೆಯುತ್ತಿದ್ದಾರೆ. ಈಗಿನ ಪರಿಸ್ಥಿತಿ ಹೀಗಾಗಿದೆ.

ಇನ್ನು ವಿಧ್ಯಾಭ್ಯಾಸ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ಹುಡುಗರಲ್ಲಿ ವಿಧ್ಯಾಭ್ಯಾಸ ಮಟ್ಟ ಕಡಿಮೆಯಾಗುತ್ತಿದೆಂದು ಕೆಲವರನ್ನು ಸ್ಕೂಲು ಬಿಟ್ಟು ಹೋಗಿ, ಇರತಕ್ಕ ರಿಯಾಯತಿಯನ್ನು ಕಿತ್ತುಹಾಕುತ್ತೇನೆಂಬುದಾಗಿ ವಿದ್ಯಾ ಮಂತ್ರಿಗಳು ಹುಡುಗರನ್ನು ಬೆದರಿಸುವ ಹಾಗೆ ಆಜ್ಞೆಗಳನ್ನು ಮಾಡಿ ವರ್ಷದ ಮಧ್ಯಭಾಗದಲ್ಲಿ ಅವರನ್ನು ಓಡಿಸಿದರೆ ಹೇಗೆ ಅವರ ದರ್ಜೆ ಯನ್ನು ಉತ್ತಮ ಪಡಿಸುವುದಕ್ಕೆ ಸಾಧ್ಯವಾಗುತ್ತದೆ ? ಆದರೆ ವರ್ಷದ ಮೊದಲಿನಲ್ಲಿಯೇ ಇಂತಿಂಥ ಕೋರ್ಸುಗಳನ್ನು ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಹೇಳಿದರೆ ಅವರಿಗೆ ಅರ್ಥವಾಗುತ್ತದೆ. ವರ್ಷದ ಮಧ್ಯಭಾಗದಲ್ಲಿ ಅನೇಕ ಸ್ಕೂಲುಗಳಲ್ಲಿ ಇದರಿಂದಲೇ ಅನೇಕರು ಬಿಟ್ಟು ಹೋಗಿದ್ದಾರೆ. ಅಂತಹ ನಿದರ್ಶನಗಳು ಬೇಕಾದಷ್ಟಿವೆ. ಈ ಬಗ್ಗೆ ನಾನು ಬರೆದು ಕಳುಹಿಸಿದ್ದೇನೆ. ಅವಕ್ಕೆ ಸರ್ಕಾರದವರು ಜವಾಬು ಕೊಡುತ್ತಾರೆಂದು ನಾನು ನಂಬಿದ್ದೇನೆ ವಿದ್ಯಾಭ್ಯಾಸದಲ್ಲಿರುವ ನ್ಯೂನತೆಯನ್ನು ಕಡಿಮೆ ಮಾಡುವುದಕ್ಕೆ ಗ್ರಾಂಟು ಕಡಮೆಮಾಡಿದರೆ ಸರಿಯಲ್ಲ. ಅದಕ್ಕೆ ಬೇಕಾದಷ್ಟು ಒಳ್ಳೆಯಮಾರ್ಗಗಳಿವೆ. ಈಗ ಇವರು ಇಟ್ಟಿರತಕ್ಕ ಪಠ್ಯ ಪುಸ್ತಕಗಳನ್ನು ನೋಡಿ. ಅದರೊಳಗೆ ಯಾವ ರೀತಿಯಲ್ಲಿ ಸ್ಟ್ಯಾಂಡರ್ಡ್ ಮೇಂಟೇನ್ ಮಾಡಬೇಕೋ ಎಂಬುದೇ ಇಲ್ಲ. ಗ್ರೇಡೆಡ್ ಪುಸ್ತಕಗಳನ್ನು ಬಿಟ್ಟು ಅನ್‌ಗ್ರೇಡೆಡ್ ಪುಸ್ತಕ ಗಳನ್ನು ಇಟ್ಟು ಯಾವುದೋ ಒಂದು ಲೆವಲ್ಲಿನಲ್ಲಿ ಪರೀಕ್ಷೆಗಳನ್ನು ಮಾಡುತ್ತಿದ್ದಾರೆ. ಸ್ಟೇಟ್ ಲೆವಲ್ ಮತ್ತು ಡಿಸ್ಟ್ರಿಕ್ಟ್ ಲೆವಲ್‌ನಲ್ಲಿ ಪಬ್ಲಿಕ್ ಪರೀಕ್ಷೆಗಳನ್ನು ಮಾಡುತ್ತಿದ್ದಾರೆಂದು ಬೇರೆ ಹೇಳುತ್ತಿದ್ದಾರೆ. ಪಠ್ಯ ಪುಸ್ತಕಗಳ ವಿಚಾರ ಹೀಗಾಯಿತು.

ಇನ್ನು ಪರೀಕ್ಷೆ ವಿಚಾರವಾಗಿ ಹೇಳಬೇಕಾದರೆ ಇವತ್ತು ವಿದ್ಯಾಭ್ಯಾಸದಲ್ಲಿ ಹೈಸ್ಕೂಲು ಮಟ್ಟ ವನ್ನು ಮುರಿಯುವ ಒಂದು ಸೋಂಕು ಇವರಿಗೆ ಹುಟ್ಟಿದೆ. ಪರೀಕ್ಷೆ ಯಾಗಲಿ, ಆಗದೇ ಇರಲಿ 7ನೇ ಸ್ಟ್ಯಾಂಡರ್ಡ್‌ನಿಂದ ತೆಗೆದು 8ನೇ ಸ್ಟ್ಯಾಂಡರ್ಡ್‌ಗೆ ಹುಡುಗರನ್ನು ಹಾಕಿದ್ದಾರೆ. ಹುಡುಗರನ್ನು ಪರೀಕ್ಷೆ ಮಾಡದೆಯೇ ಪ್ರೊಮೋಷನ್ ಕೊಟ್ಟಿದ್ದಾರೆ. ಹೆಚ್ಚು ಹೆಚ್ಚಾಗಿ 8ನೇ ಸ್ಟ್ಯಾಂಡರ್ಡ್‌ನ್ನು ತೆಗೆಯಿರಿ ಎಂಬುದಾಗಿ ಹೇಳಿದ್ದಾರೆ. ಆದ್ದರಿಂದ ಈಗ ಪ್ರೈಮರಿ ಸ್ಕೂಲಿನಿಂದ ಹಿಡಿದು ಹೈಸ್ಕೂಲಿನವರೆಗೆ ಬಂದಿರತಕ್ಕ ವಿಧ್ಯಾಭ್ಯಾಸಕ್ಕೇ ಒಂದು ಸೋಂಕು ಬಂದಿದೆ. ಇದರಿಂದಾಗಿ ಮಕ್ಕಳನ್ನು ಹೋಣೆಮಾಡು ವುದಕ್ಕಾಗುವುದಿಲ್ಲ. ಎಸ್. ಎಸ್. ಎಲ್. ಸಿ. ಪರೀಕ್ಷೆ ಫಲಿತಾಂಶ ಬಂದುದನ್ನು ನೋಡಿ, ಅದು ಸಮ ರ್ಪಕವಾಗಿಲ್ಲದಿದ್ದರೆ ಅಂತಹ ಶಾಲೆಗಳಿಗೆ ಗ್ರಾಂಟು ಕೊಡುವುದಿಲ್ಲ, ಗ್ರಾಂಟು ಕಡಮೆಮಾಡುತ್ತೇ ವೆಂದು ಇವರು ಹೇಳಿದರೆ ಹೇಗೆ ? ಇದಕ್ಕೆ ಸರ್ಕಾರದ ಅನೀತಿಯೇ ಕಾರಣ. ಪಠ್ಯ ಪುಸ್ತಕಗಳನ್ನು

(ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್)

ನೋಡಿದರೆ ಮಕ್ಕಳಿಗೆ ಶಾಲೆಗಳಲ್ಲಿ ಹೇಳಿಕೊಡತಕ್ಕ ಪುಸ್ತಕಗಳಿಗೂ, ಹೈಸ್ಕೂಲಿನಲ್ಲಿಟ್ಟಿರತಕ್ಕ ಪುಸ್ತಕಗಳಿಗೂ ಅರ್ಥಾತ್ ಚೆನ್ನಾಗಿಲ್ಲ. ಬಸವೇಶ್ವರ ಎಂಬ ಪುಸ್ತಕವನ್ನು ನಾನು ಮೈಸೂರಿನಲ್ಲಿ ನೋಡಿದೆ. ಅಂಥಾದ್ದನ್ನು ಎಸ್. ಎಸ್. ಎಲ್. ಸಿಗೆ ಕನ್ನಡವನ್ನಾಗಿಟ್ಟರೆ ಅನೇಕರು ಫೇಲಾಗಬಹುದು. ಆದ್ದರಿಂದ ಪಠ್ಯ ಪುಸ್ತಕಗಳನ್ನು ಇಡುವಾಗ ಯಾವ ದರ್ಜೆಯ ಪುಸ್ತಕಗಳನ್ನು ಇಡಬೇಕೆಂಬುದನ್ನು ಚೆನ್ನಾಗಿ ಯೋಚನೆಮಾಡಿ ಮಾಡಬೇಕು. ಇಲ್ಲದಿದ್ದರೆ ಕಡಿಮೆ ದರ್ಜೆಯಲ್ಲಿರತಕ್ಕ ಮಕ್ಕಳು ನಿಜವಾಗಿ ಗ್ರೇಡನ್ನು ತಲುಪುವುದಕ್ಕೆ ಸಾಧ್ಯವೇ ? ಮೊದಲನೆಯದಾಗಿ ಇವರಿಗೇ ವಿವೇಚನೆ ಇಲ್ಲದೆ ಮಕ್ಕಳನ್ನು ಇದರಿಂದ ಉತ್ತಮರನ್ನಾಗಿ ಮಾಡುತ್ತೇವೆಂದು ಇವರು ಹೇಳಿದರೆ ಅವರು ಹೇಗೆ ಉತ್ತಮರಾಗುತ್ತಾರೆ, ಈಗಿನ ರೀತಿಯಲ್ಲಿ ಮ್ಯಾನೇಜ್‌ಮೆಂಟ್ ಮಾಡಿದರೆ ಖಂಡಿತವಾಗಿ ಸ್ಕೂಲಿನಲ್ಲಿ ಮಕ್ಕಳು ಮೇಲಕ್ಕೆ ಬರುವುದಕ್ಕೆ ಸಾಧ್ಯವಿಲ್ಲ. ಇದು ಇವರಲ್ಲಿರತಕ್ಕ ಮೂಲ ಭೂತವಾದ ತಪ್ಪು. ಅದನ್ನು ಇವರು ಯೋಚನೆ ಮಾಡಬೇಕು. ಇನ್ನು ಪ್ರೈಮರಿ ಕಂಪಲ್ಸರಿ ಎಜುಕೇಷನ್ ಮಾಡಿ ಅವರಿಗೆ ಕೊಡುವ ಸೌಲಭ್ಯಗಳೇನು, ಮಕ್ಕಳನ್ನು ಯಾವ ರೀತಿಯಲ್ಲಿ ತರಪೇತು ಮಾಡಬೇಕು ಎಂಬ ಬಗ್ಗೆ ನನ್ನ ಮಾನ್ಯ ಸ್ನೇಹಿತರಾದ ಶ್ರೀಮಾನ್ ಹೆಗ್ಡೆಯವರು ಏನು ಅಭಿಪ್ರಾಯವನ್ನು ಕೊಟ್ಟರೋ ಅದೇ ನನ್ನ ಅಭಿಪ್ರಾಯವೂ ಆಗಿದೆ. ಅದ್ದರಿಂದ ಈಗ ಕಂಪಲ್ಸರಿ ಎಜುಕೇಷನ್ನಿನ ಸಮಾಲೋಚನೆಯನ್ನು ಸುಮ್ಮನೆ ಬೆಳೆಸಬೇಡಿ. ಈಗ ಇರತಕ್ಕ ವ್ಯವಸ್ಥೆ ಏನಿದೆ ಅದನ್ನು ಉತ್ತಮಪಡಿಸಿದರೆ ಸಾಕು, ಎಷ್ಟೋ ಇವರು ಒಳ್ಳೆಯ ಕೆಲಸವನ್ನು ಮಾಡಿದಂತಾಗುತ್ತದೆ. ಅದನ್ನು ಬಿಟ್ಟು ದಾಕ್ಷಿಣ್ಯಕ್ಕೋಸ್ಕರವಾಗಿ ಈಗಿನ ಹಾಗೆ ಮುಂದೆ ಶಾಲೆಗಳನ್ನು ಹೆಚ್ಚಿಸುತ್ತಾ ಹೋದರೆ ಅದರಲ್ಲಿ ಎಷ್ಟು ಹೆಚ್ಚಿನ ಕೀರ್ತಿ ಇವರಿಗೆ ಆಗಬೇಕೋ ಅದು ಆಗದೇ ಹೋಗಿ ದುಷ್ಪರಿಣಾಮವುಂಟಾಗಿ ಅಷ್ಟೇ ಅಪಕೀರ್ತಿ ಬರುತ್ತದೆ. ಇವತ್ತು ಏನು ಶಾಲೆಗಳನ್ನು ಇವರು ಬೆಳೆಸಿದ್ದಾರೋ ಅದನ್ನು ಅಲ್ಲಿಗೇ ನಿಲ್ಲಿಸುವುದು ಯೋಗ್ಯ. ಮೂರನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮಾಡಬೇಕೆಂದು ಹೇಳಿದುದನ್ನು ಎಲ್ಲಿಯೋಗಾಳಿಗೆ ಬಿಟ್ಟರು. ಮುಂದಕ್ಕೆ ಹೋಗಿದ್ದಾರೆ ದಾಕ್ಷಿಣ್ಯಕ್ಕೋಸ್ಕರವಾಗಿ ಎಷ್ಟೋ ಶಾಲೆಗಳನ್ನು ಕೊಟ್ಟಿದ್ದಾರೆ. ವಿದ್ಯಾಭ್ಯಾಸವೇನೋ ಎಲ್ಲರಿಗೂ ಬೇಕು. ಹೆಚ್ಚಾಗಲಿ. ಅದಕ್ಕೆ ನನ್ನ ಅಭ್ಯಂತರವಿಲ್ಲ. 250 ಇಲ್ಲದಿದ್ದರೆ 300 ಹೈಸ್ಕೂಲುಗಳನ್ನು ಮಾಡೋಣ. ಆದರೆ ಅವಕ್ಕೆ ಬೇಕಾದಂಥ ಸೌಲಭ್ಯಗಳನ್ನು ಈ ಸರ್ಕಾರದವರು ಕೊಡುವುದಕ್ಕೆ ಸಾಧ್ಯವೇ ? ಇವತ್ತು ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್ ಬೋರ್ಡ್ ಹೈಸ್ಕೂಲುಗಳಿಗೆ ಒಬ್ಬ ಅರ್ಹನಾದ ಮುಖ್ಯೋಪಾಧ್ಯಾಯ ಸಿಕ್ಕುವುದಿಲ್ಲ. ತರಪೇತಾದ ಉಪಾಧ್ಯಾಯರುಗಳು ಸಿಕ್ಕುವುದಿಲ್ಲ. ಸುಮ್ಮನೆ ಸುಮಾರು 5 ವರ್ಷಗಳಿಂದ ಸ್ಕೂಲುಗಳನ್ನು ಹೆಚ್ಚಿಸುತ್ತಾ ಹೋಗಿದ್ದಾರೆ ಬರತಕ್ಕ ಉಪಾಧ್ಯಾಯರ ಸಂಖ್ಯೆಯನ್ನು ಹೆಚ್ಚಿಸಲಿಲ್ಲ. ಅವರಿಗೆ ಸಾಕಷ್ಟು ಕೆಲಸವಿದೆಯೋ ಇಲ್ಲವೇ ಎಂಬುದನ್ನೂ ಸಹ ಯೋಚನೆಮಾಡಲಿಲ್ಲ. ಶಾಲೆಗಳು ಹೆಚ್ಚಾದರೂ ಉಪಾಧ್ಯಾಯರುಗಳ ಕೊರತೆಯೇನೋ ಇದ್ದೇ ಇದೆ. ಹೀಗಿರುವುದರಿಂದ ವಿದ್ಯಾರ್ಥಿಗಳು ಎಷ್ಟರ ಮಟ್ಟಿಗೆ ತರಪೇತನ್ನು ಹೊಂದಬೇಕೋ ಅಷ್ಟು ಆಗುತ್ತಿಲ್ಲ. ಎರಡನೆಯದಾಗಿ ಬಾಕಿ ಸೌಲತ್ತುಗಳು ಅಂದರೆ ಮುಖ್ಯವಾಗಿ ಅನೇಕ ಕಡೆಗಳಲ್ಲಿ ಶಾಲೆಗಳಿಗೆ ಬೇಕಾದಂಥ ಎಕ್ವಿಪ್‌ಮೆಂಟುಗಳು ಇಲ್ಲ. ವಿದ್ಯಾರ್ಥಿಗಳಿಗೆ ಬರೀ ಬ್ಲಾಕ್‌ಬೋರ್ಡ್ ಮಾಹಿತಿಗಳು ತಲುಪುತ್ತವೆಯೇ ಹೊರತು ಪ್ರ್ಯಾಕ್ಟಿಕಲ್ ಎಕ್ಸ್‌ಪೀರಿಯನ್ಸ್ ಸಾಕಷ್ಟು ಆಗುತ್ತಿಲ್ಲ. ಅನೇಕ ಕಡೆಗಳಲ್ಲಿ ಈ ವ್ಯವಸ್ಥೆ ಇಲ್ಲ. ಈ ವಿಚಾರವಾಗಿ ನಾನೇನೂ ಸರ್ಕಾರದಮೇಲೆ ದೂರುಮಾಡುತ್ತಾ ಇಲ್ಲ. ಇರತಕ್ಕ ವಾಸ್ತವಾಂಶಗಳನ್ನು ಇಲ್ಲಿ ಹೇಳುತ್ತಿದ್ದೇನೆ. ಆದ್ದರಿಂದ ಸರ್ಕಾರದವರು ಶಾಲೆಗಳಿಗೆ ಹೆಚ್ಚಿಗೆ ಹಣ ಸಹಾಯಮಾಡಿ ಅವುಗಳು ಅವುಗಳ ಕಾಲಿನಮೇಲೆ ನಿಂತುಕೊಳ್ಳುವ ಹಾಗೆ ಇವರು ವ್ಯವಸ್ಥೆ ಮಾಡಬೇಕು. ಇನ್ನು ಹೈಸ್ಕೂಲುಗಳಿಗೆ ಕನ್ನಡೋಪಾಧ್ಯಾಯರುಗಳು ಸಿಕ್ಕುವುದಿಲ್ಲವೆಂದು ಹೇಳಿದರು. ಮೈಸೂರು ಕನ್ನಡ ರಾಜ್ಯದೊಳಗೆ ಆ ರೀತಿ ಹೇಳಿದರೆ ಹೇಗೆ ? ಇದಕ್ಕೆ ಕಾರಣ ವೇನೆಂದರೆ ಯಾವುದೋ ಹಿಂದೆ ಇದ್ದಂಥ ಚೌಕಟ್ಟನ್ನು ಇವರು ಇಟ್ಟುಕೊಂಡು ಯಾವ ಹಿಂದುಮುಂದಿನ ಯೋಚನೆ ಇಲ್ಲದೆ ತರ್ತುಪರಿಸ್ಥಿತಿಯೆಂದು ಹೇಳಿ ಅಡಿಪಾಯ, ಚೌಕಟ್ಟನ್ನು ಸಡಿಲಪಡಿಸಿರುವುದರಿಂದ ಅವರುಗಳನ್ನು ಬೇರೆಯವರು ನಮಗೆ ಬೇಕು, ನಮಗೆ ಬೇಕು ಎಂಬುದಾಗಿ ಆಯ್ಕೆಮಾಡಿಕೊಂಡಿರುವುದರಿಂದ ಎಲ್ಲಾ ಸ್ಕೂಲುಗಳಿಗೂ ಸರಿಯಾದ ಉಪಾಧ್ಯಾಯರುಗಳು ಸಿಗುತ್ತಿಲ್ಲ.

ಶ್ರೀ ಎಸ್. ಆರ್. ಕಂಠಿ.—ಕನ್ನಡ ಗ್ರ್ಯಾಜುಯೇಟ್ಸ್ ಸಿಗುತ್ತಾರೆ.

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್.—ಇಲ್ಲ ಸರಿಯಾಗಿ ವಿಚಾರಮಾಡಿ ತಿಳಿದುಕೊಳ್ಳಿ.

ಶ್ರೀ ಎಸ್. ಆರ್. ಕಂಠಿ.—ಇಲ್ಲಿ ಕನ್ನಡ ಪಂಡಿತರು ಸಿಕ್ಕುವುದು ಕಷ್ಟ. ಬೇರೆ ಎಲ್ಲಾ ಕಡೆಯೂ ವಿಫಲವಾಗಿ ಸಿಕ್ಕುತ್ತಾರೆ.

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್.—ಎಂಜನಿಯರುಗಳು, ಸಿವಿಲ್ ಎಂಜನಿಯರು ಗಳು ಎಲ್ಲಾ ಪ್ರಾಂತಗಳಲ್ಲಿಯೂ ಎಷ್ಟೋ ಜನ ಸಿಕ್ಕುತ್ತಾರೆ.

ಎರಡನೆಯದಾಗಿ ಕಂಪಲ್ಸರಿ ಪ್ರೈಮರಿ ಎಜುಕೇಷನ್ ಎಂಬುದಾಗಿ ಮಾಡಿದ್ದಾರೆ. ಇದರಲ್ಲೂ ಅದೇ ಕೊರತೆ ಕಾಣುತ್ತಿದೆ. ಮಕ್ಕಳಿಗಂತೂ ಪಾಠಪ್ರವಚನಗಳು ನಡೆಯುವುದೇ ಕಷ್ಟವಾಗುತ್ತಿದೆ. ಎಷ್ಟೋ ಕಡೆಗಳಲ್ಲಿ ಶಾಲೆಗಳನ್ನು ಕಟ್ಟುವುದಕ್ಕೆ ಸರಿಯಾದ ಜಾಗವೇ ಇಲ್ಲ, ಅವಕಾಶ ಕೂಡ ಇಲ್ಲ, ಶಕ್ತಿಯೂ ಕೂಡ ಇಲ್ಲ. ಇವತ್ತು ಬೆಳಿಗ್ಗೆ ಪ್ರಶ್ನೋತ್ತರಗಳ ಕಾಲದಲ್ಲಿ ಸರ್ಕಾರದವರು ಒಂದು ಉತ್ತರವನ್ನು ಹೇಳಿದರು. ಅದು ತಾಲ್ಲೂಕು ಬೋರ್ಡುಗಳ ಜವಾಬ್ದಾರಿ. ಆದರೆ ತಾಲ್ಲೂಕು ಬೋರ್ಡುಗಳಿಗೆ ಮನೆ ಕಟ್ಟುವುದಕ್ಕೆ ಹಣವಿಲ್ಲ. ಪಂಚಾಯಿತಿಯವರು ಕಟ್ಟುವುದಿಲ್ಲವೆಂದು ಹೇಳಿ ದರು. ಇದರಿಂದ ಶಾಲೆಗಳಿಗೆ ಸಾಕಷ್ಟು ಕಟ್ಟಡಗಳೇ ಇಲ್ಲ. ಉಪಾಧ್ಯಾಯರಿಗೆ ವಸತಿ ಸೌಕರ್ಯ ಸಿಗುವುದಿಲ್ಲ. ಅದರಿಂದಾಗಿ ಊರು ಹೊರಗಡೆಯಲ್ಲಿ ಅವರು ವಾಸಮಾಡಿಕೊಂಡಿದ್ದು ಇಲ್ಲಿಗೆ ಬಂದು ಪಾಠ ಹೇಳಿಕೊಡಬೇಕಾಗುತ್ತದೆ.

ಅನೇಕ ಜನಗಳು ಸ್ಕೂಲುಗಳನ್ನು ನಡೆಸುವುದಕ್ಕೆ ಅವಕಾಶವಾಗುತ್ತಿಲ್ಲ. ಇನ್ಸ್‌ಪೆಕ್ಷನ್ ಆಫೀಸರು ಕೆಲವು ಕಡೆ ಬರಲಿಕ್ಕೆ ಆಗುತ್ತದೆ. ಕೆಲವು ಕಡೆ ಬರಲಿಕ್ಕೆ ಆಗುವುದಿಲ್ಲ. ನಾನು ಎಲ್ಲರನ್ನೂ ದೂರುವುದಿಲ್ಲ. ಕೆಲವು ಕಡೆ ಕೆಲಸ ಚೆನ್ನಾಗಿ ನಡೆಯುತ್ತದೆ. ಕೆಲವು ಕಡೆ ಕೆಲಸ ಚೆನ್ನಾಗಿ ಮಾಡುವುದಿಲ್ಲ. ಅನೇಕ ಕಡೆ ಗ್ರಾಮಾಂತರ ಪ್ರದೇಶಗಳಿಗೆ ಸ್ಕೂಲು ಇನ್ಸ್‌ಪೆಕ್ಟರುಗಳು ಆಗಾಗ್ಯೆ ಹೆಚ್ಚು ಇನ್ಸ್‌ಪೆಕ್ಷನ್ ಮಾಡುವುದಕ್ಕೆ ಅವಕಾಶ ಇರುವುದಿಲ್ಲ. ಅರ್ಬನ್ ಏರಿಯಾದಲ್ಲಿ ಮತ್ತು ಪಟ್ಟಣಗಳಲ್ಲಿ ಇನ್ಸ್‌ಪೆಕ್ಟರುಗಳು ಸ್ಕೂಲುಗಳಿಗೆ ಆಗಾಗ್ಯೆ ಹೋಗಿ ಇನ್ಸ್‌ಪೆಕ್ಷನ್ ಮಾಡುವುದಕ್ಕೆ ಅವಕಾಶ ಇರುವುದರಿಂದ ಉಪಾಧ್ಯಾಯರುಗಳು ಸರಿಯಾಗಿ ಕೆಲಸ ಮಾಡುತ್ತಾರೆ. ಸಿಟಿಗಳಲ್ಲಿ ಇನ್ನೊಂದು ತೊಂದರೆ ಏನೆಂದರೆ ಕೆಲವು ಕಡೆ ಸ್ಕೂಲು ಬಿಲ್ಡಿಂಗ್ ಇರುವುದಿಲ್ಲ- ಬಿಲ್ಡಿಂಗ್ ಇದ್ದರೆ ಅದರಲ್ಲಿ ಎಷ್ಟು ಹುಡುಗರನ್ನು ಸೇರಿಸಬೇಕೋ ಅದಕ್ಕಿಂತ ಜಾಸ್ತಿ ವಿಪರೀತವಾಗಿ ಹುಡುಗರನ್ನು ಸೇರಿಸಿರುತ್ತಾರೆ. ಇಂಥಾ ತೊಂದರೆಗಳು ಇವೆ. ಈಗ ಸ್ಕೂಲುಗಳಿಗೆ ಸಾಕಷ್ಟು ಆಟದ ಮೈದಾನ ಗಳು ಇರುವುದಿಲ್ಲ. ಆಟದ ಮೈದಾನಗಳಿಗೆ ಅವಕಾಶ ಮಾಡಿ ಕೊಡಿ ಎಂದು ಸರ್ಕಾರದವರನ್ನು ಎಷ್ಟು ಕೇಳಿದರೂ ಆಟದ ಮೈದಾನಗಳಿಗೆ ಅವಕಾಶ ಮಾಡಿ ಕೊಡಲು ಏನು ಕಾರ್ಯಕ್ರಮವನ್ನು ಹಾಕಿ ಕೊಂಡಿಲ್ಲ, ಅದರ ಬಗ್ಗೆ ಯಾವ ಕ್ರಮವನ್ನೂ ಕೈಗೊಂಡಿಲ್ಲ. ಒಬ್ಬ ಫಿಜಿಕಲ್ ಎಜುಕೇಷನ್ ಮೇಷ್ಟ್ರು ಸಿಕ್ಕುವುದಿಲ್ಲ. ನಾನು ಮಾನ್ಯ ವಿದ್ಯಾ ಮಂತ್ರಿಗಳಿಗೆ ಹೇಳುತ್ತೇನೆ. ಫಿಜಿಕಲ್ ಎಜುಕೇಷನ್ ಬಗ್ಗೆ ಟ್ರೇನ್ಡ್ ಫಿಜಿಕಲ್ ಎಜುಕೇಷನ್ ಇನ್ಸ್‌ಟ್ರಕ್ಟರು ಸಿಕ್ಕುವುದಿಲ್ಲ. ಇದರಿಂದ ಸ್ಕೂಲುಗಳಲ್ಲಿ ಹುಡುಗರಿಗೆ ಫಿಜಿಕಲ್ ಎಜುಕೇಷನ್‌ನಲ್ಲಿ ಬರೀ ಸೂಚನೆಯನ್ನು ಕೊಟ್ಟು ಕಳುಹಿಸು ತ್ತಾರೆ ಮತ್ತು ಅದಕ್ಕಾಗಿ ಇಷ್ಟು ಇಷ್ಟು ಟೈಮು ಎಂದು ಇಟ್ಟುಕೊಂಡಿರುತ್ತಾರೆ. ಆ ಸಮಯ ದಲ್ಲಿ ಡ್ರಿಲ್ ಮಾಡಿಸುತ್ತಾರೆ. ಈ ಫಿಜಿಕಲ್ ಎಜುಕೇಷನ್ ಅನ್ನು ವ್ಯವಸ್ಥಿತ ರೀತಿಯಲ್ಲಿ ಕೊಡ ಬೇಕಾಗುತ್ತದೆ. ಆದರೇ ಟ್ರೇನ್ಡ್ ಫಿಜಿಕಲ್ ಇನ್ಸ್‌ಟ್ರಕ್ಟರ್ ಇಲ್ಲದೆ ಇರುವುದರಿಂದ ಅದನ್ನು ಮಾಡು ವುದಕ್ಕಾಗುವುದಿಲ್ಲ.

ಇನ್ನ ಬೇಸಿಕ್ ಎಜುಕೇಷನ್ ವಿಚಾರದಲ್ಲಿ ಹೇಳುವುದಾದರೆ ಬೇಸಿಕ್ ಎಜುಕೇಷನ್ ಸ್ಕೂಲು ಗಳನ್ನು ತೆಗೆದಿರುವವರಿಗೆ ಪ್ರೈವೇಟ್ ಸ್ಕೂಲುಗಳಿಗೆ 100 ಪರ್ಸೆಂಟ್ ಗ್ರಾಂಟನ್ನು ಸರ್ಕಾರದವರು ಕೊಡುತ್ತಿದ್ದಾರೆ. ಮತ್ತು ಅನೇಕ ಬೇಸಿಕ್ ಎಜುಕೇಷನ್ ಸ್ಕೂಲುಗಳನ್ನು ಸರ್ಕಾರದವರೇ ನಡೆಸುತ್ತಿದ್ದಾರೆ. ಬೇಸಿಕ್ ಎಜುಕೇಷನ್ ಕೊಡುತ್ತಿದ್ದೇವೆಂದು ಹುಡುಗರಿಗೆ ಬರೀ ತಕಲಿ ಮತ್ತು ಚರಕಗಳನ್ನು ಕೊಡುವುದು ಎಂದು ತಿಳಿದು ಕೊಂಡರೆ ಆಗುವುದಿಲ್ಲ. ಬೇಸಿಕ್ ಎಜುಕೇಷನ್ ಎನ್ನುವ ಹೆಸರನ್ನು ಉಳಿಸೋಣ ಎಂದು ಆರೀತಿ ಮಾಡಿದರೆ ಅದರಿಂದ ಪ್ರಯೋಜನವಾಗುವುದಿಲ್ಲ. ಅಕೆಡಮಿಕ್ ಮತ್ತು ಪ್ರಾಕ್ಟಿಕಲ್ ಸೈಡ್ ಎರಡೂ ಇರಲಿ. ಬೇಸಿಕ್ ಎಜುಕೇಷನ್ ಎಂದು ಹೆಸರು ಹೇಳಿ ಕೇವಲ ತಕಲಿ ಮತ್ತು ಚರಕಗಳನ್ನು ಇಟ್ಟುಕೊಂಡರೆ ಆಗುವುದಿಲ್ಲ, ವಿದ್ಯಾರ್ಥಿಗಳು ಕ್ರಾಫ್ಟ್ ಮೈಂಡೆಡ್ ಆಗಿ ಲೈಫ್ ಲೀಡ್ ಮಾಡುವುದಕ್ಕೆ ಕ್ರಾಫ್ಟ್ ಟೆಕ್ನಿಕಲ್ ಬಯಾಸ್ ಬೇಕು. ವಿದ್ಯಾರ್ಥಿ ಗಳು ಅದನ್ನು ಬೆಳೆಸುವಂತೆ ಮಾಡಬೇಕು. ಕೆಲವು ದರ್ಜೆಯ ಮಕ್ಕಳಿಗೆ ಉಪಯುಕ್ತವಾದ ಸಣ್ಣ ಸಣ್ಣ ಉಪಕರಣಗಳನ್ನು ಕೊಟ್ಟರೆ ಅವರಿಗೆ ಸಹಾಯ ಮಾಡಿದಂತಾಗುತ್ತದ. ಈಗ ಉದಾಹರಣೆಗೆ ಹೇಳುವುದಾದರೆ ಅಂಬರ್ ಚರಕವನ್ನು ಕೊಟ್ಟರೆ ಅದರ ವರ್ಕಿಂಗ್‌ನಲ್ಲಿ ಟೇಕ್ಸ್‌ಟೈಲ್ ವಿಷಯ ಗೊತ್ತಾಗುತ್ತದೆ. ಸ್ಯೂಯಿಂಗ್ ಮೆಷನ್ ಕೊಟ್ಟರೆ ಅದರಿಂದ ಹೊಲಿಗೆಯ ವಿಷಯ ಗೊತ್ತಾಗುತ್ತದೆ. ಆ ಉಪಕರಣಗಳಲ್ಲಿ ಹುಡುಗರು ಕೆಲಸ ಮಾಡಬೇಕಾಗಿಲ್ಲ. ಆ ಉಪಕರಣಗಳು ಕೆಲಸ ಮಾಡುವುದನ್ನು ನೋಡಿದರೆ ಹುಡುಗರಲ್ಲಿ ಆ ಕೆಲಸವನ್ನು ಮಾಡಬೇಕೆಂಬ ಮನೋಭಾವ ಬೆಳೆಯುವುದಕ್ಕೆ ಅವಕಾಶ ವಾಗುತ್ತದೆ.

(ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್)

ಇನ್ನು ವ್ಯವಸಾಯದ ವಿಷಯವನ್ನು ಹೇಳುತ್ತೇನೆ. ವ್ಯವಸಾಯದ ವಿಷಯದಲ್ಲಿ ಮಕ್ಕಳಿಗೆ ಶಿಕ್ಷಣವನ್ನು ಕೊಡುವುದು ಎಂದರೆ ನಾಲ್ಕು ಹೂವಿನ ಗಿಡಗಳನ್ನು ಹಾಕಿದರೆ ಆಗುವುದಿಲ್ಲ. ವ್ಯವಸಾಯಗಾರನ ಮನೆಯಿಂದ ಬಂದಿರತಕ್ಕ ಮಕ್ಕಳಿಗೆ ವ್ಯವಸಾಯದ ಒಂದು ಬ್ಯಾಕ್ ಗ್ರೌಂಡ್ ಇರುತ್ತದೆ. ಆದ್ದರಿಂದ ಆ ಮಕ್ಕಳಿಗೆ ಆಧುನಿಕ ರೀತಿಯ ವ್ಯವಸಾಯ ಪದ್ಧತಿಯನ್ನು ಹೇಳಿಕೊಟ್ಟರೆ ಅವರಿಗೆ ಅಂಕುರಾರ್ಪಣವನ್ನು ಮಾಡಿದಂತಾಗುತ್ತದೆ. ಆದ್ದರಿಂದ ಅದನ್ನು ಮಾಡಬೇಕು. ಹೊಸ ಹೊಸ ಫರ್ಟಿಲೈಜರ್ಸ್ ಮತ್ತು ಅವುಗಳ ಗುಣ ಯಾವುದು ಇರುತ್ತದೆ ಎನ್ನುವುದನ್ನೆಲ್ಲಾ ತಿಳಿಸಬೇಕು. ಮತ್ತು ವ್ಯವಸಾಯದ ಉಪಕರಣಗಳನ್ನು ತೋರಿಸಬೇಕು. ಇಂಥಾ ಸಣ್ಣ ಪುಟ್ಟ ವಿಷಯಗಳಲ್ಲಿ ಮಕ್ಕಳಿಗೆ ತಿಳುವಳಿಕೆಯನ್ನು ಕೊಡಬೇಕು.

ಶ್ರೀ ಎಸ್. ಆರ್. ಕಂಠಿ.—ಫರ್ಟಿಲೈಜರ್ ವಿಷಯದಲ್ಲಿ ಮಕ್ಕಳಿಗೆ ಹೇಳಿ ಕೊಡಿ ಎಂದರೆ ಅದು ಹೇಗಾಗುತ್ತದೆ. ಕೆಲವು ವ್ಯವಸಾಯದ ಮತ್ತು ಇತರೆ ಉಪಕರಣಗಳನ್ನು ಕಾರ್ಡ್ ಬೋರ್ಡಿನಲ್ಲಿ ಮಾಡಿ ತೋರಿಸುತ್ತಾರೆ. ತೋಟ ಮಾಡುವುದನ್ನು ಹೇಳಿಕೊಡುತ್ತಾರೆ. ಟ್ರ್ಯಾಕ್ಟರುಗಳನ್ನು ತೋರಿಸುವುದು ಹೇಗೆ ?

ಶ್ರೀ ಕೆ. ಎಸ್. ಸೂರ್ಯನಾರಾಯಣ ರಾವ್.—ಟ್ರ್ಯಾಕ್ಟರುಗಳ ವಿಚಾರವನ್ನು ಹೇಳಿಕೊಡ ಬೇಕು. ಹಿಂದಿನ ಕಾಲದಲ್ಲಿ ಸ್ಕೂಲುಗಳಿಂದ ಹುಡಗರನ್ನು ಹೊರಗಡೆ ಕರೆದು ಕೊಂಡುಹೋಗಿ ನ್ಯಾಚುರಲ್ ಸ್ಟಡೀಸ್ ತೋರಿಸುತ್ತಿದ್ದರು. ಈಗ ಹುಡುಗರನ್ನು ಹೊರಗಡೆ ಕರೆದು ಕೊಂಡು ಹೋಗಿ ನಡೆಸುವುದು ಬೇಡ. ಅಥವಾ ಒಂದು ತೋಟ, ಮತ್ತು ಗದ್ದೆಯನ್ನು ಶಾಲೆಗಳ ಹತ್ತಿರ ಮಾಡಬೇಕಾದ್ದು ಇಲ್ಲ. ಸೂಲ್ಕು ಕಾಂಪೌಂಡಿನಲ್ಲಿ ಸ್ವಲ್ಪ ಮಾಡಲ್ ಮಾಡುವುದಕ್ಕೆ ಬರುತ್ತದೆ. ಆ ರೀತಿ ಮಾಡಿ ಮಕ್ಕಳಿಗೆ ತೋರಿಸುವುದರಿಂದ ಅವರಿಗೆ ಕೆಲಸದ ಮನೋಭಾವ ಬರುತ್ತದೆ. ಇಲ್ಲದಿದ್ದರೆ ಸಾಧ್ಯವಿಲ್ಲ, ದೇಶದಲ್ಲಿ ಬೇಸಿಕ್ ಎಜುಕೇಷನ್ ಫೈಲೂರ್ ಎಂದು ಆಗುತ್ತದೆ. ಬೇಸಿಕ್ ಎಜುಕೇಷನ್‌ನಲ್ಲಿ ಟೆಕ್ನಿಕಲ್ ಬಯಾಸ್ ಅನ್ನ ಪ್ರೈಮರಿ ಸ್ಟೇಜಿನಲ್ಲಿ ಬೆಳೆಸಿಕೊಂಡು ಬರ ಬೇಕು. ಏಕದಂ ಅದನ್ನು ಹೈಸ್ಕೂಲ್ ಮತ್ತು ಕಾಲೇಜಿನಲ್ಲಿ ಹೇಳಿಕೊಡುವುದಾದರೆ ಕಷ್ಟವಾಗು ತ್ತದೆ. ಕಾಲಾವಕಾಶ ಇಲ್ಲದೆ ಇರುವುದರಿಂದ ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸು ತ್ತೇನೆ.

ಶ್ರೀ ಟಿ. ಡಿ. ದೇವೇಂದ್ರಪ್ಪ (ಭದ್ರಾವತಿ).—ಮಾನ್ಯ ಸಭಾಪತಿಯವರೇ, ಈಗ ಈ ಸಭೆಯ ಮುಂದಿಟ್ಟಿರತಕ್ಕಂಥ ವಿದ್ಯಾಭ್ಯಾಸ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳನ್ನು ನಾನು ಅನುಮೋದಿಸು ತ್ತೇನೆ. ವಿದ್ಯಾ ಇಲಾಖೆ ಅನೇಕ ವರ್ಷಗಳಿಂದ ಹೇರಳವಾಗಿ ಹಣವನ್ನು ಜನಗಳ ವಿದ್ಯಾಭ್ಯಾಸ ಕ್ಕೋಸ್ಕರ ಖರ್ಚು ಮಾಡುತ್ತಿದ್ದಾರೆ. ಹೀಗೆ ಖರ್ಚು ಮಾಡತಕ್ಕ ಕಾಲದಲ್ಲಿ ವಿದ್ಯಾ ಇಲಾಖೆಯಲ್ಲಿ ಪ್ರೈಮರಿ ವಿದ್ಯಾಭ್ಯಾಸ ಅಥವಾ ಹೈಸ್ಕೂಲು ವಿದ್ಯಾಭ್ಯಾಸ ಎಷ್ಟರ ಮಟ್ಟಿಗೆ ನಡೆಯುತ್ತಿದೆ ಎನ್ನ ತಕ್ಕಂಥಾದ್ದನ್ನು ನಾವು ಪ್ರಸ್ತಾಪ ಮಾಡಬೇಕಾಗಿದೆ. ಹಿಂದೆ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರೈ ಮರಿ ಶಾಲೆಗಳನ್ನು ಬಹಳ ಕಡಿಮೆ ಸಂಖ್ಯೆಯಲ್ಲಿ ಕಾಣುತ್ತಿದ್ದೆವು. ಆದರೆ ಇವೊತ್ತಿನ ದಿವಸ ಸರ್ಕಾರ ದವರು ಕೊಡತಕ್ಕಂಥ ಹಣದ ಸಹಾಯದಿಂದ ತಾಲ್ಲೂಕು ಬೋರ್ಡಿನವರು ಸ್ವಲ್ಪ ಹಣವನ್ನು ಸೇರಿಸಿ ಸಾಮಾನ್ಯವಾಗಿ ಪ್ರತಿ ಹಳ್ಳಿಯಲ್ಲಿಯೂ ಕೂಡ ಒಂದೊಂದು ಪ್ರೈಮರಿ ಶಾಲೆಯನ್ನು ಕೊಡತಕ್ಕಂಥ ಯೋಜನೆಯನ್ನು ಹಾಕಿ ಕೊಂಡು ಅದರಂತೆ ಕೊಡುತ್ತಿದ್ದಾರೆ. ಸ್ಕೂಲುಗಳೂ ಕೂಡ ಕೆಲಸ ಮಾಡು ತ್ತಿವೆ. ಆದರೆ ಎಷ್ಟರಮಟ್ಟಿಗೆ ಈ ಪ್ರೈಮರಿ ಶಾಲೆಗಳಲ್ಲಿ ಕೆಲಸ ಆಗುತ್ತಿದೆ ಎನ್ನತಕ್ಕಂಥಾದ್ದನ್ನು ನಾವು ವಿಚಾರ ಮಾಡಬೇಕಾಗಿದೆ. ಅನೇಕ ಕಡೆ ಉಪಾಧ್ಯಾಯರುಗಳಿಗೆ ಗ್ರಾಮಾಂತರ ಪ್ರದೇಶ ಗಳಲ್ಲಿ ಮನೆಗಳು ಸಿಕ್ಕದೆ ಅವರು ದೂರದಿಂದ ಸ್ಕೂಲುಗಳಿಗೆ ಬರತಕ್ಕ ವ್ಯವಸ್ಥೆ ಇದೆ. ಈ ಕಾರಣ ದಿಂದ ಉಪಾಧ್ಯಾಯರು ಶಾಲೆಗಳಿಗೆ ಸರಿಯಾಗಿ ಹೋಗದೆ ಪ್ರೈಮರಿ ಶಾಲೆಗಳಲ್ಲಿ ಸರಿಯಾಗಿ ಮಕ್ಕಳ ವಿದ್ಯಾಭ್ಯಾಸ ಆಗುತ್ತಿಲ್ಲ. ಇದನ್ನು ತಪ್ಪಿಸಬೇಕು. ಇವೊತ್ತಿನ ದಿವಸ ಶಾಲೆಗಳನ್ನು ಪ್ರತಿಯೊಂದು ಹಳ್ಳಿಯಲ್ಲಿಯೂ ಕೂಡ ಒಂದು ಶಾಲೆ ಹೇಗೆ ಇರಬೇಕೆಂದು ಸರ್ಕಾರದವರು ಹಣವನ್ನು ಕೊಟ್ಟು ಕಟ್ಟಿಸುತ್ತಿದ್ದಾರೆಯೋ ಹಾಗೆಯೇ ಪ್ರತಿಯೊಂದು ಗ್ರಾಮದಲ್ಲಿಯೂ ಕೂಡ ಶಾಲೆಯ ಪಕ್ಕದಲ್ಲಿ ಒಂದು ಮನೆಯನ್ನು ಸಣ್ಣದಾಗಿ ಕಟ್ಟತಕ್ಕಂಥ ವ್ಯವಸ್ಥೆಯನ್ನು ವಿದ್ಯಾಭ್ಯಾಸ ಇಲಾಖೆ ಮಾಡಬೇಕು. ಇಲ್ಲದೇ ಹೋದರೆ ಬಹುದೂರದಿಂದ ಬರತಕ್ಕ ಉಪಾಧ್ಯಾಯರುಗಳಿಗೆ ತೊಂದರೆ ಯಾಗುತ್ತದೆ. ಸ್ಕೂಲುಗಳನ್ನು ಸರ್ಕಾರದವರು ನಡೆಸಿದರೂ ಕೂಡ ಮಕ್ಕಳ ವಿದ್ಯಾಭ್ಯಾಸ ಕುಂಠಿತ ವಾಗುತ್ತದೆ. ಅದು ಹೋಗಬೇಕಾದರೆ ಪ್ರತಿಯೊಂದು ಹಳ್ಳಿಯಲ್ಲಿಯೂ ಕಡ್ಡಾಯವಾಗಿ ಸ್ಕೂಲುಗಳ ಪಕ್ಕದಲ್ಲಿ ಒಂದು ಸಣ್ಣ ವಾಸದ ಮನೆಯನ್ನು ಕಟ್ಟಿಸತಕ್ಕ ವ್ಯವಸ್ಥೆಯನ್ನು ಮಾಡಬೇಕು ಎಂದು

ಈ ಸಂದರ್ಭದಲ್ಲಿ ನಾನು ತಿಳಿಸುತ್ತೇನೆ. ಕೆಲವು ಪ್ರೈಮರಿ ಶಾಲೆಗಳಲ್ಲಿ ಉಪಾಧ್ಯಾಯರು ಆಯಾಯ ಸ್ಥಳದಲ್ಲಿಯೇ ಇರತಕ್ಕವರು ಇದ್ದಾರೆ. ಹೀಗಿರುವುದರಿಂದ ಅವರು ಸ್ಥಳಗಳಲ್ಲಿ ರಾಜಕೀಯದ ಒಂದು ಗೊಂದಲಕ್ಕೆ ಅವರೂ ಕೂಡ ಸಿಕ್ಕಿ ಸ್ಕೂಲುಗಳು ಸರಿಯಾಗಿ ನಡೆಯುತ್ತಿಲ್ಲ. ಈ ದೆಶೆಯಿಂಥ ಸ್ಥಳಗಳಲ್ಲಿರತಕ್ಕ ಉಪಾಧ್ಯಾಯರನ್ನು ಸ್ವಲ್ಪ ಬೇರೆ ಕಡೆ ಬದಲಾಯಿಸತಕ್ಕ ವ್ಯವಸ್ಥೆಯನ್ನು ವಿದ್ಯಾ ಇಲಾಖೆ ಹಾಕಿಕೊಳ್ಳಬೇಕು ಎಂದು ಈ ಸಂದರ್ಭವಲ್ಲಿ ನಾನು ತಿಳಿಸುತ್ತಿದ್ದೇನೆ.

ಸ್ವಾಮಿ, ಹೈಸ್ಕೂಲುಗಳ ವಿಚಾರದಲ್ಲಿ ಪ್ರಸ್ತಾಪ ಮಾಡುವುದಾದರೆ, ಕೆಲವು ಹೈಸ್ಕೂಲುಗಳಲ್ಲಿ ಮುಖ್ಯೋಪಾಧ್ಯಾಯರುಗಳೇ ಇಲ್ಲದೆ ಮತ್ತು ಕೆಲವು ಕಡೆ ಹೈಸ್ಕೂಲು ಟೀಚರುಗಳು ಇಲ್ಲದೇ ಇರುವ ಪರಿಸ್ಥಿತಿಗಳು ಇವೆ. ಈ ರೀತಿ ಸರಕಾರಿ ಹೈಸ್ಕೂಲುಗಳಲ್ಲಿ ಹಾಗೂ ಖಾಸಗೀ ಹೈಸ್ಕೂಲುಗಳಲ್ಲಿಯೂ ಆಗಿ ಬಹಳ ತೊಂದರೆ ಆಗುತ್ತಿದೆ. ಭದ್ರಾವತಿಯಲ್ಲಿರುವ ನಮ್ಮ ಕಲ್ಲಿಹಾಳು ಎಂಬಲ್ಲಿ ಒಂದು ಹೈಸ್ಕೂಲು ಇದೆ. ಇಲ್ಲಿಗೆ ಮುಖ್ಯೋಪಾಧ್ಯಾಯರೇ ಇಲ್ಲದೇ ಅನೇಕ ವರ್ಷಗಳಿಂದ ತೊಂದರೆಗೆ ಒಳಗಾಗಿದೆ. ಅಲ್ಲದೆ ಇಲ್ಲಿಂದ ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ಕುಳಿತವರಲ್ಲಿ ಕಳೆದ ವರ್ಷ ಒಬ್ಬ ಹುಡುಗನೂ ಇಲ್ಲಿಂದ ಪಾಸಾಗಲಿಲ್ಲ. ಇದು ಮಾನ್ಯ ಸಚಿವರಿಗೂ ಗೊತ್ತಿದೆ. ಇಂತಹುದು ಆಗಬಾರದು. ಹೈಸ್ಕೂಲುಗಳಲ್ಲಿ ಉಪಾಧ್ಯಾಯರುಗಳನ್ನು ನೇಮಿಸಿ ಅವರು ಸರಿಯಾಗಿ ಕೆಲಸ ಮಾಡುವ ವ್ಯವಸ್ಥೆ ಮಾಡಬೇಕು ಎಂದು ಈ ಸಂದರ್ಭದಲ್ಲಿ ತಿಳಿಸುತ್ತೇನೆ.

ನಮ್ಮ ಭದ್ರಾವತಿ ಪಟ್ಟಣ ದಿನೇ ದಿನೇ ಬೆಳೆಯುತ್ತಾ ಬರುತ್ತಿದೆ. ಸುಮಾರು 75 ಸಾವಿರದಿಂದ 80 ಸಾವಿರದವರೆಗೆ ಇಲ್ಲಿ ಪ್ರಜೆಗಳ ಸಂಖ್ಯೆ ಇದೆ. ಈ ಪಟ್ಟಣದಲ್ಲಿ ಹೆಣ್ಣು ಮಕ್ಕಳಿಗಾಗಿ ಒಂದೇ ಒಂದು ಶಾಲೆ ಇದೆ. ಸುಮಾರು ನೂರಾರು ಹೆಣ್ಣುಮಕ್ಕಳು ಕಳೆದ ವರ್ಷ ಇಲ್ಲಿರತಕ್ಕ ಒಂದು ಹೈಸ್ಕೂಲಿಗೆ ಸೇರಲಾಗದೆ ಅವರು ಬಹಳ ಬೇಸತ್ತು ಸರಕಾರದವರೊಡನೆ ಹೋರಾಟ ನಡೆಸುವ ಸಂದರ್ಭವೂ ಬಂದಿತ್ತು. ಈಚೆಗೆ ಇಲ್ಲಿನ ಮುನಿಸಿಪಾಲಿಟಿಯವರು ಹೆಣ್ಣುಮಕ್ಕಳಿಗಾಗಿ ಒಂದು ಶಾಲೆಯನ್ನು ವ್ಯವಸ್ಥೆ ಮಾಡಿದ್ದಾರೆ. ಇದು ಸಾಲದು. ಈ ದೃಷ್ಟಿಯಿಂದ ಭದ್ರಾವತಿಯಲ್ಲಿ ಇನ್ನೊಂದು ಪ್ರೌಢ ಶಾಲೆಯು ಹೆಣ್ಣು ಮಕ್ಕಳಿಗಾಗಿ ದೊರೆಯುವಂತೆ ವ್ಯವಸ್ಥೆಯನ್ನು ಸಚಿವರು ಏರ್ಪಾಡು ಮಾಡಬೇಕೆಂದು ಈ ಸಂದರ್ಭದಲ್ಲಿ ಸೂಚನೆ ಮಾಡುತ್ತೇನೆ.

ಭದ್ರಾವತಿಯಿಂದ ಸುಮಾರು 400 ಹುಡುಗರು ಶಿವಮೊಗ್ಗದಲ್ಲಿರುವ ಕಾಲೇಜಿಗೆ ಹೋಗುತ್ತಿದ್ದಾರೆ. ಅಲ್ಲಿ ಪಿ.ಯು.ಸಿ. ಕ್ಲಾಸಿಗೂ ಹೋಗುತ್ತಿದ್ದರು. ಆದರೆ ಕಳೆದ ಎರಡು ವರ್ಷಗಳಿಂದ ಸರಕಾರ ಮನಸ್ಸು ಮಾಡಿ ಪಿ.ಯು.ಸಿ. ಕ್ಲಾಸುಗಳನ್ನು ಭದ್ರಾವತಿಯಲ್ಲೇ ತೆರೆದಿದ್ದಾರೆ ಮತ್ತು ಇಲ್ಲಿರುವ ಹೈಸ್ಕೂಲುಗಳಲ್ಲೇ ಸ್ವಲ್ಪ ಹೆಚ್ಚು ಟೈಮನ್ನು ಅಡ್‌ಜಸ್ಟ್ ಮಾಡಿಕೊಂಡು ಬೆಳಗ್ಗೆ ಹಾಗೂ ಸಂಜೆ ಕ್ಲಾಸುಗಳನ್ನು ನಡೆಸುತ್ತ ಸಹಾಯ ಮಾಡಿರುವುದು ಒಂದು ಸಂತೋಷದ ಸಂಗತಿ. ಪಿ. ಯು. ಸಿ. ಓದತಕ್ಕ ಹುಡುಗರು ನಮ್ಮಲ್ಲಿ ಹೇರಳವಾಗಿದ್ದಾರೆ. ಶಿವಮೊಗ್ಗಾಕ್ಕೆ ಹೋಗಬೇಕಾದರೆ ಭದ್ರಾವತಿಯಿಂದ ಬಸ್ಸುಗಳಲ್ಲಿ ಇಲ್ಲವೇ ಟ್ರೇನಿನಲ್ಲಿ ಹೋಗಬೇಕಾಗಿದೆ. ಇದರಿಂದ ಬಡ ಮಕ್ಕಳಿಗೆ ಬಹು ತೊಂದರೆಯಾಗಿದೆ. ಅಲ್ಲದೆ ಇಲ್ಲಿ ಕಾರ್ಖಾನೆಗಳಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕರೇ ಹೇರಳವಾಗಿರುವುದರಿಂದ ಅವರಿಗೆ ಬರತಕ್ಕ ಸಂಬಳ ಅವರ ಖರ್ಚಿಗೂ ಸಾಲದೇ ಇರುವುದರಿಂದ ಅವರುಗಳು ತಮ್ಮ ಮಕ್ಕಳನ್ನು ಕಾಲೇಜುಗಳಿಗೆ ಕಳುಹಿಸಲು ಬಹಳ ತೊಂದರೆಯಾಗಿದೆ. ಈ ದೃಷ್ಟಿಯಿಂದ ನಮ್ಮ ಮಾನ್ಯ ವಿದ್ಯಾ ಸಚಿವರು ನಮ್ಮ ಭದ್ರಾವತಿಗೆ ಒಂದು ಪ್ರಥಮ ದರ್ಜೆಯ ಕಾಲೇಜು ದೊರೆಯುವಂತೆ ಏರ್ಪಾಡು ಮಾಡಬೇಕೆಂದು ಸಲಹೆ ಮಾಡುತ್ತೇನೆ. ಅಲ್ಲದೆ ಇಲ್ಲಿ ಇಂತಹ ಒಂದು ಕಾಲೇಜನ್ನು ಮಾಡುವುದರಿಂದ ಸರಕಾರಕ್ಕೆ ಖರ್ಚು ಕೂಡ ಕಡಿಮೆ ಬರುತ್ತದೆ ಎಂದು ಇಲ್ಲಿ ಹೇಳುತ್ತೇನೆ. ಇಲ್ಲಿರುವ ಕಬ್ಬಿಣದ ಕಾರ್ಖಾನೆಯವರು ಅವರ ಮ್ಯಾನೇಜುಮೆಂಟಿನ ಕಡೆಯಿಂದ ಇಲ್ಲಿಗೆ ಪ್ರಥಮ ದರ್ಜೆ ಕಾಲೇಜನ್ನು ಮಾಡಿದರೆ ಅದಕ್ಕೆ ಬೇಕಾಗುವ ಸ್ವಲ್ಪ ಹಣವನ್ನೂ ನಾವು ಕೊಡುತ್ತೇವೆಂದು ಅವರೇ ಮುಂದೆ ಬಂದಿದ್ದಾರೆ ಮತ್ತು ಅವರು ಮುಂದೆ ಬರುತ್ತಾರೆಂಬ ನಂಬಿಕೆ ನನಗೂ ಇದೆ. ನಮ್ಮ ಮಾನ್ಯ ವಿದ್ಯಾ ಸಚಿವರು ಕಾರ್ಖಾನೆಯವರೊಡನೆ ಕಲೆತು ಸರಕಾರವೂ ಸ್ವಲ್ಪ ಹಣ ಕೊಟ್ಟು ಇಲ್ಲಿಗೆ ಒಂದು ಪ್ರಥಮ ದರ್ಜೆಯ ಕಾಲೇಜು ದೊರೆಯುವ ವ್ಯವಸ್ಥೆಯನ್ನು ಮಾಡಬೇಕೆಂದು ಸೂಚಿಸುತ್ತೇನೆ. ಕಾರ್ಖಾನೆಯವರು ಅವರ ಪಾಲಿನ ವೆಚ್ಚವನ್ನೂ ಕೊಡಲು ಮುಂದೆ ಬರುತ್ತಿರುವುದರಿಂದ ದಿನೇ ದಿನೇ ಅಭಿವೃದ್ಧಿಗೆ ಬರುತ್ತಿರುವ ಭದ್ರಾವತಿ ಪಟ್ಟಣಕ್ಕೆ ಒಂದು ಕಾಲೇಜು ಅವಶ್ಯಕವಾಗಿ ಆಗಬೇಕು. ಸುಮಾರು ಇನ್ನು ಮೂರು ನಾಲ್ಕು ವರ್ಷಗಳಲ್ಲಿ ಇಲ್ಲಿನ ಜನಸಂಖ್ಯೆ ಒಂದು ಲಕ್ಷದವರೆಗೂ ಹೋಗಬಹುದು. ಈಗ ಇರತಕ್ಕ ಶಾಲೆಗಳಿಂದ ಬರುವ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಇಲ್ಲಿ ಒಂದು ಪ್ರಥಮ ದರ್ಜೆ ಕಾಲೇಜನ್ನು ಮಾಡಿಕೊಡುತ್ತಾರೆ ಎಂದು ನಾನು ಪ್ರಾರ್ಥಿಸಿಕೊಂಡು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ. ಮಾದಯ್ಯಗೌಡ (ರಾಮನಗರಂ).—ಮಾನ್ಯ ಅಧ್ಯಕ್ಷರೇ, ವಿದ್ಯಾಭ್ಯಾಸ ಒಂದು ಉನ್ನತ ಮಟ್ಟದ ರೀತಿಯಲ್ಲಿ ನಡೆಯದೇ ಇದ್ದರೆ ಪ್ರಗತಿಗೆ ಬರಲಾರದು ಎಂದು ಇಲ್ಲಿ ಆತ್ಮಸಾಕ್ಷಿಯಾಗಿ ನಂಬಿರುವ ಮನುಷ್ಯರಲ್ಲಿ ನಾನೂ ಒಬ್ಬನಾಗಿದ್ದೇನೆ. ಆದರೆ ಏನು ದುರಾದೃಷ್ಟವೋ ನಮ್ಮ ವಿದ್ಯಾಭ್ಯಾಸದ ಇಲಾಖೆ ಎಷ್ಟು ದಕ್ಷತೆಯಿಂದ ಎಷ್ಟು ವಿಚಕ್ಷಣೆಯಿಂದ, ಎಷ್ಟು ಚೆನ್ನಾಗಿ ನಡೆಯಬೇಕೋ ಅಷ್ಟು ಚೆನ್ನಾಗಿ ನಡೆಯುತ್ತಿಲ್ಲ ಎಂದು ನಾನಾದರೂ ಬಹಳ ದುಃಖ ಪಡುತ್ತಿದ್ದೇನೆ. ವಿದ್ಯಾಭ್ಯಾಸದ ಇಲಾಖೆಯಲ್ಲಿ ಏನು ಇನ್ಸ್‌ಪೆಕ್ಟರುಗಳು ಎಂದು ಇದ್ದಾರೋ ಅವರುಗಳಲ್ಲಿ ಎಷ್ಟೋ ಜನ ತಮ್ಮ ಕೆಲಸಕಾರ್ಯಗಳನ್ನು ಸರಿಯಾಗಿ ಮಾಡುತ್ತಿಲ್ಲ, ಈಗಿರುವ ಇನ್ಸ್‌ಪೆಕ್ಟರುಗಳು ಏನೇನೂ ಸಾಲದು. ಸರಿಯಾಗಿ ಮೇಲ್ವಿಚಾರಣೆ ನಡೆಸುವುದಕ್ಕಾಗುತ್ತಿಲ್ಲ. ಪ್ರೈಮರಿ ಶಾಲೆಗಳಲ್ಲಿರುವ ಉಪಾಧ್ಯಾಯರುಗಳು ಸ್ವೇಚ್ಛೆಯಾಗಿ ವರ್ತಿಸುವುದಕ್ಕೆ ಅವಕಾಶ ಕೊಡುತ್ತಿದ್ದಾರೆ. ಅನೇಕ ಗ್ರಾಮಗಳಲ್ಲಿ ಪ್ರಾಥಮಿಕ ಶಾಲೆಗಳಲ್ಲಿರುವ ಉಪಾಧ್ಯಾಯರುಗಳು ರಾಜಕೀಯಕ್ಕೆ ಇಳಿದು ದಾಂಧಲೆಗಳನ್ನು ನಡೆಸುತ್ತಿದ್ದಾರೆ ಇವರುಗಳನ್ನು ಸರಿಯಾಗಿ ಕಂಟ್ರೋಲು ಮಾಡಲು ಇನ್ಸ್‌ಪೆಕ್ಟರುಗಳೇ ಇಲ್ಲ. ಈಗ ಮೇಲ್ವಿಚಾರಣೆ ಮಾಡುತ್ತಿರುವ ಇನ್ಸ್‌ಪೆಕ್ಟರುಗಳಿಗೇ ಕೆಲಸ ಜಾಸ್ತಿ. ಅದರಿಂದ ಅವರು ಹೆಚ್ಚಾಗಿ ಮೇಲ್ವಿಚಾರಣೆ ಸರಿಯಾಗಿ ಇಟ್ಟುಕೊಳ್ಳಲು ಆಗುತ್ತಿಲ್ಲ. ಅಲ್ಲದೆ ಈಗ ಇರುವ ಇನ್ಸ್‌ಪೆಕ್ಟರುಗಳೇ ಅವರು ಸರಿಯಾಗಿ ಮೇಲ್ವಿಚಾರಣೆ ಮಾಡಿ ಕೆಲಸಮಾಡಬೇಕೆಂದು ಏನು ಇಲಾಖೆಯವರು ಮಾಡಿಕೊಂಡಿದ್ದಾರೋ ಅದರಂತೆ ಕೆಲಸಗಳು ಮಾಡುತ್ತಿಲ್ಲ ಎಂದು ನಾನು ಬಹಳ ವ್ಯಸನದಿಂದ ಇಲ್ಲಿ ಹೇಳಬೇಕಾಗಿದೆ. ಮೇಲೆ ಇರತಕ್ಕ ಅಧಿಕಾರಿಗಳು ಮೇಲ್ವಿಚಾರಣೆಯನ್ನು ಯಾವ ರೀತಿಯಾಗಿ ನೋಡುತ್ತಾರೆ ಎಂದರೆ, ಇಲ್ಲಿರುವವರಿಗೆ ಯಾವ ಮೇಲಿನ ಅಧಿಕಾರಿಗಳ ಭಯವೂ ಇಲ್ಲ ಎನ್ನುವ ಮನೋಭಾವನೆ ಬಂದಿರುವುದರಿಂದ ಮುಂದೆ ಬರಲಿರುವ ಭಾವೀ ವಿದ್ಯಾರ್ಥಿಗಳ ವಿದ್ಯಾಭ್ಯಾಸ ಮುಂದುವರಿಯುವುದಾದರೂ ಹೇಗೆ, ಇಲ್ಲಿ ಒಬ್ಬರಿಗೊಬ್ಬರಿಗೆ ಸಾಮರಸ್ಯವಿಲ್ಲದೆ ಇರುವುದರಿಂದ ಇದರ ದುಷ್ಪರಿಣಾಮಗಳು ದೇಶಕ್ಕೆ ಒಂದು ಅಘಾತವಾಗುತ್ತದೆ ಎಂದು ವ್ಯಸನದಿಂದ ಇಲ್ಲಿ ನಾನು ಹೇಳುತ್ತೇನೆ. ಇವೊತ್ತಿನ ವಿದ್ಯಾಭ್ಯಾಸದ ವಿಷಯವಾಗಿ ಹೇಳುವುದಾದರೆ, ಎಲ್ಲಿ ವಿದ್ಯಾರ್ಥಿಗಳು ಹೆಚ್ಚಾಗಿದ್ದಾರೋ ಅದಕ್ಕೆತಕ್ಕಷ್ಟು ಸಂಖ್ಯೆಯಲ್ಲಿ ಅಲ್ಲಿ ಸ್ಕೂಲುಗಳಿಲ್ಲ. ಅಲ್ಲದೆ ಇರುವ ಸ್ಕೂಲುಗಳಲ್ಲೇ ದಕ್ಷತೆ ಬೆಳೆಯದಿದ್ದರೆ ಭಾವೀ ಪ್ರಜೆಗಳು ಎಂದು ಓದಲು ಇಲ್ಲಿಗೆ ಯಾರು ಬರುತ್ತಾರೋ ಅವರಿಗೆ ಸರಿಯಾದ ವಿದ್ಯೆ ದೊರೆಯದೇ ಹೋದರೆ ಅದರಿಂದೇನು ಫಲಕೊಡಿಸಿದಂತಾಗುತ್ತದೆ ? ಇದರಿಂದ ಮುಂದೆ ಏನು ಅನಾಹುತವಾಗುತ್ತೋ ಎಂದು ಯೋಚಿಸುವವರಲ್ಲಿ ನಾನೂ ಒಬ್ಬನಾಗಿದ್ದೇನೆ. ಇದನ್ನು ಎಲ್ಲ ಪ್ರಜೆಗಳೂ ವಿಚಾರ ಮಾಡುವಂತಹುದು. ಅನೇಕ ಪ್ರೌಢ ಶಾಲೆಗಳಲ್ಲಿ ನೂರಕ್ಕೆ ಸುಮಾರು 10—15 ಜನ ಮಾತ್ರ ಪರೀಕ್ಷೆಗಳಲ್ಲಿ ಕುಳಿತು ಪಾಸು ಮಾಡುತ್ತಿದ್ದಾರೆ. ಈಗ ಪ್ರೌಢ ಶಾಲೆಗಳಿಗೆ ಓದಲು ಸಾವಿರಾರು ಮಕ್ಕಳು ಹೋಗುತ್ತಿದ್ದಾರೆ. ಪ್ರತಿ ವರ್ಷದಲ್ಲೂ ಪರೀಕ್ಷೆಗಳಿಗೆ ಕುಳಿತುಕೊಳ್ಳುತ್ತಾರೆ. ಸುಮಾರು 1500 ಜನರಿರುವ ಶಾಲೆಗಳಲ್ಲಿ ನೂರು ಮಕ್ಕಳು ಮಾತ್ರ ಪಾಸಾಗುತ್ತ ಇದ್ದಾರೆ. ಬಾಕಿ ಮಕ್ಕಳು ಏನಾಗುತ್ತಾರೆ ? ಇದನ್ನು ವಿದ್ಯಾ ಇಲಾಖೆಯವರು ಯೋಚನೆ ಮಾಡಬೇಕು. ಉದಾಹರಣೆಯಾಗಿ, ನಮ್ಮ ರಾಮನಗರದಲ್ಲಿರುವ ಪ್ರೌಢಶಾಲೆಯಲ್ಲಿ ಕಳೆದ ಎರಡು ವರ್ಷಗಳಿಂದಲೂ ಶೇಕಡಾ 12 ಅಥವಾ 13 ರಷ್ಟು ಜನ ಪರೀಕ್ಷೆಗಳಲ್ಲಿ ಕುಳಿತು ಪಾಸು ಮಾಡುತ್ತಿದ್ದಾರೆ. ಬಾಕಿ ಉಳಿದ 700 ಅಥವಾ 800 ಜನ ಹುಡುಗರು ಪ್ರತಿ ವರ್ಷವೂ ಕುಳಿತುಕೊಳ್ಳುತ್ತಾರೆ. ಮತ್ತು ಅವರ ತಂದೆತಾಯಿಗಳಿಂದ ಪರೀಕ್ಷೆಗಾಗಿ ಶುಲ್ಕವನ್ನೂ ಕಟ್ಟಿದರೂ ಅವರುಗಳು ಪಾಸಾಗುವುದಿಲ್ಲ. ಅವರು ಒಂದು ಸಾರಿ ಅಥವಾ ಎರಡು ಸಾರಿ ಫೇಲ್ ಆದವರು ಎಂದು ಇವರಿಗೆ ಸ್ಕೂಲುಗಳಿಗೆ ಹೋಗಲು ಅವಕಾಶವಿಲ್ಲ. ಇವರೆಲ್ಲಾ ಬೀದಿಯ ಮಕ್ಕಳಾಗಿದ್ದಾರೆ, ಎಂದು ಇಲ್ಲಿ ನಾನು ವ್ಯಸನದಿಂದ ಹೇಳಬೇಕಾಗಿದೆ. ಹೀಗೆ ಸುಮಾರು 700-800 ಜನ ಬೀದಿಯ ಮಕ್ಕಳಾದರೆ ಮುಂದೆ ಇವರ ಗತಿಯೇನು ? ಈ ರೀತಿಯ ಭಾವನೆ ನನಗೆ ಒಬ್ಬನಿಗಲ್ಲ, ದೇಶದ ಆಡಳಿತವನ್ನು ಹೊತ್ತಿರುವ ಎಲ್ಲರ ಭಾವನೆಯೂ ಇದೇ ಆಗಿದೆ. ಹೀಗೆ ಅನೇಕ ಊರುಗಳಲ್ಲಿರುವ ಶಾಲೆಗಳಲ್ಲೂ ಆಗುತ್ತಿದೆ. ಸರಿಯಾದ ವಿದ್ಯಾಭ್ಯಾಸವಿಲ್ಲದೆ ವರ್ಷಂಪ್ರತಿ ಬಹಳ ದೊಡ್ಡ ಸಂಖ್ಯೆಯಲ್ಲಿ ಮಕ್ಕಳು ನಾಪಾಸಾಗುತ್ತಿರುವುದನ್ನು ನಾವು ನೋಡುತ್ತಲೇ ಇದ್ದೇವೆ.

3-00 P.M.

ಅನೇಕ ಶಾಲೆಗಳಲ್ಲಿ ಉಪಾಧ್ಯಾಯರುಗಳೇ ಇಲ್ಲ. ಇದ್ದರು ಯೋಗ್ಯರಾದ ಉಪಾಧ್ಯಾಯರುಗಳು ಇಲ್ಲ, ಎಲ್ಲರ ವಿಚಾರದಲ್ಲೂ ನಾನು ಆ ರೀತಿ ಹೇಳುತ್ತಾ ಇಲ್ಲ. ಯೋಗ್ಯರಾದವರೂ ಇದ್ದಾರೆ ಆದರೆ ಅಂಥವರ ಸಂಖ್ಯೆ ಬಹಳ ಕಡಿಮೆ. ಅನೇಕ ಹೈಸ್ಕೂಲುಗಳಲ್ಲಿ ಉಪಾಧ್ಯಾಯರುಗಳಲ್ಲಿ ವೈಷಮ್ಯ ಇವೆ. ಅವನು ಆ ತರಹ ಇವನು ಈ ತರಹ, ಹಾಗೆ, ಹೀಗೆ ಅಂತ. ಕೆಲವ್ ಹೈಸ್ಕೂಲುಗಳಲ್ಲಿ ನನ್ನ ಗಮನಕ್ಕೆ ಬಂದಿರುವಂತೆ ಶಾಲೆ ನಡೆಯುವಾಗ ಮಕ್ಕಳ ಎದುರಿಗೆ

ಉಪಾಧ್ಯಾಯರು ವ್ಯಾಜ್ಯವಾಡುವುದು, ಕಚ್ಚಾಡುವುದು. ಹೊಡೆದಾಡುವುವು, ಬಡಿದಾಡುವುದು ಇದೆಲ್ಲಾ ಆಗುತ್ತಾ ಇರುತ್ತದೆ. ಇದರಿಂದ ಎಷ್ಟು ಮಟ್ಟಿಗೆ ಮಕ್ಕಳು ಉಪಾಧ್ಯಾಯರ ಉದಾಹರಣೆಯನ್ನು ಅನುಸರಿಸಿ ಒಳ್ಳೆಯ ಹುಡುಗರಾಗಿ ಬೆಳೆಯಬಹುದು, ಎಷ್ಟುಮಟ್ಟಿಗೆ ಅನುಕೂಲವಾಗಬಹುದು ಎಂಬುದನ್ನು ತಾವು ಯೋಚನೆ ಮಾಡಬೇಕು. ಹೆಚ್ಚು ಪ್ರಮಾಣದಲ್ಲಿ ವಿದ್ಯಾಭ್ಯಾಸವನ್ನು ಬೆಳೆಸುವುದಕ್ಕೆ ಹೊರಟ್ಟಿದ್ದೇವೆ. ಆದರೆ ಅಷ್ಟೇ ಸಂಖ್ಯೆಯ ವಿದ್ಯಾವಂತರಾಗಿ ಬೆಳೆಯುವುದಕ್ಕೆ ಸಹಾಯಮಾಡಿ ಕೊಡಬೇಕು. ನನಗಾದರೂ ಅನಿಸುತ್ತದೆ, ನಮ್ಮ ಹಿರಿಯರ ಕಾಲದಲ್ಲಿ ಜನ ಅಕ್ಷರಸ್ಥರಾಗಿರಲಿಲ್ಲ, ಆದರೆ ವಿದ್ಯಾವಂತರಾಗಿದ್ದರು. ಈಗಿನ ಮಕ್ಕಳು ವಿದ್ಯಾವಂತರು ಎಂದು ಅನಿಸಿಕೊಳ್ಳುತ್ತಾರೆ, ಎಸ್.ಎಸ್.ಎಲ್.ಸಿ. ಬಿ.ಎಸ್.ಸಿ., ಬಿ.ಎ ಪಾಸ್ ಮಾಡಿದ್ದೇವೆ ಎಂದು ಅನ್ನುತ್ತಾರೆ. ಆದರೆ ಅವರ ವಿದ್ಯಾಭ್ಯಾಸ ಎಂತಹ ವಿದ್ಯಾಭ್ಯಾಸವೋ ನನಗಂತೂ ಅರ್ಥವಾಗುವುದಿಲ್ಲ. ಇದಕ್ಕೆ ಸರಿಯಾದ ಗಮನ ಕೊಡದಿದ್ದರೆ ನಾವು ಏನು ಕಷ್ಟಪಟ್ಟು ರಾಜ್ಯವನ್ನು ಕಟ್ಟಿದ್ದೇವೆಯೋ ಅದು ಏನಾಗುತ್ತದೆಯೋ ಹೇಳಲಾರೆ.

ನಮ್ಮ ಮಿತ್ರರು ಮೂಲಶಿಕ್ಷಣದ ವಿಷಯವನ್ನು ಹೇಳುತ್ತಾ ಇದ್ದರು. ಅದು ಬಹಳ ಒಳ್ಳೆಯದು ಎಂದು ಮಹಾತ್ಮಾಗಾಂಧಿಯವರು ಏರ್ಪಾಡು ಮಾಡಿದರು. ಅದರಿಂದ ದೇಶಕ್ಕೆ ಒಳ್ಳೆಯದಾಗುತ್ತದೆ, ವಿದ್ಯಾಭ್ಯಾಸದ ಪದ್ಧತಿ ಉತ್ತಮವಾಗುತ್ತದೆ ಎಂಬ ಭಾವನೆಯಿಂದ ಮಾಡಿದರು. ಇವತ್ತಿನ ದಿವಸ ನಮ್ಮ ವಿದ್ಯಾಇಲಾಖೆಯಲ್ಲಿ ಈ ಮೂಲ ಶಿಕ್ಷಣ ಪದ್ಧತಿಯಲ್ಲಿ ನಂಬಿಕೆಯೇ ಇಲ್ಲದ ಜನ ಇದರ ಆಡಳಿತವನ್ನು ನಡೆಸುತ್ತಾ ಇದ್ದಾರೆ. ಇದರಿಂದ ಎಷ್ಟು ಮಟ್ಟಿಗೆ ಈ ಮೂಲ ಶಿಕ್ಷಣ ಪದ್ಧತಿ ಜಾರಿಗೆ ಬರುತ್ತದೆಯೋ ಹೇಳುವುದು ಕಷ್ಟ. ನಾನು ಒಂದು ಪ್ರಶ್ನೆ ಕೇಳುತ್ತೇನೆ. ಬೆಂಗಳೂರು ಪಟ್ಟಣದಲ್ಲಿ ಎಷ್ಟು ಮೂಲ ಶಿಕ್ಷಣ ಶಾಲೆಗಳು ಇವೆ? ಅವುಗಳಿಗೆ ಅಧಿಕಾರಿಗಳು ಎಷ್ಟು ಜನರು ತಮ್ಮ ಮಕ್ಕಳನ್ನು ಕಳುಹಿಸುತ್ತಾರೆ? ಮಂತ್ರಿಗಳು ಎಷ್ಟು ಜನ ತಮ್ಮ ಮಕ್ಕಳನ್ನು ಅಲ್ಲಿಗೆ ಕಳುಹಿಸುತ್ತಾರೆ, ಅವರಿಗೆ ಅದರಲ್ಲಿ ನಂಬಿಕೆ ಇದ್ದರೆ ಅಲ್ಲಿಗೆ ಏಕೆ ಕಳುಹಿಸಬಾರದು? ಇದು ಗ್ರಾಮಾಂತರ ವಾಸಿಗಳಿಗೆ ಎಂದು ಹೇಳುತ್ತಾರೆ. ಇದು ದೊಡ್ಡ ದೊಡ್ಡ ಪಟ್ಟಣಗಳಲ್ಲಿರತಕ್ಕ ಅಧಿಕಾರಿಗಳ ಮಕ್ಕಳಿಗೆ ಆದದ್ದಲ್ಲ ಆದ್ದರಿಂದ ನಮ್ಮ ಮಕ್ಕಳಿಗೂ ಸಹ ಇದರಿಂದ ಪ್ರಯೋಜನವಿಲ್ಲ ಎಂದು ಹೇಳಿ ಗ್ರಾಮವಾಸಿಗಳೂ ತಮ್ಮ ಮಕ್ಕಳನ್ನು ಅಲ್ಲಿಗೆ ಕಳುಹಿಸುತ್ತಾ ಇಲ್ಲ. ಹೀಗಾಗಿ ಈ ಮೂಲ ಶಿಕ್ಷಣ ಶಾಲೆಗಳಿಗೆ ಗ್ರಾಮಾಂತರಗಳಲ್ಲಿ ಯಾವ ಉತ್ತೇಜನವೂ ದೊರೆಯುತ್ತಿಲ್ಲ ಎಂದು ಹೇಳಬಯಸುತ್ತೇನೆ.

''ಮಿಡ್ ಡೇ ಮೀಲ್'' ವಿಚಾರವಾಗಿ ಒಂದು ಮಾತು ಹೇಳಿ ಮುಗಿಸುತ್ತೇನೆ. ಮಧ್ಯಾನದ ಹೊತ್ತು ಪ್ರಾಥಮಿಕ ಶಾಲೆಗಳ ಮಕ್ಕಳಿಗೆ ಊಟ ಉಪಚಾರಕ್ಕಾಗಿ ಏರ್ಪಾಡು ನಡೆದಿದೆ. ಕೇರ್ ಸಂಸ್ಥೆಯವರು ಹಣ ಕೊಡುತ್ತಾರೆ. ಅನೇಕ ಮಕ್ಕಳು ಒಂದು ಹೊತ್ತು ಅನ್ನ ಅದರಿಂದ ಪಡೆಯುತ್ತಾ ಇದ್ದರೆ, ಅದರಿಂದ ಬಹಳ ಮಟ್ಟಿಗೆ ಸಹಾಯವಾಗಿದೆ. ಆದರೆ ಅವರ ವಿದ್ಯಾಭ್ಯಾಸ ಇದರಿಂದ ಬಹುಮಟ್ಟಿಗೆ ಕುಂಠಿತವಾಗುತ್ತಿದೆ. ಏಕೆಂದರೆ, ಇದನ್ನು ತಯಾರುಮಾಡುವುದು, ಮಕ್ಕಳಿಗೆ ಹಂಚುವುದು ಇದರಲ್ಲಿ ಉಪಾಧ್ಯಾಯರು ಮತ್ತು ಮಕ್ಕಳು ಬಹಳ ಕಾಲವನ್ನು ತೆಗೆದುಕೊಳ್ಳುತ್ತಾರೆ. ಇದರಿಂದ ಅವರಿಗೆ ಪ್ರಯೋಜನವಾಗುವುದಕ್ಕೆ ಬದಲಾಗಿ ತೊಂದರೆಯಾಗುತ್ತಾ ಇದೆ. ನಾನಾದರೂ ಈ ಸಂದರ್ಭದಲ್ಲಿ ಏನು ಸೂಚನೆ ಕೊಡುವುದಕ್ಕೆ ಉದ್ದೇಶಪಡುತ್ತೇನೆ ಎಂದರೆ, ಕೇರ್ ಸಂಸ್ಥೆಯವರಾಗಲಿ, ಸರ್ಕಾರದವರಾಗಲಿ ಅಲ್ಲಿ ಉಪ್ಪಿಟ್ಟು, ಕಾಫಿ ಹಂಚುವುದಕ್ಕೆ ಬದಲಾಗಿ ಬಿಸ್ಕತ್ತು ಅಥವಾ ಇನ್ನಾವುದಾದರೂ ತಿಂಡಿಯನ್ನು ತಯಾರು ಮಾಡಿ ಅದನ್ನು ಒಂದೇ ಸಲ ಉದ್ದಕ್ಕೂ 10—15 ನಿಮಿಷದಲ್ಲಿ ಹಂಚುವುದಕ್ಕೆ ಏರ್ಪಾಡು ಮಾಡುವುದರಿಂದ ಅವರಿಗೂ ಒಳ್ಳೆಯದಾಗುತ್ತದೆ ಮತ್ತು ಮಕ್ಕಳಿಗೆ ಆಹಾರ ಸಿಕ್ಕಿ ದಷ್ಟಪುಷ್ಟವಾಗಿ ಬೆಳೆಯುವುದಕ್ಕೂ ಅವಕಾಶವಾಗುತ್ತದೆ. ಉಪಾಧ್ಯಾಯರುಗಳ ಕಾಲ ವ್ಯರ್ಥವಾಗುವುದು ತಪ್ಪುತ್ತದೆ. ಮತ್ತು ಅವರು ಇದನ್ನು ವಿಚಕ್ಷಣೆಯಿಂದ ಮಾಡಲಿಲ್ಲ ದುರುಪಯೋಗ ಪಡಿಸಿದರು ಎಂಬ ಅಪಕೀರ್ತಿಯೂ ಸಹ ತಪ್ಪುತ್ತದೆ. ಇಷ್ಟು ಲಕ್ಷ ಮಕ್ಕಳಿಗೆ ಆಹಾರ ಕೊಡುತ್ತೇವೆ ಎನ್ನುವುದಕ್ಕೆ ಬದಲಾಗಿ ಅಥವಾ ಬೆನ್ನು ತಟ್ಟಿಕೊಳ್ಳುವುದಕ್ಕೆ ಬದಲಾಗಿ ವಿದ್ಯಾಭ್ಯಾಸದ ದೃಷ್ಟಿಯಿಂದ ಎಷ್ಟುಮಟ್ಟಿಗೆ ಪ್ರಯೋಜನವಾಗುತ್ತದೆ ಎಂಬುದನ್ನು ಮಾನ್ಯ ಮಂತ್ರಿಗಳು ದಯಮಾಡಿ ಯೋಚನೆ ಮಾಡಬೇಕು.

ಕಡೆಯದಾಗಿ ಬಾಲಕಿಯರ ವಿದ್ಯಾಭ್ಯಾಸಕ್ಕೆ ಇನ್ನೂ ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ರಾಮನಗರಕ್ಕೆ ಒಂದು ಬಾಲಕಿಯರ ಪ್ರೌಢ ಪಾಠಶಾಲೆಯನ್ನು ಪಡೆಯಬೇಕೆಂದು ಬಹಳ ಪ್ರಯತ್ನಪಟ್ಟೆ. ನಮ್ಮ ವಿದ್ಯಾಮಂತ್ರಿಗಳು ಕೊಡಬಾರದು. ಎಂದು ಹಠಮಾಡಿದರು. ಅದರ ಹತ್ತಿರದಲ್ಲೇ ಪಕ್ಕದಲ್ಲಿ ಒಂದು ಹೈಸ್ಕೂಲು ನಡೆಯುತ್ತಾ ಇದೆ ಅಲ್ಲಿಗೇ ರಾಮನಗರದ ಮಕ್ಕಳು ನದಿ ದಾಟಿಕೊಂಡು ತೊಂದರೆಯಾದರೂ ಕೂಡ ಹೋಗಬೇಕು ಎಂದು ಹೇಳಿ ಹಟ ಮಾಡಿದರು. ಮಾನ್ಯ ಮುಖ್ಯ ಮಂತ್ರಿಗಳು

(ಶ್ರೀ ಟಿ. ಮಾದಯ್ಯ ಗೌಡ)

ಕೊಡಬೇಕಾದ್ದು ನ್ಯಾಯ ಕಣ್ರೀ ಅಂತ ಹೇಳಿದರು. ಊರಿನವರೂ ಸಹ ಅನೇಕ ಸಲ ಪ್ರಯತ್ನ ಮಾಡಿದರು ಕೊನೆಗೆ ಕೇಳೀ ಕೇಳೀ ಸಾಕಾಗಿ ಕೈ ಮುಗಿದು ನಾನು ತೆಪ್ಪಗೆ ಕುಳಿತಿದ್ದೇನೆ. ಇನ್ನೇನೂ ಮಾಡುವುದಕ್ಕಾಗಲಿಲ್ಲ. ಒಟ್ಟಿನಲ್ಲಿ ಈ ಶಿಕ್ಷಣ ದಕ್ಷತೆಯಿಂದ ವಿಚಕ್ಷಣೆಯಿಂದ ನಡೆಯಬೇಕು. ಸ್ವಾರ್ಥ ದೃಷ್ಟಿಯಿಂದ ನಡೆಸತಕ್ಕ ಅಭ್ಯಾಸದಿಂದ ದೇಶಕ್ಕೆ ಅನುಕೂಲವಾಗದೇ ಹೋದರೆ ದೇಶಕ್ಕೆ ಕೆಟ್ಟ ಪರಿಣಾಮವಾಗುತ್ತದೆ, ಅಂತಹ ಕೆಟ್ಟ ಪರಿಣಾಮವಾಗುವುದಕ್ಕೆ ಮಾನ್ಯ ವಿದ್ಯಾಮಂತ್ರಿಗಳು ಕಾರಣರಾದರು ಎನ್ನತಕ್ಕ ಒಂದು ಅಪಕೀರ್ತಿಗೆ ತಾವು ಗುರಿಯಾಗದೇ ಇರಲಿ ಎಂದು ತಮ್ಮನ್ನು ಪ್ರಾರ್ಥನೆ ಮಾಡಿ, ದೇವರನ್ನು ಪ್ರಾರ್ಥನೆಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

† Sri VIDYADHAR GURUJI SAYANNA (Gurmitkal).—(*In Hindi*).

ಶ್ರೀಮತಿ ಚಂಪಾಬಾಯಿ ಬೋಗಲೆ (ಸಂಕೇಶ್ವರ).—ಮಾನ್ಯ ಅಧ್ಯಕ್ಷರೇ, ಈಗ ಸಭೆಯ ಮುಂದೆ ಇರುವ ವಿದ್ಯಾ ಇಲಾಖೆಯ ಬೇಡಿಕೆಗಳನ್ನು ಅನುಮೋದಿಸುತ್ತಾ ಒಂದೆರಡು ಸಲಹೆ ಕೊಡಲು ಇಚ್ಛಿಸುತ್ತೇನೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದಮೇಲೆ ವಿದ್ಯಾಭ್ಯಾಸದ ವಿಚಾರದಲ್ಲಿ ನಾವು ಬಹಳ ಮುಂದುವರಿಸಿದ್ದೇವೆ. ಸ್ವಾತಂತ್ರ್ಯ ಪೂರ್ವದಲ್ಲಿ ನಮ್ಮ ದೇಶದೊಳಗೆ ಎಷ್ಟು ಪ್ರಾಥಮಿಕ ಶಾಲೆಗಳು ಹೈ ಸ್ಕೂಲುಗಳು ಇದ್ದವು ಈಗ ಎಷ್ಟು ಇವೆ ಇದನ್ನು ಮೊದಲು ವಿಚಾರ ಮಾಡಿ ನೋಡಬೇಕು. ಈಗ ಆರ್ಟ್ಸ್ ಕಾಲೇಜು, ಸೈಯನ್ಸ್ ಕಾಲೇಜು, ಎಂಜಿನಿಯರಿಂಗ್ ಕಾಲೇಜು, ಮೆಡಿಕಲ್ ಕಾಲೇಜು ಇವುಗಳನ್ನು ಸರಕಾರ ವ್ಯವಸ್ಥೆ ಮಾಡಿದೆ. ಇದಕ್ಕಾಗಿ ನಾವು ಸರಕಾರವನ್ನು ಹೊಗಳಬೇಕಾಗುತ್ತದೆ. ನಮ್ಮ ದೇಶ ಇದೇ ರೀತಿ ಮುಂದುವರಿಯಲಿ ಎಂದು ನಾನು ಹಾರೈಸುತ್ತೇನೆ. ಇನ್ನು ಸರಕಾರಕ್ಕೆ ಕೆಲವು ಸಲಹೆಗಳನ್ನು ನೀಡುತ್ತೇನೆ.

3-30 P.M.

ಶ್ರೀಮಾನ್ ಮಾದಯ್ಯಗೌಡ ರವರು ಮಾತನಾಡುತ್ತಾ ಏನು ಕೆಲವು ಸಲಹೆಗಳನ್ನು ಮಾಡಿದ್ದಾರೆಯೋ ಅವುಗಳನ್ನು ನಾನು ಅನುಮೋದಿಸುತ್ತೇನೆ. ಸರಕಾರ ಶಿಕ್ಷಣ ಕ್ಷೇತ್ರದಲ್ಲಿ ಮುಂದುವರಿದಿದೆ. ಆದರೆ ಇನ್ನೂ ಹೆಚ್ಚು ಮುಂದುವರಿಯಬೇಕು. ಶಿಕ್ಷಕರ ವೃತ್ತಿಯಲ್ಲಿ ಸಾಕಷ್ಟು ಬಿಗಿ ಇಲ್ಲ. ವಿದ್ಯಾಭ್ಯಾಸದ ವಿಚಾರದಲ್ಲ ಯಾವಾಗಲೂ ಬಿಗಿ ಇಟ್ಟುಕೊಳ್ಳಬೇಕಾದುದು ಅಗತ್ಯ. ಬರೀ ಸ್ನೋ ಪಾವಡರ್ ಹಚ್ಚಿದಂತೆ ಶಿಕ್ಷಕರು ನಕಲಿಯಾಗುತ್ತಿದ್ದಾರೆ. ಈ ರೀತಿ ಅವರು ನಕಲಿ ಆಗಬಾರದು. ವಿದ್ಯಾಭ್ಯಾಸದ ವಿಚಾರದಲ್ಲಿ ಅವರು ಬಿಗಿಯಾಗಿರಬೇಕು. ಶಾಲಾ ಮಾಸ್ತರರು ಬಿಗಿಯಾಗಿದ್ದರೆ ಇಂದಿನ ಮಕ್ಕಳು ನಾಳಿನ ನಾಗರೀಕರಾಗತಕ್ಕವರು ಯೋಗ್ಯರಾದ ಸತ್ಪ್ರಜೆಗಳಾಗಿ ದೇಶ ಮುಂದೆ ಬರುವಂತೆ ಮಾಡುತ್ತಾರೆ. ಆಗ್ಗೆ ನಾವೂ ನೀವೂ ಇರುವುದಿಲ್ಲ. ನಾವು ನೀವೂ ಹೋಗಿಬಿಟ್ಟಿರುತ್ತೇವೆ. ಈಗ ಪ್ರತಿ ವರ್ಷ ನಮ್ಮ ಸರ್ಕಾರ ಶಾಲೆಗಳ ಪಠ್ಯ ಪುಸ್ತಕಗಳನ್ನು ಬದಲಾವಣೆ ಮಾಡುತ್ತಾರೆ. ಬದಲಾವಣೆಯಾಗುವುದಕ್ಕೆ ಒಂದು ಮಿತಿ ಇರಬೇಕು, ಎಂದು ಹೇಳುತ್ತೇನೆ. 3 ವರ್ಷಕ್ಕೆ ಒಂದು ಸಾರಿ ಬದಲಾವಣೆಯಾಗಬೇಕು. ಪ್ರಾಥಮಿಕ ಶಾಲೆ ಮಟ್ಟದಲ್ಲಿ ಕೆಲಸಗಳು ಸರಿಯಾಗಿ ನಡೆಯುತ್ತಿಲ್ಲ. ಪ್ರತಿದಿನವೂ ಕನ್ನಡ, ಭೂಗೋಳ, ಗಣಿತದ ಜೊತೆಗೆ ಡ್ಯಾನ್ಸನ್ನು ಹೇಳಿಕೊಡುತ್ತಾರೆ. ವಾರಕ್ಕೆ ಡ್ಯಾನ್ಸ್‌ಗಾಗಿ 8 ಗಂಟೆಯನ್ನು ಹಾಳುಮಾಡುತ್ತಾರೆ. ವಾರಕ್ಕೆ ಒಂದು ದಿನ ಇಟ್ಟುಕೊಂಡರೆ ಒಳ್ಳೆಯದು. ಇಲ್ಲದಿದ್ದರೆ ಮಕ್ಕಳಿಗೆ ಸರಿಯಾಗಿ ಎಜುಕೇಷನ್ ಮುಟ್ಟುವುದಿಲ್ಲವೆಂದು ಹೇಳಬೇಕಾಗಿದೆ. ಮೊದಲಿನ ವಿದ್ಯಾಭ್ಯಾಸಕ್ಕೂ, ಈಗಿನ ವಿದ್ಯಾಭ್ಯಾಸಕ್ಕೂ ಬಹಳ ಅಂತರವಿದೆ. ಹಳ್ಳಿಯ ಕಡೆ ಶಾಲೆಯೊಳಗೆ ಉಪಾಧ್ಯಾಯರುಗಳು ರಾಜಕೀಯ ವಿಚಾರ ಮಾತನಾಡುತ್ತಿರುತ್ತಾರೆ. ಮಕ್ಕಳಿಗೆ ಸರಿಯಾಗಿ ವಿದ್ಯಾಭ್ಯಾಸವನ್ನು ಕೊಡುವುದಿಲ್ಲ. ಹೆಣ್ಣುಮಕ್ಕಳನ್ನು ಪ್ರತಿಯೊಂದು ಜಿಲ್ಲೆಯಲ್ಲೂ ಕೆಲಸಕ್ಕೆ ತೆಗೆದುಕೊಳ್ಳುತ್ತಿದ್ದೀರಿ, ಅದು ಒಳ್ಳೆಯ ಸಂತೋಷದ ವಿಷಯ. ಇವರು ಮಕ್ಕಳನ್ನು ತಮ್ಮ ಮಕ್ಕಳಂತೆ ತಿಳಿದುಕೊಂಡು ಸಂಬಾಳಿಸಿಕೊಂಡು ಯೋಗ್ಯ ರೀತಿಯಲ್ಲಿ ಶಿಕ್ಷಣವನ್ನು ಕೊಡುತ್ತಾರೆ. ಗಂಡು ಮಕ್ಕಳಿಗಿಂತ ಹೆಣ್ಣು ಮಕ್ಕಳಿಗೆ ಹೆಚ್ಚಿನ ಮಹತ್ವ ಕೊಡಬೇಕೆಂದು ಹೇಳುತ್ತೇನೆ. ಹೆಣ್ಣು ಮಕ್ಕಳಿಗೆ ಹೆಚ್ಚಿನ ಸೌಲಭ್ಯ ಕೊಡಬೇಕು. ಶಿಕ್ಷಕಿಯರಿಗೆ ಕೆಲಸದಲ್ಲಿ ತರಬೇತಿ ಕೊಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ಮರಾಟಿ ಟ್ರೈನಿಂಗ್ ಕಾಲೇಜನ್ನು ಬೆಳಗಾಂನಲ್ಲಿ ತೆಗೆದಿದ್ದಾರೆ. ಅದೇ ರೀತಿ ಧಾರವಾಡಕ್ಕೂ ಒಂದು ಟ್ರೈನಿಂಗ್ ಕಾಲೇಜನ್ನು ಮಾಡಿಕೊಡಬೇಕು. ಅದೇ ರೀತಿ ಬೆಳಗಾಂನಲ್ಲಿ ಒಂದು ಕನ್ನಡ ಟ್ರೈನಿಂಗ್ ಕಾಲೇಜನ್ನು ಕೊಡಬೇಕು. ಈಗ ಧಾರವಾಡದಲ್ಲಿ ಕನ್ನಡ ಟ್ರೈನಿಂಗ್ ಕಾಲೇಜ್ ಇದೆ. ಈಗ ನಮ್ಮ ಊರಿನಿಂದ ಮರಾಠಿ ಕಾಲೇಜಿನಲ್ಲಿ ಟ್ರೈನಿಂಗ್‌ಗಾಗಿ ಬೆಳಗಾಂಗೆ ಬರುತ್ತಿದ್ದಾರೆ. ಅವರಿಗೆ ಬಹಳ ಅನಾನು

ಕೂಲವಾಗುತ್ತಿದೆ, ಇವರಿಗೆ ಸಂಬಳ ಸರಿಯಾಗಿ ಕಾಲ ಕಾಲಕ್ಕೆ ಕೊಡುವುದಿಲ್ಲ, ಈ ಕೊರತೆಗಳನ್ನು ಹೇಳಿಕೊಳ್ಳಲು ಎಮ್. ಎಲ್. ಎ. ಗಳ ಬಳಿ ಬರುತ್ತಾರೆ. ಆದ್ದರಿಂದ ಪ್ರತಿಯೊಂದು ಜಿಲ್ಲೆಯಲ್ಲೂ ಒಂದೊಂದು ಟ್ರೈನಿಂಗ್ ಕಾಲೇಜನ್ನು ತೆಗೆಯುವುದು ಒಳ್ಳೆಯದು. ಮತ್ತು ಅವರಿಗೆ ಸರಿಯಾದ ರೀತಿಯಲ್ಲಿ ಟ್ರೈನಿಂಗ್ ಕೊಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಎರಡನೇಯದಾಗಿ ನಮ್ಮ ಸರ್ಕಾರದವರು ಶಾಲೆಗಳಲ್ಲಿ ಮಧ್ಯಾಹ್ನದ ಊಟ (ಮಿಡ್ಡೇಮೀಲ್ಸ್) ಕೊಡುತ್ತಿದ್ದಾರೆ. ಇದರಲ್ಲಿ ಸ್ವಲ್ಪ ಬದಲಾವಣೆಯಾಗಬೇಕು. ಮಕ್ಕಳನ್ನು ಶಾಲೆಗಳಲ್ಲಿ ಒಂದು ಕಡೆ ಕೂರಿಸಿ ಬಿಸ್‌ಕತ್ ಮತ್ತು ಬಾಳೆಹಣ್ಣುಗಳನ್ನು ಕೊಡುವುದು ಒಳ್ಳೆಯದು. ಅನ್ನ ಕೊಡುವುದು ಸರಿಯಲ್ಲ. ಏಕೆಂದರೆ ಅಕ್ಕಿಯಲ್ಲಿ ಬೆರಕೆ ಇರುತ್ತದೆ. ಕೆಲವು ಹುಡುಗರಿಗೆ ಅದು ಸರಿಯಾಗಿ ಜೀರ್ಣವಾಗುವುದಿಲ್ಲ. ಅಲ್ಲದೆ ಅನ್ನ ಮಾಡುವುದಕ್ಕೆ 2-3 ತಾಸು ಹಾಳಾಗುತ್ತದೆ, ಹೆಚ್ಚು ಹಣವೂ ಖರ್ಚಾಗುತ್ತದೆ.

ಈಗಿನ ಮಕ್ಕಳಲ್ಲಿ 100 ಕ್ಕೆ 99 ಸರಿಯಾಗಿ ಪಾಸಾಗುವುದಿಲ್ಲ. ಈಗಿನ ಲೆಕ್ಕದ ಪ್ರಕಾರ 100 ಕ್ಕೆ 25 ಮಕ್ಕಳು ಪಾಸಾಗುತ್ತಾರೆ. ಕಾರಣ ಮಕ್ಕಳಿಗೆ ಸರಿಯಾಗಿ ವಿದ್ಯಾಭ್ಯಾಸ ಸಿಕ್ಕುವುದಿಲ್ಲ. ಎಷ್ಟು ಟೀಕೆ ಮಾಡಿದರೂ ಉಪಾಧ್ಯಾಯರುಗಳು ಮಕ್ಕಳಿಗೆ ಸರಿಯಾಗಿ ವಿದ್ಯಾಭ್ಯಾಸ ಕೊಡುವುದಿಲ್ಲ. ಈ 10 ವರ್ಷದೊಳಗೆ ನಮ್ಮ ರಾಜ್ಯ ಸ್ಲೋ ಪೌಡರ್ ಮಯವಾಗಿದೆ. ವಿದ್ಯಾಭ್ಯಾಸ ಮಾತ್ರ ಮುಂದುವರಿಯಲಿಲ್ಲ. ಶಿಕ್ಷಕರಿಗೆ ಮತ್ತು ಶಿಕ್ಷಕಿಯರಿಗೆ ಹಳ್ಳಿಗಳಲ್ಲಿ ಸರಿಯಾಗಿ ಮನೆಗಳು ಸಿಕ್ಕುವುದಿಲ್ಲ. ನೀರಿನ ವ್ಯವಸ್ಥೆ ಚೆನ್ನಾಗಿರುವುದಿಲ್ಲ. ಆದ್ದರಿಂದ ಸರ್ಕಾರದವರು ಇವರಿಗಾಗಿ ಪ್ರತಿಯೊಂದು ಹಳ್ಳಿಯಲ್ಲೂ ಕೆಲವು ಮನೆಗಳನ್ನು ಕಟ್ಟಿಸಬೇಕು. ಇಲ್ಲದಿದ್ದರೆ ಶಿಕ್ಷಕರು ಅಲ್ಲಿಗೆ ಹೋಗದೆ ವರ್ಗಕ್ಕಾಗಿ ಪ್ರಯತ್ನ ಮಾಡುತ್ತಾರೆ. ವರ್ಷ ವರ್ಷ ಪುಸ್ತಕಗಳನ್ನು ಬದಲಾವಣೆ ಮಾಡುವುದು ಸರಿಯಲ್ಲ, ಅದಕ್ಕೆ ಒಂದು ಮಿತಿ ಇರಬೇಕು. ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

[MR. SPEAKER in the Chair.]

MR. SPEAKER.—Before I call upon anybody, let me understand the position. The Hon'ble Minister has to reply. Having regard to the debate, the number of Cut Motions and the volume that has to be covered, he may require some time; and if I am to give that, there will be very little time left over and nothing at all for the others. I am, therefore, suggesting that we may extend the time. I suppose it suits the Hon'ble Minister, because his reply will be tomorrow. I suppose there are some more Members who are desirous of speaking. I am trying to have the rest of the day for the debate subject to one condition, that we do not dig into other demands as it happened with demand on "Administration." Let there be full debate. Let the Members have full satisfaction. I must take the consent of the House. There will be no Question Hour tomorrow; 1½ hours for reply and the rest of the time for the day will be utilised for the Members to participate in the Debate. I also heard the Hon'ble Minister giving prompt replies then and there; half-an-hour he has used; when Sri Suryanarayana Rao was talking something, reply was given. So, there is not that accumulated reply to be given. It has been pruned and finalised. I am not going to the merits of the reply; that is none of my concern. The debate will go on till evening today. Tomorrow, we shall begin at 12·30 P.M. with no Question Hour; There will be Education Demand and P.W.D. Demand for tomorrow.

†ಶ್ರೀ ಅಣ್ಣಾರಾವ್ ಗಣಮುಖಿ (ಅಫಜಲ್‌ಪುರ್).—ಮಾನ್ಯ ಅಧ್ಯಕ್ಷರೇ, ಈ ಶಿಕ್ಷಣ ವಲಯದಲ್ಲಿ ಮೈಸೂರು ರಾಜ್ಯ ವಿಶೇಷವಾಗಿ ಪ್ರಗತಿ ಸಾಧಿಸಿದೆ. ಅದರಲ್ಲಿ ಯಾವ ಸಂಶಯವೂ ಇಲ್ಲ. ಆದರೆ ಈ 3 ಅಂತಸ್ತಿನ ಒಂದು ಬಿಲ್ಡಿಂಗ್ ಏನು ಇದೆ ಇದರಲ್ಲಿ ಮುಖ್ಯವಾಗಿ ಯಾವ ಗುಣ

(ಶ್ರೀ ಅಣ್ಣಾರಾವ್ ಗಣಮುಖಿ)

ಇರಬೇಕಾಗಿತ್ತೋ ಅದು ಕಂಡುಬರುವುದಿಲ್ಲ ಎನಿಸುತ್ತದೆ. ಸಂಖ್ಯೆ ವಿಶೇಷವಾಗಿ ಬೆಳೆದಿದೆ. ಆದರೆ ಕ್ವಾಲಿಟಿ ಅಥವಾ ಗುಣ ಮಾತ್ರ ಕಡಿಮೆಯಾಗಿದೆ. ಅದಕ್ಕಾಗಿ ಯಾವುದೇ ಜನಾಂಗದಲ್ಲಿ ಪ್ರಗತಿಯಾಗಬೇಕಾದರೆ ಸಂಖ್ಯೆಗಿಂತಲೂ ಗುಣ ಹೆಚ್ಚಾಗಬೇಕು. ಅದರ ಕಡೆ ವಿಶೇಷವಾಗಿ ಗಮನ ಕೊಡಬೇಕು ಎಂದು ಕಾಣಿಸುತ್ತದೆ. ಒತ್ತಾಯಪೂರ್ವಕವಾಗಿ 1961 ರಿಂದ ಪ್ರಾಥಮಿಕ ಶಿಕ್ಷಣವನ್ನು ನಡೆಸುತ್ತಿದ್ದಾರೆ. ಅದರಲ್ಲಿ ಎಷ್ಟು ಸಾಫಲ್ಯ ಪಡೆದಿದ್ದಾರೆ ಎಂದು ಲೆಕ್ಕ ಹಾಕುವುದಕ್ಕೆ ವಿದ್ಯಾ ಇಲಾಖೆಯವರು ಯಾವ ಒಂದು ಅಂಕಿ ಅಂಶಗಳನ್ನೂ ನಮಗೆ ಒದಗಿಸಿಲ್ಲ. ಅದು ಬಹಳ ವಿಷಾದಕರ ಎಂದು ಅನಿಸುತ್ತದೆ. ಈ ಒತ್ತಾಯ ಶಿಕ್ಷಣ ಪ್ರಾರಂಭವಾದಂದಿನಿಂದ ಒಂದನೆಯ ತರಗತಿಗೆ ಮಕ್ಕಳು ಸೇರಿದ ನಂತರ ನಾಲ್ಕನೆಯ ತರಗತಿಯವರೆಗೂ ಅವರು ಮುಂದುವರಿಯುತ್ತಾರೆಯೇ ಮತ್ತು ಇದರಲ್ಲಿ ವೇಸ್ಟೇಜ್ ಏನು ಎಂಬುದನ್ನು ತಿಳಿದುಕೊಂಡಿದ್ದಾರೆಯೆ? ಇದರಲ್ಲಿ ವೇಸ್ಟೇಜ್ ಎಷ್ಟು ಆಗಿದೆ ಎಂದು ಲೆಕ್ಕ ಹಾಕಬೇಕು. ಹಿಂದೆ 1956-57 ರಲ್ಲಿ ಅಖಿಲಭಾರತ ಅಂಕಿಸಂಖ್ಯೆಗಳ ಪ್ರಕಾರ 64 ಪರ್ಸೆಂಟು ಇತ್ತು ಎಂದು ಹೇಳುತ್ತಾರೆ. ಈಗ ಒತ್ತಾಯಪೂರ್ವಕ ಶಿಕ್ಷಣ ಬಂದನಂತರ ಈ ವೇಸ್ಟೇಜ್ ಇರಬಾರದು. ವೇಸ್ಟೇಜ್ ಸಂಪೂರ್ಣವಾಗಿ ಹೋಗಿಬಿಡಬೇಕು ಎನ್ನುವ ವಿಚಾರದಲ್ಲಿ ಯಾವ ಸಂಶಯವೂ ಇಲ್ಲ. ವೇಸ್ಟೇಜ್ ಮತ್ತು ರಿಟಾರ್ಡೇಷನ್ ಪ್ರಶ್ನೆ ಬರುತ್ತದೆ. ವೇಸ್ಟೇಜ್ ಆಗಲಿಕ್ಕೆ ಮುಖ್ಯ ಕಾರಣ ಬಡತನ. ಬಡತನದಿಂದ ಮಕ್ಕಳಿಗೆ ಎರಡನೆಯ ಕೆಲಸ ಹಚ್ಚುತ್ತಾರೆ. ಈ ಪರಿಸ್ಥಿತಿಯಲ್ಲಿ ಹುಡುಗರು ಶಾಲೆ ಬಿಟ್ಟುಬಿಡುತ್ತಾರೆ. ಒತ್ತಾಯ ಶಿಕ್ಷಣದಲ್ಲಿ ಒಂದು ಕ್ರಮ ಎಂದರೆ, ಮೊದಲನೆ ವರ್ಗದಲ್ಲಿ ಹುಡುಗರು ಯಾರು ಸೇರುತ್ತಾರೆ, ಅವರು 5 ವರ್ಷಗಳ ತನಕ ಅಥವಾ 4 ವರ್ಷಗಳ ತನಕ ವಿದ್ಯಾಭ್ಯಾಸವನ್ನು ಮುಂದುವರಿಸುತ್ತಾರೆಯೇ, ನಿಜವಾಗಿ ಎಲ್ಲಾ ಹುಡುಗರೂ ಶಾಲೆಯಲ್ಲಿ ಇದ್ದಾರೆಯೇ ಎಂಬುದನ್ನು ಲೆಕ್ಕ ಹಾಕಬೇಕು. ಇಲ್ಲದೇ ಹೋದರೆ ಮೊದಲು ಶಿಕ್ಷಣದಲ್ಲಿ ಯಾವ ಪ್ರಕಾರ ವೇಸ್ಟೇಜ್ ಇತ್ತು, ಈಗಲೂ ಹಾಗೆಯೇ ಆಗುತ್ತದೆ. ಹಿಂದೆ ನಡೆದ ಸರ್ವೆ ಪ್ರಕಾರ ಸುಮಾರು 50 ಪರ್ಸೆಂಟು ವೇಸ್ಟೇಜು ಇತ್ತು. ಹಾಗೆ ಶೇಕಡ 50ರಷ್ಟು ವೇಸ್ಟೇಜ್ ಆಗಿದ್ದರೆ, ಅಷ್ಟು ಹಣ ಪುಕ್ಕಟೆ ಹೋಯಿತು ವ್ಯರ್ಥವಾಯಿತು ಎಂದು ಲೆಕ್ಕ ಹಾಕಬಹುದು. ಮಿಡಲ್ ಸ್ಕೂಲ್ ಸ್ಟೇಜಿನಲ್ಲಿ ಕೂಡ 1956-57ರ ಸರ್ವೆಯಲ್ಲಿ 40 ಪರ್ಸೆಂಟು ವೇಸ್ಟೇಜು ಆಗುತ್ತದೆ, ಹೈಸ್ಕೂಲ್‌ನಲ್ಲಿ 50 ಪರ್ಸೆಂಟು ವೇಸ್ಟೇಜು ಇದೆ ಎಂದು ಹೇಳಿದ್ದಾರೆ. ಹೀಗೆ ವಿದ್ಯಾಭ್ಯಾಸ ಎಷ್ಟರ ಮಟ್ಟಿಗೆ ಸಾಫಲ್ಯ ಆಗಿದೆ ಎಂಬುದನ್ನು ಲೆಕ್ಕ ಹಾಕಬೇಕಾದರೆ, ವೇಸ್ಟೇಜ್ ಮತ್ತು ಸ್ಟಾಗ್‌ನೇಷನ್ ಹೇಗೆ ಆಗಿದೆ ಎಂದು ನೋಡಬೇಕು. ಸ್ಟ್ಯಾಗ್‌ನೇಷನ್ ಎಂದರೆ ಯಾವ ಶಾಲೆಯಲ್ಲಿ ಉತ್ತಮವಾದ ಅಧ್ಯಾಪಕರು ಇಲ್ಲವೋ, ಯಾವ ಶಾಲೆಯಲ್ಲಿ ತಕ್ಕ ಸಲಕರಣೆ ಇಲ್ಲವೋ, ಯಾವ ಶಾಲೆಯಲ್ಲಿ ಉಪಾಧ್ಯಾಯರು ಎಷ್ಟುಬೇಕು ಅಷ್ಟು ಸಂಖ್ಯೆಯಲ್ಲಿ ಇಲ್ಲವೋ, ಶಾಲಾ ಮಕ್ಕಳಿಗೆ ಅರ್ನೆಸ್ಟ್‌ನೆಸ್ ಇಲ್ಲವೋ ಅಲ್ಲಿ ಸ್ಟಾಗ್‌ನೇಷನ್ ಆಗುತ್ತದೆ ಎಂದು ಹೇಳುತ್ತಾರೆ. ಈ ರೀತಿ ಅಂಕಿ ಸಂಖ್ಯೆಗಳನ್ನು ಸರ್ಕಾರದವರು ಈ ಅಸೆಂಬ್ಲಿ ಮೂಲಕ ಜನರ ಮುಂದೆ ಇಡಬೇಕಾಗುತ್ತದೆ, ಎಷ್ಟು ಹುಡುಗರಿಗೆ ಶಾಲೆಗಳಲ್ಲಿ ಒಂದು ಕ್ಲಾಸಿನಿಂದ ಮತ್ತೊಂದು ಕ್ಲಾಸಿಗೆ ಪ್ರಮೋಷನ್ ಆಗಿಲ್ಲ, ಎಷ್ಟು ವರ್ಷದಿಂದ ಉಳಿದುಕೊಂಡಿದ್ದಾರೆ ಪ್ರಮೋಷನ್ ಎಷ್ಟು ಹುಡುಗರಿಗೆ ಸಿಕ್ಕಿದೆ, ಇದರ ಮೇಲೆ ಎಜುಕೇಷನ್‌ನಿನ ಪ್ರಗತಿ ನಿರ್ಧರವಾಗುತ್ತದೆ. ಅದಕ್ಕೋಸ್ಕರವಾಗಿ ಎಷ್ಟು ಹುಡುಗರು ಶಾಲೆಗಳನ್ನು ಬಿಟ್ಟಿದ್ದಾರೆ ಸ್ಟ್ಯಾಗ್ನೇಶನ್ ಎಷ್ಟು ಆಗಿದೆ ಎಂಬುದನ್ನು ಅಂಕಿಸಂಖ್ಯೆಗಳ ಮೂಲಕ ಈ ಸದನದ ಮುಂದೆ ವಿದ್ಯಾ ಮಂತ್ರಿಗಳು ಇಟ್ಟರೆ ಬಹಳ ಉತ್ತಮವಾಗುತ್ತದೆ ಎಂದು ನನಗೆ ಅನಿಸುತ್ತದೆ. ಇದರಲ್ಲಿ ವಿಶೇಷವಾಗಿ ಟೀಚರ್ಸ್‌ಗೆ ಯಾವ ಒಂದು ಸ್ಥಾನ ಇರಬೇಕು ಮತ್ತು ಅವರ ಮೂಲಕ ಏನು ಏನು ಕೆಲಸ ತೆಗೆದುಕೊಳ್ಳಬೇಕು ಎಂಬುದಕ್ಕೆ ಎರಡನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಪ್ರಕಾರ ಹೇಳಿದ್ದಾರೆ "He is the pivot in the system of Education" ಎಂದರೆ ಅವನೇ ವಿದ್ಯೆಯ ಆಧಾರ ಸ್ತಂಭ. ಅದಕ್ಕಾಗಿ "Quality of the teacher is the quality of the School" ಎಂದು ಹೇಳುತ್ತಾರೆ. ಯಾವ ನಮೂನೆ ಕ್ವಾಲಿಟಿ ಟೀಚರ್ ಇರುತ್ತಾರೋ ಅದೇ ನಮೂನೆ ಸ್ಕೂಲ್ ಇರುತ್ತದೆ ಎಂದು ಹೇಳುತ್ತಾರೆ. ಈ ದೃಷ್ಟಿಯಿಂದ ನೋಡಿದರೆ ಎಲ್ಲರೂ ಟೀಚರ್ ಮೇಲೆ ಹಾರಿ ಬೀಳುತ್ತಾರೆ. ಟೀಚರ್ ಅಲ್ಲ, ಅವನು ಪಾಲಿಟೀಷಿಯನ್ ಎಂದು ಒಂದು ಕಡೆ ಹೇಳುತ್ತಾರೆ. ಹುಡುಗರಿಗೆ ಓದಿಸುವುದಿಲ್ಲ ಎಂದು ಹೇಳುತ್ತಾರೆ. "Right type of teacher, right type of school and right type of education" ಎಂದು ಮೂರು ತರಹ ಇದೆ, ಈಗ ಈ ಮೂರೂ ಇಲ್ಲ ಎಂದು ಅರ್ಥವಾಗುತ್ತದೆ. ಇನ್ನು ಆ ಕಡೆ ಒಬ್ಬ ಮಾನ್ಯ ಸದಸ್ಯರು, ಉಪಾಧ್ಯಾಯರು ಪಾಲಿಟಿಕ್ಸ್ ಮಾಡುತ್ತಾರೆ, ಹುಡುಗರು ಶಾಲೆಯಲ್ಲಿ ಕಲಿಯುವುದಿಲ್ಲ, ಅವರು

ಪಾಲಿಟಿಕ್ಸ್ ಮಾಡುತ್ತಾರೆ, ಶಾಲೆಯಲ್ಲಿ ಅವ್ಯವಸ್ಥೆ ಆಗಿದೆ ಎಂದು ಹೇಳಿದರು. ಇದರಿಂದ ಶಾಲೆಗಳಿಗೆ ಒಳ್ಳೆಯ ಟೀಚರ್ಸ್ ಬರಲಿಲ್ಲ ಎಂದು ಅರ್ಥವಾಗುತ್ತದೆ. ಟೀಚರ್ಸ್ ಸರಿಯಾಗಿ ನಡೆದುಕೊಳ್ಳದಿದ್ದರೆ ಅದಕ್ಕೆ ಬಹಳ ಮಟ್ಟಿಗೆ ಪಾಲಿಟಿಷಿಯನ್ ಮತ್ತು ಅಡ್ಮಿನಿಸ್ಟ್ರೇಟರ್ಸ್ ಕಾರಣ ಆಗಿದ್ದಾರೆ ಎಂದು ಅನಿಸುತ್ತದೆ. ಉಪಾಧ್ಯಾಯರಲ್ಲಿ ಯಾವ ತರಹ ಕೆಟ್ಟ ಗುಣವೂ ಇಲ್ಲ. ಯಾವುದೇ ಪಾರ್ಟಿಯಾಗಲಿ, ಅವರನ್ನು ಹೊಂದಿಕೊಂಡು ಕೆಲಸ ಮಾಡಿದರೆ ಉತ್ತಮ, ಇಲ್ಲದೇ ಹೋದರೆ ಉಪಾಧ್ಯಾಯರ ಮೇಲೆ ದೂರು ಮಾಡುತ್ತಾರೆ. ಇದನ್ನು ನೋಡಿದರೆ, ನನಗೆ ಅನಿಸುತ್ತದೆ, ನಮ್ಮ ದೇಶದಲ್ಲಿ ಉಪಾಧ್ಯಾಯರಿಗೆ ಯಾವ ಮಾನ ಮರ್ಯಾದೆ ಸಲ್ಲಬೇಕೋ ಆ ಮಾನ ಮರ್ಯಾದೆ ಸಿಕ್ಕುವುದಿಲ್ಲ ಎಂದು. ಯುನೆಸ್ಕೋ ಒಂದು ಪಬ್ಲಿಕೇಷನ್‌ನಲ್ಲಿ "Teacher occupies an honoured and enviable position in American life. He is among the best educated, the most economically secured and the most highly respected" ಎಂದು ಹೇಳಿದ್ದಾರೆ. ಉಪಾಧ್ಯಾಯರಿಗೆ ಸಮಾಜ ಜೀವನದಲ್ಲಿ ಸ್ಥಾನಮಾನ ಏನು ಇರಬೇಕು, ಅವರಿಗೆ ಗೌರವ ಏನು ಕೊಡಬೇಕು, ಎಕನಾಮಿಕಲ್ ಸೆಕ್ಯೂರಿಟಿ ಏನು ಕೊಡಬೇಕು ಎಂಬುದನ್ನು ಆಲೋಚನೆ ಮಾಡಿ ಅವನ್ನೆಲ್ಲ ಕೊಡಬೇಕು. ಹಾಗಿಲ್ಲದೆ ಈಗ ಶಿಕ್ಷಣ ಕ್ಷೇತ್ರದಲ್ಲಿ ರಾಜಕಾರಣಿಗಳು ಮತ್ತು ಆಡಳಿತಗಾರರು ಸೇರಿಕೊಂಡು ಅವರನ್ನು ಹಾಳು ಮಾಡಿದ್ದಾರೆ ಎಂದು ಹೇಳಬಹುದು. ಎಜುಕೇಷನ್ ಎಂತಹವರ ಕೈಯಲ್ಲಿ ಇರಬೇಕು? ಟೀಚರ್ಸ್ ಕೈಯ್ಯಲ್ಲಿ ಅಥವಾ ನಿಜವಾದ ಎಜುಕೇಷನ್‌ನಿಸ್ಟ್ ಕೈಯಲ್ಲಿ ಇದ್ದರೆ ಬಹಳ ಉತ್ತಮ ಎಂದು ಅನಿಸುತ್ತದೆ. ಹಿಂದಿನ ಕಾಲಕ್ಕೆ ಶ್ರೀ ದೇವೇಗೌಡ ಡಿ.ಪಿ.ಐ. ಆಗಿದ್ದಾಗ ಹೇಳಿದರು, ಒಬ್ಬ ಟೀಚರ್ ನೇಮಕವಾದ ದಿವಸದಿಂದ ರಿಟೈರ್ ಆಗುವವರೆಗೂ ಒಂದೇ ಶಾಲೆಯಲ್ಲಿ ಇದ್ದು ಕೆಲಸ ಮಾಡಿದರೆ ಅದಕ್ಕಿಂತ ಎಫಿಷಿಯನ್ಸಿ ಎಲ್ಲೂ ಸಿಕ್ಕುವುದಿಲ್ಲ. "I am dead against transfers" ಎಂದು. ಶಿಕ್ಷಣಕ್ಕೆ ಸಂಬಂಧಪಟ್ಟ ವಿಚಾರಗಳಲ್ಲಿ ನಾವು ಹಸ್ತಕ್ಷೇಪ ಮಾಡಬಾರದು. Administrators too much interfere ಮಾಡುತ್ತಾರೆಂದು ನನಗೆ ಅನಿಸುತ್ತದೆ. ಮಾನ್ಯ ಸದಸ್ಯರು ಹೈದರಾಬಾದ್ ಕರ್ನಾಟಕ ಸಂಬಂಧವಾಗಿ ಒಂದು ಸರ್ಕಾರಿ ಆರ್ಡರ್ ತಂದಿದ್ದಾರೆ ಎಂದು ಹೇಳಿದರು. ಆದರೆ ಹೈದರಾಬಾದ್ ಕರ್ನಾಟಕಕ್ಕೇ ಅಲ್ಲ, ಅದು ಇಡೀ ಮೈಸೂರು ಸ್ಟೇಟ್‌ಗೆ ಅನ್ವಯಿಸುತ್ತದೆ ಎಂದು ನನಗೆ ಅನಿಸುತ್ತದೆ. ಇಂತಹ ಸರ್ಕಾರಿ ಆರ್ಡರ್ ತೆಗೆದದ್ದು ಶುದ್ಧ ತಪ್ಪು ಎಂದು ನನಗೆ ಅನಿಸುತ್ತದೆ. ಅಡ್ಮಿನಿಸ್ಟ್ರೇಟರ್‌ಗೆ ಎಜುಕೇಷನ್ ಬಗ್ಗೆ ಇಂತಹ ಒಂದು ದುರ್ಭಾವನೆ ಏತಕ್ಕೆ ಬಂದಿದೆ? ಒಂದು ತಾಲ್ಲೂಕಿನಲ್ಲಿ ಒಬ್ಬ ಸ್ಕೂಲ್ ಟೀಚರ್ ಪ್ರಾಪರ್ಟಿ ಇದ್ದರೆ, ಅವನು ಎಷ್ಟೋ ನೆಮ್ಮದಿಯಿಂದ ಇದ್ದು ಶಾಲೆಯಲ್ಲಿ ಕೆಲಸ ಮಾಡುತ್ತಾನೆ. ಅಧ್ಯಾಪಕನ ಆಸ್ತಿಪಾಸ್ತಿ ಇದ್ದ ಪಕ್ಕದ ತಾಲ್ಲೂಕಿನಲ್ಲಿ ಕೂಡ ಹಾಕಬಾರದು ಎಂದು ಮಾನ್ಯ ವಿದ್ಯಾ ಮಂತ್ರಿಗಳಿಗೆ ಯಾವ ಎಜುಕೇಷನಿಸ್ಟ್ ಹೇಳಿದರು ಎಂದು ನನಗೆ ಅರ್ಥವಾಗುವುದಿಲ್ಲ.

ಶ್ರೀ ಎಸ್. ಆರ್. ಕಂಠಿ.—ಅದು ನಿಮ್ಮದೇ ಆರ್ಡರ್.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಅವನು ಪ್ರಾಪರ್ಟಿ ಅಥವಾ ಆಸ್ತಿ ನೋಡುವುದಕ್ಕೆ ಹೋಗುತ್ತಾನೆ.

ಶ್ರೀ ಅಣ್ಣಾರಾವ್ ಗಣಮುಖಿ.—ಅದು ಬಹಳ ತಪ್ಪು. ಪ್ರಾಪರ್ಟಿ ಏತಕ್ಕೆ ನೋಡುತ್ತಾನೆ? ಮನೆಯಲ್ಲಿ ಯಾರೂ ಇಲ್ಲವೇ? ಸರ್ವೆಂಟ್ ಕಡೆಯಿಂದ ಮಾಡಿಸುವುದಿಲ್ಲವೇ! ದೂರ ಹೋದರೆ, ಪ್ರತಿನಿತ್ಯ ರಜಾ ತೆಗೆದುಕೊಂಡು ಬರುತ್ತಾನೆ. ಅವನ ಮನಸ್ಸು ಓದಿಸುವ ಕಡೆ ಇರುವುದಿಲ್ಲ, ಮನೆ ಕಡೆ ಇರುತ್ತದೆ. ಆದ್ದರಿಂದ ಅವನನ್ನು ದೂರ ಹಾಕಿದರೆ ತಪ್ಪಾಗುತ್ತದೆ. ಮನುಷ್ಯರು ಎಲ್ಲರೂ ಒಂದೇ ತರಹ. ಅವರಿಗೆ ಬೇಕಾದ ಅನುಕೂಲ ಮಾಡಿಕೊಟ್ಟರೆ ಅವರು ಸರಿಯಾಗಿರುತ್ತಾರೆ. ಅವರಿಗೂ ಸ್ವಲ್ಪ ಮಾನ ಮರ್ಯಾದೆಗಳನ್ನು ಕೊಟ್ಟರೆ ಚೆನ್ನಾಗಿರುತ್ತದೆ. ಶ್ರೀಮಾನ್ ದೇವೇಗೌಡರು ಹೇಳುತ್ತಾರೆ, 30 ವರ್ಷ ಕೂಡ ಒಬ್ಬ ಉಪಾಧ್ಯಾಯನು ಒಂದೇ ಕಡೆ ಇದ್ದರೆ ಅವನು ಚೆನ್ನಾಗಿ ಕೆಲಸಮಾಡುತ್ತಾನೆ ಎಂದು.

ಶ್ರೀ ಎಸ್. ಆರ್. ಕಂಠಿ.—ನೀವು ಹೇಳುವುದು ಯಾರನ್ನೂ ಟ್ರಾನ್ಸ್‌ಫರ್ ಮಾಡಬೇಡಿ, ಪ್ರಾಪರ್ಟಿ ಇದ್ದವರನ್ನು ಅಲ್ಲಿಯೇ ಇಡಿ ಎಂದು ಕಾಣುತ್ತದೆ.

ಶ್ರೀ ಅಣ್ಣಾರಾವ್ ಗಣಮುಖಿ.—ಕೆಲವು ಬಾಂಬೆ ಕರ್ನಾಟಕದಲ್ಲಿರುವ ಸ್ಕೂಲುಗಳಲ್ಲೂ ಏನೂ ಟ್ರಾನ್ಸ್‌ಫರೇ ಇಲ್ಲ. ಅದೇ ಊರಿನ ಕೆಲವು ಮಂದಿ ಟೀಚರ್ಸ್‌ನ್ನು ಇಟ್ಟಿದ್ದಾರೆ. ಯಾವ ಲಿಮಿಟೇಶನೂ ಯಾವುದೂ ಇಲ್ಲ. ಅಲ್ಲಿ ಅವರು ಮನೆಗಳನ್ನು ಮಾಡಿಕೊಂಡು ಇದ್ದಾರೆ. ಆದ್ದರಿಂದ ಇಂತಹ ಸರ್ಕಾರಿ ಆಜ್ಞೆ ಹೊರಡಿಸತಕ್ಕದ್ದು ಶುದ್ಧ ತಪ್ಪು ಎಂದು ನಾನು ಹೇಳುತ್ತೇನೆ.

ಶ್ರೀ ಎಸ್. ಆರ್. ಕಂಠಿ.—ಇದು ಹೊಸದೇನಲ್ಲ. ಅದರಲ್ಲಿ ಹಳೆಯ ಆಜ್ಞೆಗಳನ್ನೇ ಒಟ್ಟುಗೂಡಿಸಿ ಒಂದು ಪತ್ರದ ಜೊತೆಗೆ ಕಳಿಸಿದುದು ಅಷ್ಟೆ.

ಶ್ರೀ ಅಣ್ಣಾರಾವ್ ಗಣಮುಖಿ.—ಈ ಹೈಸ್ಕೂಲುಗಳ ವಿಚಾರದಲ್ಲಿ ಎಷ್ಟೋ ಕಮಿಶನುಗಳು ಸ್ಥಾಪನೆಯಾಗಿವೆ. ಮೊದಲಿಯಾರ್ ಕಮಿಶನ್ ಪ್ರಕಾರ ಮಲ್ಟಿಪರ್ಪಸ್ ಹೈಸ್ಕೂಲುಗಳನ್ನು ಮಾಡಿದ್ದಾರೆ. ಆದರೆ ಎಲ್ಲಿ ಏನೇನು ಸಾಮಗ್ರಿಗಳು ಬೇಕು, ಎಷ್ಟೆಷ್ಟು ಬೇಕೆಂಬುದನ್ನು ಯಾರೂ ನಿಗದಿ ಮಾಡಲಿಲ್ಲ. ಮತ್ತು ಈ ಟೆಕ್ನಿಕಲ್ ಸ್ಕೀಮಾಗಲೀ, ಅಗ್ರಿಕಲ್ಚರಲ್ ಸ್ಕೀಮಾಗಲೀ ಯಾವುದನ್ನೂ ಇಂಟ್ರೊಡ್ಯೂಸ್ ಮಾಡದ ಹಾಗೆ ಕೈಕಟ್ಟಿಕೊಂಡು ಕುಳಿತಿದ್ದಾರೆ.

ಇನ್ನು 11ನೆಯ ಸ್ಟಾಂಡರ್ಡಿಗೂ ಈಗಿರುವ ಪಿ.ಯು.ಸಿ. ಗೂ ಒಂದು ಕೋಆರ್ಡಿನೇಶನ್ ಇಲ್ಲ. ಮೊದಲಿಯಾರ್ ಕಮಿಶನ್ ರಕಮಂಡೇಶನ್ ಏನು ? ಅದನ್ನು ನಮ್ಮ ಮೈಸೂರು ಸರ್ಕಾರದವರು ಒಪ್ಪಿಕೊಳ್ಳಲಿಲ್ಲವೇ ? ಅಗ್ರಿಕಲ್ಚರಲ್ ಮತ್ತು ಟೆಕ್ನಿಕಲ್ ಕೋರ್ಸ್ ಎಲ್ಲೆಲ್ಲಿ ಇವೆ ಅಂತಹ ಕಡೆ ಸರಿಯಾದವರನ್ನು ನೇಮಕಮಾಡಿ ಅನುಕೂಲ ಮಾಡಿಸಿದ್ದಾರೆಯೇ ? ಟೆಕ್ನಿಕಲ್ ಕೋರ್ಸ್ ತೆಗೆದುಕೊಂಡು ಯಾರಾದರೂ ಪಾಸಾಗಿದ್ದರೆ ಇಂಜಿನಿಯರಿಂಗ್ ಕಾಲೇಜ್ ಪ್ರಾಶಸ್ತ್ಯ ಕೊಟ್ಟಿದೆಯೇ ? ಏಕೆಂದರೆ, ಹುಡುಗರಿಗೆ ಮುಂದೆ ಏನೇನು ಎಂಪ್ಲಾಯ್‌ಮೆಂಟ್ ಸಿಗುವುದಕ್ಕೋಸ್ಕರ ಅವರಿಗೆ ಸಾಧ್ಯವಾದ ಮಟ್ಟಿಗೆ ಟೆಕ್ನಿಕಲ್ ನಾಲೆಡ್ಜ್ ಸಿಗುವಂತೆ ಮಾಡಬೇಕು. ಅದನ್ನು ಹೈಸ್ಕೂಲು ಮಟ್ಟದಲ್ಲಿ ಒದಗಿಸಬೇಕು. ಇದರ ವಿಷಯದಲ್ಲಿ ಏನೊಂದು ಕಾರ್ಯಕ್ರಮವನ್ನೂ ತೆಗೆದುಕೊಂಡಿಲ್ಲ. ಬರೇ ಆರ್ಟ್ಸ್ ಮತ್ತು ಸೈನ್ಸ್‌ನ್ನು ಕಾಲೇಜಿನಲ್ಲಿ ಕಲಿಸುತಿತ್ತಾರೆಯೇ ವಿನಹ ಬೇರೇನೂ ಇಲ್ಲ. ಉದಾಹರಣೆಗೆ ಕಮಲಾಪುರದಲ್ಲಿ ಒಂದು ಅಗ್ರಿಕಲ್ಚರಲ್ ಕಾಲೇಜಿಗೆ ಬೇಕಾದಷ್ಟು ಟೀಚರ್ಸ್ ಕೊಟ್ಟಿಲ್ಲ ಮತ್ತು ಬೇಕಾದಂತಹ ಸೌಲಭ್ಯಗಳನ್ನು ಕೊಟ್ಟಿಲ್ಲ.

ಶ್ರೀಮಾನ್ ಕಂಠಿಯವರು ವಿದ್ಯಾ ಇಲಾಖೆ ವಹಿಸಿಕೊಂಡನಂತರ ಕಲವು ವಿಷಯಗಳಿಗೆ ಬಹಳ ಪ್ರಾಶಸ್ತ್ಯ ಕೊಡುತ್ತಾರೆ. ಎಕ್ಸ್‌ಟರ್ನಲ್ ಪರೀಕ್ಷೆಗಳಿಗೆ ಅಷ್ಟು ವಿಶೇಷವಾದ ಮಹತ್ವ ಕೊಡುವುದಿಲ್ಲ. ಇವರು ಬಂದ ನಂತರ ಪರೀಕ್ಷಾ ಪತ್ರಗಳನ್ನು ಇವ್ಯಾಲ್ಯುಯೇಟ್ ಮಾಡುವುದಕ್ಕೋಸ್ಕರ ಎಲ್ಲಾ ಉಪಾಧ್ಯಾಯರುಗಳನ್ನೂ ಇಲ್ಲಿಗೇನೇ ಕರೆಸಿ ಎಲ್ಲರನ್ನೂ ಕೂರಿಸಿಬಿಟ್ಟು ಇವ್ಯಾಲ್ಯುಯೇಟ್ ಮಾಡಿಸುವುದಕ್ಕೆ ಪ್ರಾರಂಭ ಮಾಡಿದರು, ಯಾಕೆಂದರೆ, ಅವರಿಗೆ ಯಾರ ಮೇಲೂ ನಂಬಿಕೆ ಇಲ್ಲ. ಉಪಾಧ್ಯಾಯರುಗಳ ಮೇಲೆ ಇಷ್ಟು ಅಪನಂಬಿಕೆ, ಅವಿಶ್ವಾಸ ತೋರಿಸಿದ ಮೇಲೆ ಅವರು ಹೀಗೆ ಸರಿಯಾಗಿ ಕೆಲಸಮಾಡುವುದು ? ಇವರು ಹೇಳುತ್ತಾರೆ ಮಹಾರಾಷ್ಟ್ರದಲ್ಲಿ ಮಾಡಿದ್ದಾರೆ, ಅದೇ ರೀತಿ ಇಲ್ಲಿ ಮಾಡಿದ್ದು ಎಂದು. ಆದರೆ ಟ್ಯಾಕ್ಸ್ ಹಾಗೂ ಇನ್ನು ಉಳಿದ ಎಲ್ಲಾ ವಿಷಯಗಳಲ್ಲಿಯೂ ಇವರು ಮದ್ರಾಸಿನವರನ್ನು ಅನುಸರಿಸುವಾಗ ಮಹಮದ್‌ಬೀನ್ ತುಗ್ಲಕನ ಹಾಗೆ ಇದರಲ್ಲಿ ಮಾತ್ರ ಇವರು ಮಹಾರಾಷ್ಟ್ರವನ್ನು ಏನು ಅನುಸರಿಸಬೇಕು ? ಮತ್ತು ಇವರ ಈಗಿನ ಪರೀಕ್ಷೆ ಏನಿದೆ, ಅದು ಒಂದು ಪರೀಕ್ಷೆ ಎಂದಾಗುವುದಿಲ್ಲ. ಅದು ಬರೇ ಒಂದು 'ಮೆಮರಿ ಟೆಸ್ಟ್' ತರಹ ಇದೆ. ಹುಡುಗರು ಬರೇ ಗಿಳಿ ಬಾಯಿಪಾಠ ಮಾಡಿದ ರೀತಿ ಮಾಡುತ್ತಾರೆಯೇ ಹೊರತು ಬೇರೇನೂ ಇಲ್ಲ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಈಗ ಪಂಜಾಬಿನಲ್ಲೂ ಕೂಡ 25 ಪರ್‌ಸೆಂಟ್ ಸ್ಕೂಲ್ ರಿಕಾರ್ಡ್ ಏನಿದೆ, ಕ್ಯುಮುಲೇಟಿವ್ ರೆಕಾರ್ಡ್ ಏನಿದೆ, ಅದನ್ನೆಲ್ಲಾ ತೆಗೆದುಕೊಂಡು ಎಕ್ಸಾಮಿನೇಶನ್ ರಿಕಾರ್ಡಿಗೆ ಸೇರಿಸಿಕೊಳ್ಳುತ್ತಾರೆ. ಉಳಿದ 75 ಪರ್‌ಸೆಂಟ್ ಮಾತ್ರ ಪರೀಕ್ಷೆಯಿಂದ ತೆಗೆದುಕೊಳ್ಳುತ್ತಾರೆ. ಹಿಂದೆ 1937 ರಲ್ಲಿ ಬಾಂಬೆ ವೊಕೇಶನಲ್ ಟ್ರೈನಿಂಗ್ ಕಮಿಟಿಯವರು ರೆಕಮಂಡ್ ಮಾಡಿದ್ದಾರೆ. ಅವರು ಈ ಕ್ಲಾಸ್ ರೂಮ್ ರಿಕಾರ್ಡ್, ಪ್ಲೇ ಗ್ರೌಂಡ್ ರಿಕಾರ್ಡ್, ಜನರಲ್ ಆಕ್ಟಿವಿಟಿ ಮೊದಲಾದುವುಗಳನ್ನು ತೆಗೆದುಕೊಂಡು, ಅದರ ಮೇಲೆ ಕಾಲೇಜಿಗೆ ಅಡ್ಮಿಶನ್ ಕೊಡಿ ಎಂದು ಶಿಫಾರಸು ಮಾಡಿದ್ದಾರೆ. ಆದರೆ ಇಲ್ಲಿ ಎಕ್ಸಾಮಿನೇಷನ್‌ಗೆ ಮಾತ್ರ ಮಹತ್ವ ಕೊಟ್ಟುಬಿಟ್ಟಿದ್ದಾರೆ. ಇದು ಶುದ್ಧ ತಪ್ಪು ಎಂದು ಹೇಳುತ್ತೇನೆ.

4-00 P.M.

ಅಮೆರಿಕನ್ ಪದ್ಧತಿಯಲ್ಲಿ ಕೂಡ ಶೇಕಡ 75 ಕ್ಲಾಸ್ ವರ್ಕ್‌ಗೆ ಮತ್ತು ಶೇಕಡ 25 ಇತರ ಚಟುವಟಿಕೆಗಳಿಗೆ ಕೊಟ್ಟು ಕಾಲೇಜುಗಳಿಗೆ ಕೊಟ್ಟು ಕಾಲೇಜುಗಳಿಗೆ ಅಡ್ಮಿಷನ್ ಕೊಡಬೇಕು ಎಂದು ಹೇಳುತ್ತಾರೆ. ಹಾಗೆಯೇ ನಮ್ಮಲ್ಲಿಯೂ ಎಕ್ಸ್‌ಟರ್ನಲ್ ಆಕ್ಟಿವಿಟೀಸ್‌ಗೆ ಅವಕಾಶ ಕೊಡಬೇಕು ಎಂದು ನನ್ನ ಅಭಿಪ್ರಾಯ.

ಕಾಲೇಜು ವಿದ್ಯಾಭ್ಯಾಸದಲ್ಲಿ ಆಂಧ್ರದಲ್ಲಿ ಶ್ರೀ ಬಿ. ಎನ್. ರೆಡ್ಡಿ ಕಮಿಟಿಯವರು ಒಂದು ಸಲಹೆಯನ್ನು ಮಾಡಿದ್ದಾರೆ. ಟೀಚಿಂಗ್ ಸ್ಟಾಫ್ ಮತ್ತು ನಾನ್ ಟೀಚಿಂಗ್ ಸ್ಟಾಫ್ ಇವರಿಗಾಗಿ ಆಗುವ ಖರ್ಚಿನಲ್ಲಿ ನೂರಕ್ಕೆ ನೂರರಷ್ಟು ಗ್ರಾಂಟ್ ಕೊಡಬೇಕು ಎಂದು ಹೇಳಿದ್ದಾರೆ. ನಮ್ಮ ಸರ್ಕಾರದವರು ನೂರಕ್ಕೆ 70 ರಂತೆ ಕೊಡುತ್ತಿದ್ದಾರೆ. ಇದು ಬಹಳ ಕಡಮೆ. ಇನ್ನು ಉಳಿದ 30 ರಷ್ಟನ್ನು ಎಲ್ಲಿಂದ ತರಬೇಕು ? ಉತ್ತರ ಕರ್ನಾಟಕದ ಭಾಗದಲ್ಲಿರುವ ಪೋಷಕರಿಗೆ ಎಷ್ಟು ಭಾರ ಬೀಳುತ್ತದೆ

ಎಂದರೆ ಅವರು ಒಬ್ಬ ಹುಡುಗನಿಗೆ 144 ರೂಪಾಯಿ ಕೊಡಬೇಕು. ಎಲ್ಲಿ ಸರ್ಕಾರಿ ಕಾಲೇಜುಗಳಿವೆ ಅಲ್ಲಿ ಮಾತ್ರ 90 ರೂಪಾಯಿಗಳನ್ನು ಕೊಡುತ್ತಾರೆ. ಇದನ್ನು ತಪ್ಪಿಸಬೇಕಾಗಿದೆ. ಖಾಸಗಿ ಕಾಲೇಜುಗಳು ಡಿಸ್ಟ್ರಿಕ್ಟ್‌ಗಳಲ್ಲಿಲ್ಲ, ನಗರಗಳಲ್ಲಿ ಮಾತ್ರ ಇವೆ. ಎಜುಕೇಶನ್ ಬಿಲ್ ಏನಿದೆ ಅದರಿಂದ ಕೆಲವರಿಗೆ ಹೆಚ್ಚಾಗಿ ಖರ್ಚು ಬೀಳುತ್ತದೆ. ಇದನ್ನು ಏಕರೂಪತೆಗೆ ತರಬೇಕಾದರೆ ಒಂದು ಕೆಲಸ ಮಾಡಬೇಕು ಎಂದು ನನಗನ್ನಿಸುತ್ತದೆ. 50 ಸಾವಿರಕ್ಕಿಂತ ಕಡಮೆ ಜನಸಂಖ್ಯೆ ಇರುವ ಕಡೆ ಸೇಕಡ 90 ರಷ್ಟು ಕೊಡಿರಿ. ಇತರ ಕಡೆಗಳಲ್ಲಿ ಕಡಮೆ ಕೊಡಿರಿ. ಕೊಪ್ಪಳದಲ್ಲಿ 150 ಹುಡುಗರಿದ್ದರೆ ಅಲ್ಲಿ ಕಾಲೇಜನ್ನು ನಡೆಸುವುದಕ್ಕೆ ಸಾಧ್ಯವೇ, ಯಾದಗೀರ್‌ನಲ್ಲಿ ಕಾಲೇಜನ್ನು ನಡೆಸುವುದಕ್ಕೆ ಸಾಧ್ಯವೇ? ಮಾನ್ಯ ಎಸ್. ಕರಿಯಪ್ಪನವರು ಕನಕಪುರದಲ್ಲಿ ಕಾಲೇಜನ್ನು ನಡೆಸುವುದಕ್ಕೆ ಸಾಧ್ಯವೇ ಎನ್ನುವುದನ್ನು ಯೋಚನೆ ಮಾಡಬೇಕು. ಈಗ ಗ್ರಾಂಟ್-ಇನ್-ಏಡ್ ಕೋಡ್ ತಯಾರು ಮಾಡಿರುವುದರಲ್ಲಿ ಸಣ್ಣ ಸಣ್ಣ ಕಾಲೇಜುಗಳಿಗೆ ಹಾನಿಕರವಾಗುತ್ತದೆ. ಅದನ್ನು ರಿವೈಸ್ ಮಾಡಬೇಕು ಎಂದು ಸಲಹೆ ಕೊಡುತ್ತೇನೆ.

ಎಲ್ಲ ದೇಶಗಳ ನ್ಯಾಶನಲ್ ಇನ್‌ಕಂ ತೆಗೆದುಕೊಂಡರೆ ಅದು ಹೆಚ್ಚಿನ ಪ್ರಮಾಣದಲ್ಲಿದೆ. ನಮ್ಮಲ್ಲಿ ಲೆಕ್ಕ ಹಾಕಿದರೆ ನೂರಕ್ಕೆ 2·6 ರಷ್ಟು ವಿದ್ಯಾಭ್ಯಾಸದ ಮೇಲೆ ಹಾಕುತ್ತಾರೆ, ಗ್ರೇಟ್‌ಬ್ರಿಟನ್‌ನಲ್ಲಿ ನೂರಕ್ಕೆ ನಾಲ್ಕೈದರಷ್ಟು, ಜಪಾನ್ ದೇಶದಲ್ಲಿ ಆರು ಮತ್ತು ಸೋವಿಯತ್ ಯೂನಿಯನ್‌ನಲ್ಲಿ ನೂರಕ್ಕೆ ಎಂಟರಷ್ಟು ಇದೆ. ನಮ್ಮಲ್ಲಿ ಹುಡುಗರಾಗಲಿ ಮಕ್ಕಳಾಗಲಿ ಅವರು ರೆಮ್ಯೂನರೇಟಿವ್ ಅಸೆಟ್ ಎಂದು ನಮ್ಮವರು ತಿಳಿಯುವುದಿಲ್ಲ. ನಮ್ಮಲ್ಲಿ ರೆಮ್ಯೂನರೇಟಿವ್ ಅಸೆಟ್ ಎಂದರೆ ಇರಿಗೇಷನ್ ಮುಂತಾದುವು ಎಂದು ಪರಿಗಣಿಸಿದರ ಜನಗಳಲ್ಲಿ ಸ್ಕಿಲ್ ಹೇಗೆ ಬರಬೇಕು, ಇಂಟಲಿಜೆನ್ಸ್ ಹೇಗೆ ಬರಬೇಕು? ಯಾವ ದೇಶದಲ್ಲಿ ಸ್ಕಿಲ್ ಮತ್ತು ಇಂಟಲೆಜೆನ್ಸ್ ಹೆಚ್ಚಾಗಿರುತ್ತದೆಯೋ ಆ ದೇಶದಲ್ಲಿಪ್ರೊಡಕ್ಷನ್ ಹೆಚ್ಚಾಗುತ್ತದೆ. ಬರೀ ಯಂತ್ರಗಳಿಂದ ಆಗುವುದಿಲ್ಲ. ಅಮೆರಿಕದಲ್ಲಿ ಒಂದು ಕತೆಯನ್ನು ಹೇಳುತ್ತಾರೆ. ಒಬ್ಬ ಜಪಾನಿ ಅಮೆರಿಕಕ್ಕೆ ಹೋಗಿದ್ದ. ಅವನು ಹೋಗಿ ನಿಂತಿದ್ದ. ಒಬ್ಬ ಹೆಣ್ಣು ಮಗಳು ಐವತ್ತು ವರ್ಷದವಳು ಕಿಟಕಿಯಲ್ಲಿ ಕುಳಿತಿದ್ದಳು. ಜೋಲಿ ತಪ್ಪಿ ಕೆಳಗೆ ಬಿದ್ದಳು. ಡಸ್ಟ್‌ಬಿನ್‌ನಲ್ಲಿ ಬಿದ್ದಳು. ಜಪಾನಿ ನೋಡಿ ಆ ಹೆಣ್ಣು ಮಗಳು ಇನ್ನೂ ಹತ್ತು ವರ್ಷ ಚೆಲೋ ಕೆಲಸಕ್ಕೆ ಬರುತ್ತಿದ್ದರು, ಅಂಥ ಹೆಣ್ಣು ಮಗಳನ್ನು ಡಸ್ಟ್‌ಬಿನ್‌ನಲ್ಲಿ ಹಾಕಲಿಕ್ಕೆ ಹತ್ತಿದ್ದಾರೆ ಎಂದು ನಗುವುದಕ್ಕೆ ಹತ್ತಿದನಂತೆ. ಸ್ಕಿಲ್ ಮತ್ತು ಇಂಟಲಿಜೆನ್ಸ್ ಅವರಲ್ಲಿ ಹೆಚ್ಚಿಗೆ ಇದೆ; ಎಷ್ಟು ಜನರು ಡಸ್ಟ್‌ಬಿನ್‌ಗೆ ಬಿದ್ದರೂ ಆಯಿತು. ಇಂಥ ಪರಿಸ್ಥಿತಿ ಈ ದೇಶದಲ್ಲಿದೆ. ನಾನು ಹೇಳುವುದು ಏನೆಂದರೆ ಕ್ವಾಲಿಟಿಗೆ ವಿಶೇಷ ಮಹತ್ವವನ್ನು ಕೊಡಬೇಕು, ಕ್ವಾಂಟಿಟಿಗೆ ಮಹತ್ವ ಕೊಡಬಾರದು. ಮಾಸ್ ಎಜುಕೇಷನ್‌ನಲ್ಲಿ ಶಹಭಾಸ್ ಕಂಠಿ ಎಂದು ನಿಮಗೆ ಹೇಳಬಹುದು. ಆದರೆ ತಿಳಿದಂಥ ಜನರು ಹಾಗೆ ಮಾಡುವುದಿಲ್ಲ. ಅದಕ್ಕೋಸ್ಕರ ಕ್ವಾಲಿಟಿಗೆ ವಿಶೇಷ ಮಹತ್ವವನ್ನು ಕೊಡಬೇಕು ಎಂದು ಹೇಳಿ ಈ ಡಿಮ್ಯಾಂಡುಗಳಿಗೆ ನಾನು ಅನುಮೋದನೆಯನ್ನು ಕೊಡುವುದಿಲ್ಲ, ವಿರೋಧ ಸೂಚಿಸುತ್ತೇನೆ.

ಶ್ರೀ ಎಂ. ಎನ್. ಕೃಷ್ಣಸಿಂಗ್ (ಜಗಳೂರು).—ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯಾ ಮಂತ್ರಿಗಳು ಸಭೆಯ ಮುಂದೆ ಮಂಡಿಸಿರುವ ಬೇಡಿಕೆಗಳನ್ನು ಅನುಮೋದಿಸುತ್ತಾ ಒಂದೆರಡು ಸಲಹೆಗಳನ್ನು ಸೂಚಿಸಬಯಸುತ್ತೇನೆ.

ಸ್ವಾಮಿ, ನಮ್ಮ ರಾಜ್ಯ ವಿದ್ಯಾ ಪ್ರಗತಿಯಲ್ಲಿ ನೂರಕ್ಕೆ 120ರಷ್ಟು ವೇಗದಲ್ಲಿ ಹೋಗುತ್ತಿದೆ. ಇದನ್ನು ಪಾಶ್ಚಿಮಾತ್ಯ ದೇಶಗಳಿಗೆ ಹೋಲಿಸಿದರೆ ವಿದ್ಯೆ ಹೆಚ್ಚು ಹೆಚ್ಚು ಪ್ರಮಾಣದಲ್ಲಿ ಆಗುತ್ತಿದೆ ಎಂದು ಬರೀ ಕಾಗದದಲ್ಲಿ ತೋರಿಸಬೇಕು ಎಂದು ಹೊರಟಿದ್ದಾರೆ. ಈ ಪರಿಸ್ಥಿತಿಯಿಂದ ಒಂದು ರಾಜ್ಯಕ್ಕಾಗಲೀ ಜನಾಂಗಕ್ಕಾಗಲೀ ಯಾವ ವಿಧವಾದ ಕ್ಷೇಮವೂ ದೊರೆಯಲಾರದು. ನಮ್ಮಲ್ಲಿ ವಿದ್ಯಾರ್ಹತೆ ದಿನೇ ದಿನೇ ಕೆಳಕ್ಕೆ ಹೋಗುತ್ತಿದೆಯೇ ಹೊರತು ಮೇಲಕ್ಕೆ ಹೋಗುತ್ತಿಲ್ಲ. ನಮ್ಮಲ್ಲಿ ಟೆಕ್ನಿಕಲ್ ಕಾಲೇಜುಗಳು, ಮೆಡಿಕಲ್ ಕಾಲೇಜುಗಳು, ಇಂಜನಿಯರಿಂಗ್ ಕಾಲೇಜುಗಳು ಎಂದು ಮಾಡಿ ಜನರನ್ನು ಅಲ್ಲಿ ಹೆಚ್ಚು ಹೆಚ್ಚಾಗಿ ಸೇರಿಸಿ ಅದರಿಂದ ನಿರುದ್ಯೋಗಿಗಳ ಸಂಖ್ಯೆಯನ್ನು ಜಾಸ್ತಿ ಮಾಡುತ್ತಿದ್ದೇವೆ. ಉದ್ಯೋಗಗಳಿಗೆ ಏನೂ ನೆರವು ಆಗುತ್ತಿಲ್ಲ. ನಮ್ಮ ಆಡಳಿತಕ್ಕೆ ಸರಿಯಾದ ತಜ್ಞರು, ಸರಿಯಾದ ಶಿಕ್ಷಕರು ಮೊದಲು ಬೇಕಾಗಿದೆ. ಯಾವುದೇ ಕಾಲೇಜೇ ಆಗಲೀ, ಯಾವುದೇ ಶಾಲೆಯೇ ಆಗಲಿ ಅಲ್ಲಿ ಅಧ್ಯಾಪಕರು ಹೆಚ್ಚಿನ ತರಹ ಶಿಕ್ಷಣ ತಜ್ಞರಾಗಿರಬೇಕು. ಆಗ ನಮ್ಮ ಮಕ್ಕಳು ಹೆಚ್ಚಿನ ಮಟ್ಟದಲ್ಲಿ ವಿದ್ಯಾವಂತರಾಗುತ್ತಾರೆ ಮತ್ತು ಅವರಿಗೆ ಜ್ಞಾನೋದಯವಾಗುತ್ತದೆ. ನಮ್ಮ ರಾಜ್ಯ, ನಮ್ಮ ದೇಶ, ಎನ್ನುವ ಅಭಿಮಾನ ಬರುತ್ತದೆ. ನಾನು ಇಷ್ಟು ಹೇಳುತ್ತೇನೆ. ಅಲ್ಲಲ್ಲಿ ಕೆಲವು ಪಾಲಿಟೆಕ್ನಿಕ್‌ಗಳನ್ನು ನಮ್ಮ ರಾಜ್ಯದಲ್ಲಿ ತೆರೆದು ಅದರಲ್ಲಿ ಸಿವಿಲ್ ಇಂಜನಿಯರಿಂಗ್‌ಗೆ ಹೆಚ್ಚು ಅವಕಾಶವನ್ನು ಕೊಟ್ಟಿದ್ದಾರೆ. ಇದರಲ್ಲಿ ಶಿಕ್ಷಣ ಪಡೆದ ಸುಮಾರು ಎರಡು ಮೂರು ಸಾವಿರ ಜನರು ನಿರುದ್ಯೋಗಿಗಳಾಗಿದ್ದಾರೆ. ಕೆಲಸವಿಲ್ಲದೆ ಇವರುಗಳು ಬೀದಿ ಬೀದಿ ತಿರುಗುತ್ತಿದ್ದಾರೆ. ಇವರಲ್ಲಿ

(ಶ್ರೀ ಎಂ. ಎನ್. ಕೃಷ್ಣಸಿಂಗ್)

ಕೆಲವರು ಹೊರಗಡೆಯೂ ಹೋಗಿದ್ದಾರೆ. ಬಹಳ ಅಲ್ಪ ವೇತನದ ಮೇಲೆ 900 ಮೈಲಿ ದೂರದ ವರೆಗೂ ರಾಜ್ಯದಿಂದ ಹೊರಗಡೆಗೆ ಹೋಗಿದ್ದಾರೆ. ಆದ್ದರಿಂದ ಪಾಲಿಟೆಕ್ನಿಕ್‌ಗಳಲ್ಲಿ ಸಿವಿಲ್ ಇಂಜನಿಯರಿಂಗ್ ಶಿಕ್ಷಣವನ್ನು ಕೂಡಲೇ ತೆಗೆದು ಅದಕ್ಕೆ ಬದಲಾಗಿ ಆಟೋಮೋಬೈಲ್ ಇಂಜನಿಯರಿಂಗ್ ಅಥವಾ ಮೆಕ್ಯಾನಿಕಲ್ ಇಂಜನಿಯರಿಂಗ್ ಶಿಕ್ಷಣವನ್ನು ಹೆಚ್ಚು ಹೆಚ್ಚಾಗಿ ಎಲ್ಲ ಇನ್‌ಸ್ಟಿಟ್ಯೂಷನ್ ಗಳಲ್ಲಿಯೂ ಸೇರಿಸಿ ಜನಗಳು ಈ ರೀತಿ ನಿರುದ್ಯೋಗಿಗಳಾಗದಂತೆ ಮಾಡಬೇಕೆಂದು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಸ್ವಾಮಿ, ನಮ್ಮ ತಾಲ್ಲೂಕಿನ ಬಗ್ಗೆ ಎರಡು ವಿಷಯಗಳನ್ನು ಹೇಳಬೇಕಾಗಿದೆ. ಜಗಳೂರಿನಲ್ಲಿ ಒಂದು ಪ್ರೌಢ ಶಾಲೆ ಇದೆ. ಅದಕ್ಕೆ ಒಬ್ಬ ದಾನಿಗಳು ಕಟ್ಟಡವನ್ನು ಕಟ್ಟಿಸಲು 38 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈಗ್ಗೆ 10-12 ವರ್ಷಗಳ ಹಿಂದೆ ಅದರ ಅಸ್ತಿಭಾರವನ್ನು ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಹಾಕಿದ್ದಾರೆ. ಅಸ್ತಿಭಾರ ಮತ್ತು ಬೇಸ್‌ಮೆಂಟಿಗೆ ಆರು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಅದು ಪೂರ್ತಿಯಾಗದೇ ಹಾಗೇ ಕೊಳೆಯುತ್ತಿದೆ. ಅದನ್ನು ಕೇಳುವವರೇ ಇಲ್ಲ. ಈ ವಿಷಯದ ಬಗ್ಗೆ ಪ್ರಶ್ನೆಗಳನ್ನು ಹಾಕಿದ್ದೆ. ಆದರೆ ಯಾವ ವಿಧವಾದ ಪರಿಹಾರವೂ ಆಗಿಲ್ಲ. ಸರ್ಕಾರದವರು ಇದಕ್ಕೆ ಗಮನ ಕೊಡಬೇಕೆಂದು ಹೇಳುತ್ತೇನೆ.

ಡೋಣಿಹಳ್ಳಿ ಎಂಬ ಗ್ರಾಮದಲ್ಲಿ ಶಾಲಾ ಕಟ್ಟಡಕ್ಕಾಗಿ ಒಬ್ಬ ಪ್ರಾಥಮಿಕ ಶಾಲಾ ಉಪಾಧ್ಯಾಯರು ಆರು ಸಾವಿರ ರೂಪಾಯಿಗಳನ್ನು ದಾನ ಮಾಡಿದ್ದಾರೆ. 1960ರಲ್ಲಿ ಅದು ಮಂಜೂರಾತಿಯನ್ನು ಪಡೆಯಿತು. ಇಲ್ಲಿಯವರೆಗೂ ಅದರ ಕೆಲಸ ಆಗಲಿಲ್ಲ. ಇತ್ತೀಚೆಗೆ ಅದರ ಜವಾಬ್ದಾರಿಯನ್ನು ತಾಲ್ಲೂಕು ಬೋರ್ಡಿಗೆ ವಹಿಸಿಕೊಟ್ಟಿದ್ದೇವೆಂದು ತಿಳಿಸಿದ್ದಾರೆ. ತಾಲ್ಲೂಕು ಬೋರ್ಡ್ ಕಟ್ಟಡದ ಕೆಲಸವನ್ನು ತೆಗೆದುಕೊಳ್ಳುವ ಸ್ಥಿತಿಯಲ್ಲಿಲ್ಲ. ಕಟ್ಟಡಕ್ಕಾಗಿ ದಾನ ಮಾಡಿದಂಥ ಉಪಾಧ್ಯಾಯರು ಶಾಲಾ ಕಟ್ಟಡ ಆಗುವುದನ್ನು ಕಣ್ಣಾರೆ ನೋಡಬೇಕು ಎಂದು ಉದ್ದೇಶಪಟ್ಟಿದ್ದಾರೆ. ಈಗ ಅವರು ಖಾಯಿಲೆಯಿಂದ ಇದ್ದು ಬಹಳ ದಿವಸಗಳಿಂದ ನರಳುತ್ತಿದ್ದಾರೆ. ಇದಕ್ಕೆ ಸಂಬಂಧಪಟ್ಟ ಕಾಗದಪತ್ರಗಳನ್ನು ಸರ್ಕಾರ ವಾಪಸು ತರಿಸಿಕೊಂಡು ಹಿಂದೆ ಏನು ಮಂಜೂರಾತಿ ಮಾಡಿದೆಯೋ ಅದರಂತೆ ಕಟ್ಟಡವನ್ನು ಕಟ್ಟಿಸಿಕೊಡುವುದಕ್ಕೆ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳಿ ತಮ್ಮ ಮುಖಾಂತರ ಮನವಿ ಮಾಡಿಕೊಳ್ಳುತ್ತೇನೆ.

ಪ್ರಾಥಮಿಕ ಶಾಲಾ ಕಟ್ಟಡವಿಲ್ಲದೆ ಯಾವ ವಿಧವಾದ ವಿದ್ಯಾಭ್ಯಾಸದ ಪ್ರಗತಿಯೂ ಮುಂದುವರಿಯಲಾರದು. ಅಲ್ಲಿ ಒಂದು ಕಟ್ಟಡವಿಲ್ಲ. ಉಪಾಧ್ಯಾಯರಿಗೆ ವಾಸದ ಮನೆಗಳಿಲ್ಲ. ಇದರಿಂದ ಕೆಲವು ಜನ ಉಪಾಧ್ಯಾಯರುಗಳು ಹತ್ತಿರ ಹತ್ತಿರದಲ್ಲಿ ವರ್ಗಮಾಡಿಸಿಕೊಂಡು ಸಾಯಂಕಾಲ, ಬೆಳಗ್ಗೆ ಊರೂರಿಗೆ ಓಡಾಡುವ ಅಭ್ಯಾಸವನ್ನು ಮಾಡಿದ್ದಾರೆ. ಇದರಿಂದ ಹೆಚ್ಚು ವಿದ್ಯಾಭ್ಯಾಸಕ್ಕೆ ಹಾನಿ ಬರುವ ಸಂದರ್ಭ ಇದೆ. ಯಾವ ಹಳ್ಳಿಗೇ ಆಗಲಿ ಒಂದು ಶಾಲೆಯನ್ನು ಮಂಜೂರು ಮಾಡುವಾಗ ಅಲ್ಲಿ ನೇಮಿಸತಕ್ಕ ಉಪಾಧ್ಯಾಯರಿಗೆ ಮನೆ ಸೌಕರ್ಯ ಇದೆಯೇ ಇಲ್ಲವೇ ಎಂಬುದಾಗಿ ಯೋಚನೆ ಮಾಡಿ ಇನ್ನು ಮುಂದೆ ಸರ್ಕಾರದವರು ಶಾಲೆಗಳನ್ನು ಮಂಜೂರು ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ನಂತರ ಹರಿಜನರ ಮತ್ತು ಗಿರಿಜನರ ಶಾಲೆಗಳ ವಿಚಾರವಾಗಿ ನಾನು ಹೇಳಬೇಕಾದರೆ, ಈ ಶಾಲೆಗಳನ್ನು 200-250 ಜನಸಂಖ್ಯೆಗೆ ಮೇಲ್ಪಟ್ಟು ಇರತಕ್ಕ ಜಾಗಗಳಲ್ಲಿ ಕೊಟ್ಟಿದ್ದಾರೆ. ಅದಕ್ಕಾಗಿ ಹಣವನ್ನೂ ಸಹ ದಯಪಾಲಿಸಿದ್ದಾರೆ. ಇದಕ್ಕಾಗಿ ನಾನು ವಿದ್ಯಾಮಂತ್ರಿಗಳನ್ನು ಅಭಿನಂದಿಸುತ್ತೇನೆ. ಆದರೆ ಅಲ್ಲಿ ಒಂದು ತೊಂದರೆ ಇದೆ. ಗ್ರಾಮಗಳಲ್ಲಿ ಸಾಕಷ್ಟು ಶಾಲೆಗಳಿಲ್ಲ. ಒಂದು ವೇಳೆ ಶಾಲೆಗಳಿದ್ದರೆ ಉಪಾಧ್ಯಾಯರುಗಳಿರುವುದಿಲ್ಲ. ಉಪಾಧ್ಯಾಯರುಗಳಿದ್ದರೆ ಅವರಿಗೆ ಸರಿಯಾದ ಮನೆಯ ಸೌಕರ್ಯಗಳು ಅಲ್ಲಿ ಇರುವುದಿಲ್ಲ. ಅಂದಮೇಲೆ ಅವರ ಪ್ರಗತಿಯನ್ನು ಮತ್ತು ಮಕ್ಕಳ ಯೋಗಕ್ಷೇಮ ಹಾಗೂ ಪ್ರಗತಿಯನ್ನು ಇನ್ನೆಷ್ಟರ ಮಟ್ಟಿಗೆ ಸಾಧಿಸಬಹುದು ಎಂಬುದನ್ನು ತಾವೇ ನೋಡಬೇಕು. ಆದ್ದರಿಂದ ಇನ್ನು ಮುಂದಾದರೂ ಗ್ರಾಮಾಂತರ ಪ್ರದೇಶಗಳಲ್ಲಿ ಶಾಲೆಗಳನ್ನು ಕಟ್ಟುವಾಗ ಆ ಜವಾಬ್ದಾರಿಯನ್ನು ಸರ್ಕಾರವೇ ವಹಿಸಿಕೊಂಡು ಶಾಲಾ ಕಟ್ಟಡಗಳನ್ನು ಮೊದಲು ಕಟ್ಟಿ ಹಳ್ಳಿಗಳಲ್ಲಿ ಹೆಚ್ಚು ವಿದ್ಯಾಭ್ಯಾಸ ಪ್ರಗತಿಯಾಗುವಂತೆ ಮಾಡಬೇಕು. ನಾನು ಈ ಬೇಡಿಕೆಯನ್ನು ಸಂಪೂರ್ಣವಾಗಿ ಅನುಮೋದಿಸಿ ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಂಥ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಟಿ. ಎನ್. ಮಾದಪ್ಪ ಗೌಡ (ನಾಗಮಂಗಲ).—ಅಧ್ಯಕ್ಷರೇ, ಇವತ್ತು ಸರಕಾರದವರು ಸುಮಾರು 30 ಕೋಟಿ ರೂಪಾಯಿಗಳ ಬೇಡಿಕೆಯನ್ನು ನಮ್ಮ ಮುಂದಿಟ್ಟಿದ್ದಾರೆ. ನಮ್ಮ ಉತ್ಪತ್ತಿಯ ಬಹುಭಾಗವನ್ನು ವಿದ್ಯಾಭ್ಯಾಸ ಇಲಾಖೆಗೆ ನಾವು ಖರ್ಚು ಮಾಡುತ್ತಿದ್ದರೂ ಕೂಡ ಇಲ್ಲಿ

ಮೊದಲಿನಿಂದಲೂ ಕೊನೆಯವರೆಗೂ ಒಂದಾದರೂ ಚೆನ್ನಾಗಿಲ್ಲವೆಂದು ಹೇಳುವುದಕ್ಕೆ ನನಗೆ ಬಹಳ ವ್ಯಸನವಾಗುತ್ತದೆ. ಈಗ ನನ್ನ ಮಾನ್ಯ ಮಿತ್ರರೊಬ್ಬರು ಕನ್ನಡ ಬೋಧನೆ ಮಾಡುವುದಕ್ಕೆ ಉಪಾಧ್ಯಾಯರುಗಳು ಸಿಗುತ್ತಾ ಇಲ್ಲವೆಂದು ಹೇಳಿದರು. ಹಿಂದಿನ ನಮ್ಮ ಸಾಹಿತ್ಯ ಮತ್ತು ಧರ್ಮವನ್ನು ನಾವು ಅರ್ಥಮಾಡಿಕೊಳ್ಳಬೇಕಾದರೆ ಸಂಸ್ಕೃತ ಅಭ್ಯಾಸದ ಬಗ್ಗೆ ನಾವು ಸ್ವಲ್ಪ ಯೋಚನೆ ಮಾಡಬೇಕಾಗಿದೆ, ಅದೇನು ಗ್ರಹಚಾರವೋ ನಮ್ಮ ದೇಶಕ್ಕೆ ಇತ್ತೀಚೆಗೆ ಸಂಸ್ಕೃತ ಹೇಳುವವರೂ ಇಲ್ಲ, ಕೇಳುವವರೂ ಇಲ್ಲ. ಅದನ್ನು ಎಲ್ಲೋ ಅಲ್ಲಲ್ಲಿ ಕಲಿಸತಕ್ಕ ಕೆಲವು ಶಾಲೆಗಳಿಗೆ ಪ್ರೋತ್ಸಾಹವೇ ಇಲ್ಲ. ಆದರೂ ಏನಾದರೂ ಗಲಾಟೆ ಮಾಡಿದರೆ ಮರಾಠಿ ಸ್ಕೂಲು ಕೊಡಿ, ಇನ್ನು ಯಾರಾದರೂ ಸ್ಕೂಲು ಕೊಡಿ ಎಂದು ಒತ್ತಾಯ ಮಾಡಿದರೆ ಇನ್ನೊಂದು ಸ್ಕೂಲು ಕೊಡುತ್ತಾರೆ. ನಮ್ಮ ಉತ್ತಮ ಸಾಹಿತ್ಯವನ್ನು ಕಲಿಯುವ ಬಗ್ಗೆ ನಮ್ಮ ದೇಶದ ಮಕ್ಕಳಿಗೆ ತಕ್ಕ ಏರ್ಪಾಡನ್ನು ಈ ಸರ್ಕಾರ ಮಾಡದೇ ಇರತಕ್ಕದ್ದು ಸರ್ಕಾರದ ತಿಳಿಗೇಡಿತನವನ್ನು ತಿಳಿಸುತ್ತದೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇತ್ತೀಚೆಗೆ ಪ್ರಾಥಮಿಕ ಶಾಲೆಗಳೇನೋ ಬಹಳ ಆದವು. ಅಲ್ಲಿ 50 ಮಕ್ಕಳಿಗೊಬ್ಬ ಉಪಾಧ್ಯಾಯನಿರಬೇಕೆಂದು ಗೊತ್ತುಮಾಡಿದ್ದಾರೆ. 50 ಮಕ್ಕಳನ್ನು ಕುಳ್ಳಿರಿಸಿಕೊಂಡು ನಿಜವಾಗಿ ಒಬ್ಬ ಉಪಾಧ್ಯಾಯ ಆ ಮಕ್ಕಳಿಗೆ ಪರಿಣಾಮಕಾರಿಯಾಗಿ ಪಾಠ ಹೇಳುವುದಕ್ಕೆ ಸಾಧ್ಯವೇ ಎಂಬುದನ್ನೂ ವಿಚಾರ ಮಾಡಬೇಕು.

ಶ್ರೀ ಎಸ್. ಆರ್. ಕಂಠಿ.—ಒಬ್ಬ ಉಪಾಧ್ಯಾಯನಿಗೆ 40 ಹುಡುಗರು ಎಂಬುದಾಗಿ ಮಾಡಿದೆ.

ಶ್ರೀ ಟಿ. ಎಸ್. ಮಾದಪ್ಪ ಗೌಡ.—ಪ್ರತಿಯೊಂದು ಊರಿಗೂ ಹೀಗೆ ಪ್ರಮಾಣ ಇಟ್ಟುಕೊಂಡು ಶಾಲೆಗಳನ್ನು ಕೊಡುವ ಉದ್ದೇಶ, ವಿದ್ಯಾಭ್ಯಾಸ ಹೆಚ್ಚಿನ ಮಟ್ಟದಲ್ಲಿ ಪ್ರಗತಿಯಾಗಲೆಂದು. ಆದರೆ ನನ್ನ ಸ್ನೇಹಿತರಾದ ಶ್ರೀಮಾನ್ ವೆಂಕಟೇಗೌಡರು ಹೇಳಿದ ಹಾಗೆ ಒಬ್ಬ ಉಪಾಧ್ಯಾಯನೇ ಅಲ್ಲಿ 3-4 ವಿಷಯಗಳನ್ನು ಬೋಧಿಸಬೇಕಾಗಿ ಬರುತ್ತದೆ. ಇದು ಸರಿಯಲ್ಲ. ಅಂತಹ ಕಡೆಗಳಲ್ಲಿ ಇಬ್ಬರು-ಮೂವರು ಉಪಾಧ್ಯಾಯರುಗಳನ್ನು ಕೊಡಿ. ಆ ರೀತಿ ವ್ಯವಸ್ಥೆ ಮಾಡಿ ಪಾಠ ಪ್ರವಚನಗಳನ್ನು ನಡೆಸುವುದರಿಂದ ವಿದ್ಯಾಭ್ಯಾಸ ಬಹಳ ಉತ್ತಮವಾಗುತ್ತದೆ. ಆದರೆ ನಾವು ಶಿಕ್ಷಣವನ್ನು ಪಡೆಯುತ್ತಿದ್ದಂಥ ಕಾಲದಲ್ಲಿ ಈ ಗ್ರೂಪ್ ಸಿಸ್ಟಂ ಇರಲಿಲ್ಲ. ಎಲ್ಲಾ ಭಾಗಗಳಲ್ಲೂ ಚೆನ್ನಾಗಿ ಓದಬೇಕಾಗಿತ್ತು. ಸರಿಯಾದ ರೀತಿಯಲ್ಲಿ ಪರೀಕ್ಷೆಗಳಲ್ಲಿ ಪರ್ಸೆಂಟೇಜ್ ಮಾರ್ಕ್ಸ್‌ನ್ನು ತೆಗೆದುಕೊಂಡರೇನೇ ಉತ್ತೀರ್ಣರಾಗತಕ್ಕ ಅವಕಾಶವಿತ್ತು. ಆದ್ದರಿಂದ ಆಗ ಮಕ್ಕಳಿಗೆ ಕಷ್ಟಪಟ್ಟು ಓದಬೇಕು ಎಂಬುದಾಗಿ ಮನಸ್ಸು ಇತ್ತು. ಹಾಗೆಯೇ ಮನಸ್ಸು ಮಾಡುತ್ತಿದ್ದರು. ಈಗ ಎಸ್. ಎಸ್. ಎಲ್.ಸಿಗೆ 3-4 ಗ್ರೂಫ್‌ಗಳನ್ನು ಮಾಡಿದ್ದಾರೆ. ಇದರಿಂದ ಮಕ್ಕಳೇ ಮನೆಯಲ್ಲಿ ಅವರ ತಂದೆ ತಾಯಿಗಳಿಗೆ ಈ ವರ್ಷ ಒಂದು, ಸಪ್ಲಿಮೆಂಟರಿ ಪರೀಕ್ಷೆಯಲ್ಲಿ ಒಂದು ಗ್ರೂಪ್‌ಗೆ ಓದುತ್ತೇನೆಂದು ಹೇಳುವ ಪರಿಸ್ಥಿತಿ ಉಂಟಾಗಿದೆ. ಹೀಗಾಗಿ ಇತ್ತೀಚೆಗೆ ಅವರ ಸ್ಟ್ಯಾಂಡರ್ಡ್ ಹೇಳುವುದಕ್ಕಾಗುವುದಿಲ್ಲ. ತುಂಬಾ ಕೆಳಮಟ್ಟಕ್ಕೆ ಹೋಗುತ್ತಿದೆ. ಮಕ್ಕಳಲ್ಲಿ ಒಂದು ರೀತಿಯಲ್ಲಿ ಅನೀತಿಯುಂಟಾಗುವುದಕ್ಕೆ ಈ ಗ್ರೂಪ್ ಸಿಸ್ಟನಿಂದಲೇ ಅವಕಾಶವಾಗಿದೆಯೆಂದು, ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ತರಪೇತಾದ ಶಿಕ್ಷಕರು ಬಹಳ ಕಡೆ ಸಿಕ್ಕಿಲ್ಲವೆಂದು ಹೇಳಿದರು. ಈಗ ಬೇಕಾದಷ್ಟು ಬೇಸಿಕ್ ಸ್ಕೂಲುಗಳನ್ನು ತೆರೆದಿದ್ದಾರೆ. ಅಲ್ಲಿ ಶಿಕ್ಷಣ ಹೊಂದಿ ತಯಾರಾಗಿರುವವರು ಸಾವಿರಾರು ಜನರು ಇದ್ದಾರೆ. ಅವರಿಗೆ ಕೆಲಸ ಸಿಗದೆ ಅವರು ಬೀದಿ ಬೀದಿಯಲ್ಲಿ ಅಲೆಯುತ್ತಿದ್ದಾರೆ. ಇದೇಕೆ ಹೀಗೆ ಆಗುತ್ತಿದೆಯೋ ನನಗಂತೂ ಅರ್ಥವಾಗುವುದಿಲ್ಲ.

ಇನ್ನು ಸೆಕೆಂಡರಿ ಎಜುಕೇಷನ್ ಇನ್ನು ಮುಂದೆ ಪುಕ್ಕಟೆಯಾಗಿ ಸಿಕ್ಕುತ್ತದೆ ಎಂಬುದಾಗಿ ಮಂತ್ರಿಗಳು ಹೇಳಿದರು. ಅದಕ್ಕೆ ಶ್ರೀಮಾನ್ ಸೂರ್ಯನಾರಾಯಣರಾವ್ ಅವರು ಮಾತನಾಡುತ್ತಾ ಒಂದು ಮಾತನ್ನು ಹೇಳಿದರು. ಮಕ್ಕಳಿಗೆ ಪಾಠಗಳನ್ನು ಸರಿಯಾಗಿ ಹೇಳದೆ, ವಿದ್ಯಾರ್ಥಿಗಳ ಮೇಲೆ ತಕ್ಕ ನಿಗಾ ಕೊಡದೆ ಆ ಮಕ್ಕಳು ಪರೀಕ್ಷೆಯಲ್ಲಿ ಒಂದು ವೇಳೆ ಫೇಲಾದರೆ "ನೀನು ಎಲ್ಲದರಲ್ಲಿಯೂ ಫೇಲ್ ಆಗಿರುವೆ, ಫೆಬ್ರುವರಿ ತಿಂಗಳಲ್ಲಿ ಎಲ್ಲಾ ಫೀಸ್ ತೆಗೆದುಕೊಂಡು ಬಾ, ಇಲ್ಲದಿದ್ದರೆ ನಿನಗೆ ಮುಂದಿನ ಪರೀಕ್ಷೆಗೆ ಸೇರಿಸುವುದಿಲ್ಲ" ವೆಂದು ಹೇಳಿದರೆ ಹೇಗೆ ಆ ಮಕ್ಕಳು ವಿದ್ಯಾ ಪ್ರಗತಿಯನ್ನು ಹೊಂದುತ್ತಾರೆ? ಇದರಿಂದ ಉಪಾಧ್ಯಾಯರಿಗೆ ಹೆಚ್ಚಿನ ಹೊಣೆಯನ್ನು ಹೊರಿಸತಕ್ಕ ವ್ಯವಸ್ಥೆಯನ್ನು ಮಾಡಬೇಕೆಂದು ನಾನು ಹೇಳುತ್ತೇನೆ.

Sri S. R. KANTHI.—I must make it clear. The circular in respect of failures in terminal examinations, was issued in the year 1964 and that order was brought into operation in 1964-65. There was 1½ years notice.

ಶ್ರೀ ಟಿ. ಎನ್. ಮಾದಪ್ಪಗೌಡ.—ಆದ್ದರಿಂದ ಶಿಕ್ಷಕರಿಗೆ ಈ ವಿಷಯದಲ್ಲಿ ಹೆಚ್ಚಿನ ಜವಾಬ್ದಾರಿ ತೆಗೆದುಕೊಳ್ಳಬೇಕೆಂದು ಬರೆದು ಕೊಡಬೇಕು. ಆದರೆ ನಮ್ಮಲ್ಲಿ ಶೇಕಡ 7-8 ರಷ್ಟು ಪಾಸಾಗು ವುದರಿಂದ ಇಂತಹ ಮಕ್ಕಳ ಬಗ್ಗೆ ಗ್ಯಾರಂಟಿ ತೆಗೆದುಕೊಂಡು ಯಾವ ರೀತಿ ಪಾಸಾಗುತ್ತಾರೆಂದು ಬರೆದು ಕೊಟ್ಟು ಹೇಳುವುದೂ ಸಹ ಕಷ್ಟ. ಆ ರೀತಿ ಹೇಳುವುದಕ್ಕಾಗುವುದಿಲ್ಲ. ಒಂದು ವೇಳೆ ಆ ರೀತಿ ಗ್ಯಾರಂಟಿ ಬರೆದು ಕೊಟ್ಟವರಿಗೆ ಶಿಕ್ಷೆ ಮಾಡುತ್ತೇವೆಂದು ಬೇರೆ ಹೇಳುತ್ತಾರೆ. ಹೀಗೆ ಈಗಿನ ಪದ್ಧತಿ ಶಿಕ್ಷಕರಿಗೂ, ಕಲಿಯತಕ್ಕವರಿಗೂ ತೊಡಕಾಗಿದೆ ಈ ತರಹ ಪದ್ಧತಿಯನ್ನು ಖಂಡಿತ ಮಾಡಬೇಡಿ. ಇಲ್ಲದೇ ಹೋದರೆ ಇದರಿಂದ ನಮಗೆ ಹೆಚ್ಚಿನ ಜಿಗುಪ್ಸೆ ತರುತ್ತದೆ.

ಇನ್ನು ನರ್ಸರಿ ಸ್ಕೂಲುಗಳಂತೂ ಬಹಳ ಪ್ರಾಮುಖ್ಯ ಪಾತ್ರವನ್ನು ವಹಿಸುತ್ತಿವೆ. ಅಲ್ಲಿಗೆ ಹೋಗಿ ಶಿಕ್ಷಣ ಪಡೆದಂತಹ ಮಕ್ಕಳು ಕೇವಲ ಒಂದೆರಡು ವರ್ಷಗಳಲ್ಲಿಯೇ ಬಹಳ ಚುರುಕಾಗಿ, ನಡೆನುಡಿ ಆಚಾರ ವಿಚಾರಗಳ ಬಗ್ಗೆ ಬಹಳ ಬೇಗನೆ ತಯಾರಾಗುತ್ತಿದ್ದಾರೆ. ಪ್ರತಿಯೊಂದು ಕಡೆಯೂ ಕೇವಲ ಒಂದೆರಡು ನರ್ಸರಿ ಸ್ಕೂಲುಗಳನ್ನು ಕೊಡುವುದಕ್ಕೆ ಬದಲಾಗಿ ಇನ್ನೂ ಹೆಚ್ಚು ಅಂತಹ ಶಾಲೆಗಳನ್ನು ತೆರೆಯುವುದು ಉತ್ತಮ. ಆದರೆ ಅವು ಸರಿಯಾಗಿ ನಡೆದುಕೊಂಡು ಹೋಗು ತ್ತಿದ್ದರೂ ಅಂತಹವುಗಳ ಪೈಕಿ ಕೆಲವಕ್ಕೆ ಇನ್ನೂ ಗ್ರಾಂಟು ಕೊಟ್ಟಿಲ್ಲವೆಂದರೆ ಬಹಳ ಶೋಚನೀಯ ಸಣ್ಣ ಮಕ್ಕಳ ಶಿಕ್ಷಣದ ಬಗ್ಗೆ ತರಬೇತು ಸರಿಯಾಗಿ ಆಗಬೇಕು ನಾವೆಲ್ಲರೂ ನೀತಿ ಭ್ರಷ್ಟರಾಗಿ ನಡೆದುಕೊಳ್ಳುವಂತಹ ಪರಿಸ್ಥಿತಿಯನ್ನು ಸರ್ಕಾರ ತರುತ್ತಿರುವಾಗ ಧರ್ಮರಾಜ್ಯ ಕಟ್ಟುವ ಕನಸು ಕಾಣಬೇಕಾದರೆ ನಮ್ಮ ದೇಶದ ಸಣ್ಣ ಮಕ್ಕಳಿಗೆ ಶಿಕ್ಷಣದ ಬಗ್ಗೆ ಒಳ್ಳೆಯ ಅಡಿಪಾಯ ಹಾಕಲು ಸರ್ಕಾರ ಈಗಲೇ ತಕ್ಕ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಒಟ್ಟಿನಲ್ಲಿ ನರ್ಸರಿ ಸ್ಕೂಲುಗಳನ್ನು ದೇಶದಲ್ಲಿ ಹೆಚ್ಚು ಹೆಚ್ಚಾಗಿ ತೆರೆದು ಅವುಗಳಿಗೆ ಸಾಕಷ್ಟು ಗ್ರಾಂಟುಗಳನ್ನು ಒದಗಿಸಿ ಕೊಡಬೇಕೆಂದು ಹೇಳುತ್ತೇನೆ.

Sri S. R. KANTHI.—75 per cent of the net receipts ಅವರಿಗೆ ಗ್ರಾಂಟು ರೂಪವಾಗಿ ಕೊಡುತ್ತಿದ್ದೇವೆ.

ಶ್ರೀ ಟಿ. ಎನ್. ಮಾದಪ್ಪಗೌಡ.—ಇನ್ನು ಕಟ್ಟಡಗಳ ವಿಚಾರ. ಮಾನ್ಯ ಮುಖ್ಯ ಮಂತ್ರಿಗಳು ಈ ಸಭೆಯಲ್ಲಿ ನನ್ನ ಭಾಷಣ ಮಾಡುತ್ತಾ ಇದ್ದರು. ಮುಖ್ಯ ಮಂತ್ರಿಗಳು ಮಾತನಾಡತಕ್ಕ ಮಾತು ಅದಲ್ಲ. ಆ ರೀತಿಯಲ್ಲಿ ಮಾತನಾಡಬಾರದು. ಅದು ಅವರ ಒಂದು ಜಾಗಕ್ಕೆ ಸ್ಟೇಟಸ್ಸಿಗೆ ಗೌರವತರತಕ್ಕದ್ದಲ್ಲ. ಅದನ್ನು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಜನರ ಪ್ರತಿ ನಿಧಿಗಳಾದ ನಾವು ಹೇಳತಕ್ಕ ಮಾತುಗಳನ್ನು ತಾಳ್ಮೆಯಿಂದ ಕೇಳಿ ಇದರಲ್ಲಿ ನೀತಿ ಏನಿದೆ ಎಂಬು ದಾಗಿ ತಿಳಿದು ಉತ್ತರ ಕೊಡುವುದು ಯೋಗ್ಯ. ಏನೋ ಅವರ ಕಡೆ ಕೈ ಎತ್ತುವವರು ನೂರಾರು ಜನ ಇದ್ದಾರೆ ಅವರು ಹೇಳಿದ್ದೇ ಮಾತು ಎಂದಂದು ಕೊಂಡು ಮಾತನಾಡಿದಾರೆ ಅದು ಒಂದು ದೊಡ್ಡ ದೋಷವಾಗುತ್ತದೆಂದು ನಾನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಬಹಳ ಲಘು ವಾಗಿ ಕೆಲವು ವಿಚಾರಗಳನ್ನು ಹೇಳಿದರು. ಅದು ಸರಿಯಲ್ಲ. ಕೆಲವರು ಹಳೆಯ ಮೈಸೂರು, ಹೊಸ ಮೈಸೂರು ಎಂಬುದಾಗಿ ಪದೇ ಪದೇ ಹೇಳಿದರೆಂದು ತಿಳಿದು ಇದು ಆಗದ ಮಾತು ಎಂದು ಹೇಳಿದ್ದಾರೆ. ಅದಕ್ಕೆ ನಮ್ಮಲ್ಲಿ ನಿಜವಾದ ಕಾರಣಗಳು ಬೇಕಾದಷ್ಟು ಇವೆ. ಇವರು ನಮಗೆ ಒದಗಿಸಿರತಕ್ಕ detailed estimate ನಲ್ಲಿ ನೋಡಿದರೆ ಎಲ್ಲವೂ ಅರ್ಥವಾಗುತ್ತದೆ ಕಟ್ಟಡಗಳಿಗಾಗಿ ಹಣವನ್ನು ಒದಗಿಸಿರುವ ಐಟಂ ನೋಡಿದರೆ ಒಂದೇ ಊರಿಗೆ ಮೂರು ಮೂರು ಸಾರಿ ಪಾಲಿ ಟೆಕ್ನಿಕ್ಸ್‌ಗೆ ಹಣವನ್ನು ಒದಗಿಸಿ ಕೊಟ್ಟಿದ್ದಾರೆ.

ಹುಬ್ಬಳ್ಳಿಯಲ್ಲಿ 4 ಜನರಲ್ ಹಾಸ್ಪಟಲನ್ನು ಕಟ್ಟಿದ್ದಾರೆ. ಆಮೇಲೆ ಡೀಟೈಲ್ಡ್ ಬಡ್ಜೆಟ್ ಎಸ್ಟಿ ಮೇಟ್‌ನಲ್ಲಿ ಎಜುಕೇಷನ್ ಡಿಮ್ಯಾಂಡ್‌ನಲ್ಲಿ ಅಪೆಂಡಿಕ್ಸ್ 'H' ನಲ್ಲಿ ಜಿಲ್ಲಾವಾರು ಕೊಟ್ಟಿರತಕ್ಕ ಗ್ರಾಂಟನ್ನು ನೋಡಿದರೆ ಬಹಳ ತಾರತಮ್ಯ ಮಾಡಿದ್ದಾರೆಂದು ಗೊತ್ತಾಗುತ್ತದೆ. ಈ ವಿಷಯದಲ್ಲಿ ನಾನು ಒಂದು ಮಾತನ್ನು ಹೇಳುತ್ತೇನೆ. ಆಡಳಿತವನ್ನು ನಡೆಸತಕ್ಕವರು ತಾವೇನೋ ಮಹಾ ವಿಶ್ವೇಶ್ವರಯ್ಯನವರ ಹಾಗೆ ಬುದ್ಧಿವಂತರೆಂತಲೂ ಬಾಕಿಯವರು ಬುದ್ಧಿ ಇಲ್ಲದವರೆಂತಲೂ ಅವರು ತಿಳಿದುಕೊಂಡಿದ್ದಾರೆ. ನಾವೆಲ್ಲಾ ಕುರಿಗಳು ಇವರು ಹೇಳಿದಂತೆ ಕೇಳಿಕೊಂಡು ಹೋಗುತ್ತಾ ರೆಂದು ತಿಳಿದುಕೊಂಡಿದ್ದಾರೆ. ನಮಗೂ ಬುದ್ಧಿ ಇದೆ. ಇವರು ನಾವು ಪಕ್ಷಪಾತ ಮಾಡುವುದಿಲ್ಲ ಎಂದು ಯಾವ ಬಾಯಲ್ಲಿ ಹೇಗೆ ಹೇಳುತ್ತಾರೋ ನನಗೆ ಗೊತ್ತಿಲ್ಲ. ಇದರಲ್ಲಿ ನಾನು ಒಂದು ನಿದರ್ಶನವನ್ನು ಕೊಡುತ್ತೇನೆ. ಬಡ್ಜೆಟ್ ಎಸ್ಟಿಮೇಟಿನಲ್ಲಿ ಪುಟ 622 ರಲ್ಲಿ ಅಪೆಂಡಿಕ್ಸ್ 'H' ನಲ್ಲಿ ನೋಡಿದರೆ ತಮಗೆ ಗೊತ್ತಾಗುತ್ತದೆ. ಮೈಸೂರು ಜಿಲ್ಲೆಯಲ್ಲಿ ಎಷ್ಟು ಹಾಸ್ಪಟಲುಗಳಿವೆ, ಹೇಗೆ ಗ್ರಾಂಟನ್ನು ಕೊಟ್ಟಿದ್ದಾರೆ. ಅಲ್ಲಿರತಕ್ಕ ಹಾಸ್ಪಟಲುಗಳ ಪೈಕಿ 4-5 ಬೇರೆ ಹಾಸ್ಪಟಲುಗಳನ್ನು ಬಿಟ್ಟರೆ

ಇನ್ನು ಉಳಿದ 38 ಹಾಸ್ಟಲುಗಳಿಗೆ ಶಿವರಾತ್ರೀಶ್ವರ ಹಾಸ್ಟಲು ಆ ಈಶ್ವರ ಹಾಸ್ಟಲು ಈ ಈಶ್ವರ ಹಾಸ್ಟಲು ಎಂದು ಎಲ್ಲಾ ಅವರ ಹಾಸ್ಟಲುಗಳಿಗೇ ಗ್ರಾಂಟನ್ನು ಕೊಟ್ಟಿದ್ದಾರೆ. ಆ ಜಿಲ್ಲೆಯಲ್ಲಿ ಸರ್ಕಾರದವರು ಹಾಸ್ಟಲುಗಳಿಗೆ ಕೊಟ್ಟಿರತಕ್ಕ 3 ಲಕ್ಷ ಚಿಲ್ಲರೆ ಹಣದಲ್ಲಿ 62 ಸಾವಿರ ರೂಪಾಯಿಗಳನ್ನು ಬಾಕಿ ಎಲ್ಲಾ ಹಾಸ್ಟಲುಗಳಿಗೂ ಕೊಟ್ಟಿದ್ದಾರೆ. ಇನ್ನು 280 ಸಾವಿರ ರೂಪಾಯಿಗಳನ್ನು ಬರೀ ಒಂದೇ ಜಾತಿಯ ಹಾಸ್ಟಲುಗಳಿಗೆ ಕೊಟ್ಟಿದ್ದಾರೆ. ಈಗ ಸಿದ್ಧಗಂಗೆಯಲ್ಲಿ ಹಾಸ್ಟಲುಗಳನ್ನು ನಡೆಸುತ್ತಿದ್ದಾರೆ. ಅವರು ಅನುಸರಿಸತಕ್ಕ ರೀತಿ ನೀತಿಗಳೇ ಬೇರೆ. ಅವರಿಗೆ ನೀವು ಗ್ರಾಂಟ್ ಎಷ್ಟಾದರೂ ಕೊಡಿ. ನಾನು ಬೇಡ ಎನ್ನುವುದಿಲ್ಲ. ಅಲ್ಲಿರತಕ್ಕಂಥ ಸ್ವಾಮಿಗಳು ಮಹಾತ್ಮರು ಬಹಳ ಚೆನ್ನಾಗಿ ಕೆಲಸ ಮಾಡುತ್ತಾರೆ. ಅವರು ಎಲ್ಲಾ ಕೋಮಿನವರನ್ನೂ ಸಮಾನವಾಗಿ ಕಾಣುತ್ತಾರೆ. ಮಕ್ಕಳನ್ನು ಅವರು ಚೆನ್ನಾಗಿ ನೋಡಿಕೊಳ್ಳುತ್ತಾರೆ. ಎಲ್ಲರೂ ಹಾಗೆಯೇ ಮಾಡುತ್ತಾರೆ ಎಂದು ಹೇಳುವುದರಲ್ಲಿ ಎಳ್ಳಷ್ಟೂ ಅರ್ಥವಿಲ್ಲ. ನೀವು ಪಕ್ಷಪಾತ ಮಾಡುವುದನ್ನು ನಿಲ್ಲಿಸುವುದಿಲ್ಲ. ಆದ್ದರಿಂದ ನಾವು ಹಳೆ ಮೈಸೂರಿನವರು ನಮ್ಮ ಪಾಡಿಗೆ ನಾವು ಇರುತ್ತೇವೆ. ನೀವು ನಿಮ್ಮ ಪಾಡಿಗೆ ನೀವು ಇರಿ ಎಂದು ಹೇಳಿ ನಾನು ಮಾತನ್ನು ಮುಗಿಸುತ್ತೇನೆ.

† ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಮಾನ್ಯ ಅಧ್ಯಕ್ಷರೇ, ವಿದ್ಯಾಭ್ಯಾಸ ಇಲಾಖೆಯ ಬೇಡಿಕೆಗಳಿಗೆ ಸಂಬಂಧಪಟ್ಟ ಹಾಗೆ ನಾಲ್ಕಾರು ಸಲಹೆಗಳನ್ನು ಕೊಡಬೇಕೆಂದು ನಾನು ನಿಂತಿದ್ದೇನೆ. ಶ್ರೀ ಮಾದಪ್ಪಗೌಡರು ಮಾತನಾಡುತ್ತಾ ಹೇಳಿದರು. ನರ್ಸರಿ ಸ್ಕೂಲಿನ ವಿಚಾರ ಬಹಳ ಮುಖ್ಯವಾದದ್ದು, ನರ್ಸರಿ ವಿದ್ಯಾಭ್ಯಾಸಕ್ಕೆ ಸರ್ಕಾರದವರು ಹೆಚ್ಚು ಪ್ರೋತ್ಸಾಹವನ್ನು ಕೊಡಬೇಕೆಂದು ಹೇಳಿದರು. ಈ ನರ್ಸರಿ ಸ್ಕೂಲುಗಳ ವಿಷಯದಲ್ಲಿ ಸರ್ಕಾರದವರು ಏನು ಮಾಡುತ್ತಾರೆ ಎನ್ನುವ ವಿಷಯವನ್ನು ನಾನು ಸ್ವಲ್ಪ ಹೇಳುತ್ತೇನೆ. ಪಟ್ಟಣಗಳಲ್ಲಿ ಈ ನರ್ಸರಿ ಸ್ಕೂಲುಗಳು ನಡೆಯುವ ವಿಷಯ ಇರಲಿ. ಇವು ಹಳ್ಳಿಗಳಲ್ಲಿ ಹೇಗೆ ನಡೆಯುತ್ತವೆ ಎನ್ನುವ ವಿಚಾರವನ್ನು ನಾನು ಹೇಳುತ್ತೇನೆ. ಹಳ್ಳಿಗಳಲ್ಲಿರತಕ್ಕ ನರ್ಸರಿ ಸ್ಕೂಲುಗಳಿಗೆ ನಮ್ಮ ಜಿಲ್ಲಾ ಪರಿಷತ್ತುಗಳಿಗೆ ಟೋಕನ್ ಗ್ರಾಂಟ್ ಕೊಡುತ್ತಿಲ್ಲ. ನಾವೆಲ್ಲಾ ಮೆಂಬರುಗಳು ಸೇರಿಕೊಂಡು ಕೂಗು ಹಾಕಿ ಈ ನರ್ಸರಿ ಸ್ಕೂಲುಗಳಿಗೆ ಒಂದೊಂದು ತಾಲ್ಲೂಕಿಗೆ ಒಂದು ಸಾವಿರ ರೂಪಾಯಿಗಳಂತೆ 11 ತಾಲ್ಲೂಕುಗಳಿಗೆ ಹಣವನ್ನು ಹಂಚಿಕೆ ಮಾಡಿಕೊಟ್ಟಿದ್ದೇವೆ. ನರ್ಸರಿ ಸ್ಕೂಲುಗಳಲ್ಲಿ ಯಾವ ಮಕ್ಕಳು ಓದುತ್ತವೆಯೋ ಆ ಮಕ್ಕಳು ಓದುತ್ತವೆಯೋ ಆ ಮಕ್ಕಳು ಪ್ರೈಮರಿ ಸ್ಕೂಲುಗಳಲ್ಲಿ ಬಹಳ ಚೆನ್ನಾಗಿ ಓದುತ್ತವೆಯೆಂದು ಉಪಾಧ್ಯಾಯರು ಹೇಳುತ್ತಾರೆ. ಪ್ರೈಮರಿ ಸ್ಕೂಲಿನ ವಿದ್ಯಾಭ್ಯಾಸಕ್ಕೆ ನರ್ಸರಿ ವಿದ್ಯಾಭ್ಯಾಸ ತಳಪಾಯದೋಪಾದಿಯಲ್ಲಿದೆ. ಆದ್ದರಿಂದ ನರ್ಸರಿ ವಿದ್ಯಾಭ್ಯಾಸಕ್ಕೆ ಸರ್ಕಾರದವರು ಸಾಕಷ್ಟು ಹೆಚ್ಚಿನ ಪ್ರೋತ್ಸಾಹವನ್ನು ಕೊಡಬೇಕು. ಹೈಸ್ಕೂಲ್ ಮಾಡುತ್ತೇವೆ, ಯೂನಿವರ್ಸಿಟಿ ಮಾಡುತ್ತೇವೆ ಎಂದು ಹೇಳುವುದಕ್ಕಿಂತ ನರ್ಸರಿ ಸ್ಕೂಲುಗಳಿಗೆ ಸರ್ಕಾರದವರು ಹೆಚ್ಚು ನಿಗಾ ಕೊಡಬೇಕು. ಈಗ ಹಳ್ಳಿಗಳಲ್ಲಿ ನರ್ಸರಿ ಸ್ಕೂಲುಗಳು ಎಲ್ಲೆಲ್ಲಿ ನಡೆಯುತ್ತದೆಯೋ ಅಲ್ಲೆಲ್ಲಾ ಪಂಚಾಯಿತಿಗಳೇ ಅವುಗಳನ್ನು ನಡೆಸಲಿ ಎಂದು ಹೇಳುವುದಾದರೆ ಸರ್ಕಾರದವರು ಅವುಗಳಿಗೆ ಫುಲ್ ಗ್ರಾಂಟ್ ಕೊಡಬೇಕು ಮತ್ತು ತರಪೇತಿಯಾದ ಉಪಾಧ್ಯಾಯರನ್ನು ಆ ಸ್ಕೂಲುಗಳಿಗೆ ಒದಗಿಸಿಕೊಟ್ಟು ಅನುಕೂಲ ಮಾಡಿಕೊಡಬೇಕೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಹೇಳುವುದಾದರೆ 100 ಕ್ಕೆ 50 ರಷ್ಟು ಹೆಣ್ಣು ಮಕ್ಕಳು ನಮ್ಮ ದೇಶದಲ್ಲಿ ಇದ್ದಾರೆ. ಇಂಥಾ ಕಾಲದಲ್ಲಿ ಅದರಲ್ಲೂ ಶ್ರೀಮತಿ ಇಂದಿರಾಗಾಂಧಿಯವರು ಪ್ರಧಾನ ಮಂತ್ರಿಗಳಾಗಿರುವಾಗ ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಬಗ್ಗೆ ಸರ್ಕಾರದವರು ಇಷ್ಟರಮಟ್ಟಿನ ತಾತ್ಸಾರ ಭಾವನೆಯನ್ನು ತಳೆದಿರುವುದು ಸ್ವಲ್ಪವೂ ಚೆನ್ನಾಗಿ ಕಾಣುವುದಿಲ್ಲ. ಹೆಣ್ಣುಮಕ್ಕಳಿಗೆ ಸ್ಕಾಲರ್‌ಷಿಪ್ ಕೊಡುವುದರಲ್ಲಿಯೂ ಮತ್ತು ಹೆಣ್ಣುಮಕ್ಕಳ ಹಾಸ್ಟಲುಗಳ ವಿಷಯದಲ್ಲಿಯೂ, ಆ ಹಾಸ್ಟಲುಗಳಿಗೆ ಅರ್ಪನೇಜ್ ಕೊಡುವ ವಿಷಯದಲ್ಲಿಯೂ ಸರ್ಕಾರದವರು ಸರಿಯಾಗಿ ನಿಗಾ ಕೊಡುತ್ತಿಲ್ಲ. ನಾನೂ ಸಹ ಮಹಾರಾಣಿ ಕಾಲೇಜಿನಲ್ಲಿ ಸ್ಕಾಲರ್‌ಷಿಪ್ ಕಮಿಟಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ಸರ್ಕಾರಿ ನೌಕರರು ಮತ್ತು ಉಪಾಧ್ಯಾಯರ ಮಕ್ಕಳು ಇದರ ಸ್ಕಾಲರ್‌ಷಿಪ್ ಸಂಬಂಧದಲ್ಲಿ ವರಮಾನದ ಬಗ್ಗೆ ಕರೆಕ್ಟ್ ಫಿಗರ್ಸನ್ನು ಕೊಡಬೇಕಾಗುತ್ತದೆ. ಅದಕ್ಕೋಸ್ಕರ ಅವರು ಏನು ಮಾಡುತ್ತಾರೆಂದರೆ, ಹೆಣ್ಣುಮಕ್ಕಳು ಅವರ ತಾತ ಅಥವಾ ಅಜ್ಜಿಯ ಹತ್ತಿರ ಸ್ಕಾಲರ್‌ಷಿಪ್ ಅರ್ಜಿಗೆ ಸೈನು ಮಾಡಿಸಿಕೊಂಡು ಅವರಿಗೆ ತಿಂಗಳಿಗೆ 30-35 ರೂಪಾಯಿ ವರಮಾನ ಬರುತ್ತದೆ ಎಂದು ಬರೆಸಿಕೊಂಡು ಬರುತ್ತಾರೆ. ಆದ್ದರಿಂದ ಸ್ಕಾಲರ್‌ಷಿಪ್ ಯಾರಿಗೆ ನ್ಯಾಯವಾಗಿ ಸಿಕ್ಕಬೇಕೋ ಅವರಿಗೆ ಸಿಕ್ಕುವುದಿಲ್ಲ. ಅದಕ್ಕೋಸ್ಕರ ಈ ಸ್ಕಾಲರ್‌ಷಿಪ್ ಹಣವನ್ನು ಹಿಡಿದುಕೊಂಡು ಅದರಲ್ಲಿ ಅರ್ಹರಾಗಿರತಕ್ಕವರಿಗೆ ಹೆಣ್ಣುಮಕ್ಕಳಿಗೆ ಹಾಫ್ ಫ್ರೀಷಿಪ್ ಕೊಡುವಂತೆ ಏರ್ಪಾಡು ಮಾಡುವುದಕ್ಕೋಸ್ಕರ ಒಂದು ನಿರ್ಣಯ ಮಾಡಿ ಸರ್ಕಾರಕ್ಕೆ ಕಳುಹಿಸಿ ಕೊಟ್ಟಿದ್ದೇವೆ. ಅದನ್ನು ಕನ್‌ವರ್ಟ್ ಮಾಡಿ ಕಳುಹಿಸುವುದಕ್ಕೆ ಇಷ್ಟು ದಿವಸಗಳಾದರೂ ಅದು ಆಗಿಲ್ಲ. ಇದನ್ನು ನೋಡಿದರೆ

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಬೇಜಾರಾಗುತ್ತದೆ. ಒಂದೊಂದು ಮನೆಯಲ್ಲಿ 5 ಜನ 6 ಜನ 7 ಜನ 8 ಜನ ಮಕ್ಕಳು ಓದುತ್ತಿರುತ್ತಾರೆ. ಅಷ್ಟು ಜನಗಳನ್ನೂ ತಂದೆ ತಾಯಿಗಳು ಓದಿಸಬೇಕಾದರೆ ಎಷ್ಟು ಕಷ್ಟ ವಾಗುತ್ತದೆ ಎಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕು. ಅದಕ್ಕೋಸ್ಕರ ಎಲ್ಲರಿಗೂ ಸಹಾಯ ಮಾಡಲು ಅನುಕೂಲವಾಗುವಂತಹ ನಾವು ಕಳುಹಿಸಿರುವ ರೆಸಲ್ಯೂಷನ್ ಬಗ್ಗೆ ಬೇಗ ಆರ್ಡರ್ ಮಾಡಿ ಕಳುಹಿಸಿ ಕೊಡಿ ಎಂದು ಸರ್ಕಾರದವರನ್ನು ಕೇಳಿದರೆ ಅದಕ್ಕೆ ಇನ್ನೂ ಉತ್ತರ ಬಂದಿಲ್ಲ. ಆದ್ದರಿಂದ ಹೆಣ್ಣುಮಕ್ಕಳ ವಿದ್ಯಾಭ್ಯಾಸ ಮತ್ತು ಅವರ ಸ್ಕಾಲರ್‌ಷಿಪ್ ಬಗ್ಗೆ ಸರ್ಕಾರ ದವರು ನಿಗಾ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಮಾದಪ್ಪಗೌಡರು ಮಾತನಾಡುತ್ತಾ ಆ ಈಶ್ವರ ವಿದ್ಯಾರ್ಥಿನಿಲಯ ಈ ಈಶ್ವರ ವಿದ್ಯಾರ್ಥಿ ನಿಲಯ, ಗೌಡರ ವಿದ್ಯಾರ್ಥಿನಿಲಯಗಳಿಗೆ ಸರ್ಕಾರದವರು ಸಹಾಯ ಮಾಡುತ್ತಿದ್ದಾರೆಂದು ಹೇಳಿದರು. ನನ್ನ ಒಂದು ಅನುಭವದಲ್ಲಿ ನೋಡಿರುವ ಹಾಗೆ ಹೆಣ್ಣುಮಕ್ಕಳ ಆರ್ಫನೇಜ್ ಹಾಸ್ಟಲು ಗಳಿಗೆ ಸರ್ಕಾರದವರು ಸಾಕಷ್ಟು ಪ್ರೋತ್ಸಾಹವನ್ನು ಕೊಡುತ್ತಾ ಇಲ್ಲ. ನಾನು ಒಂದು ಉದಾಹರಣೆ ಹೇಳುತ್ತೇನೆ. ಮೊನ್ನೆ ತಾನೆ ಒಬ್ಬ ಹೆಣ್ಣುಮಗಳು ಮುಂದೆ ಬಂದು ನಾನು 10 ಸಾವಿರ ರೂಪಾಯಿಗಳನ್ನು ಡಿಪಾಜಿಟ್ ಮಾಡುತ್ತೇನೆ ಒಂದು ಹೆಣ್ಣುಮಕ್ಕಳ ಹಾಸ್ಟಲನ್ನು ಕೊಡಿ ಎಂದು ಕೇಳಿದರೆ ಅದಕ್ಕೆ ಸರ್ಕಾರದವರು ಇನ್ನೂ ಒಪ್ಪಿಗೆ ಕೊಟ್ಟಿಲ್ಲ. ಹೆಣ್ಣುಮಕ್ಕಳು ಊರಿಂದೂರಿಗೆ ಹೋಗಿ ಓದಬೇಕು ಎಂದರೆ ಕಷ್ಟವಾಗುತ್ತದೆ ಅದಕ್ಕೋಸ್ಕರ ನಾನು ಅನಾಥ ಹೆಣ್ಣು ಮಕ್ಕಳ ಒಂದು ಹಾಸ್ಟಲನ್ನು ಕಟ್ಟಲು 10 ಸಾವಿರ ರೂಪಾಯಿಗಳನ್ನು ಕೊಡುತ್ತೇನೆ ಒಂದು ಹಾಸ್ಟಲನ್ನು ಕಟ್ಟಿಸಿ ಕೊಡಿ ಎಂದು ಕೇಳಿದರೆ ಅದಕ್ಕೆ ಸರ್ಕಾರದವರು ರಿಜಿಸ್ಟರ್ ಮಾಡಿಕೊಡಿ ಹಾಗೆ ಮಾಡಿ ಹೀಗೆ ಮಾಡಿ ಎಂದು ಏನೇನೋ ನೂರೆಂಟು ರೂಲ್‌ಗಳನ್ನು ಕೇಳಿದರು. ಜನಗಳು ತಾವಾಗಿಯೇ ಮುಂದೆ ಬಂದು ದಾನ ಕೊಡುತ್ತೇವೆ ಅದನ್ನು ತೆಗೆದುಕೊಂಡು ಉಪಕಾರ ಮಾಡಿ ಎಂದು ಹೇಳಿದರೆ ಅದನ್ನು ಮಾಡದೆ ಇರುವುದು ನಿಜವಾಗಿಯೂ ಸರಿಯಲ್ಲ. ಈ ವಿಚಾರದಲ್ಲಿ ಸರ್ಕಾರದವರು ಸ್ವಲ್ಪ ಮನಸಿಟ್ಟು ಕೆಲಸ ಮಾಡಬೇಕೆಂದು ನಾನು ಹೇಳುತ್ತೇನೆ ಮತ್ತು ಹೆಣ್ಣುಮಕ್ಕಳ ಹಾಸ್ಟಲುಗಳ ವಿಚಾರದಲ್ಲಿ ಸರ್ಕಾರದವರು ಜಾಸ್ತಿ ನಿಗಾ ಕೊಡಬೇಕು.

ಇನ್ನೊಂದು ವಿಷಯ, ಈ ವಿಷಯವನ್ನು ನಾನು ಶ್ರೀ ಅಣ್ಣಾರಾಯರು ವಿದ್ಯಾ ಮಂತ್ರಿ ಗಳಾಗಿದ್ದ ಕಾಲದಿಂದಲೂ ಹೇಳುತ್ತಲೇ ಬಂದಿದ್ದೇನೆ. ಅದೇನೆಂದರೆ, ಮೈಸೂರು ಮಹಾರಾಣಿ ಟ್ರೈನಿಂಗ್ ಕಾಲೇಜ್ ಇದೆ. ಅದಕ್ಕೆ ಸರ್ಕಾರದವರು ಒದಗಿಸಿದಂತಹ ಉಪಕರಣಗಳನ್ನು ತೆಗೆಯದೆ ಹಾಗೆಯೇ ಪ್ಯಾಕ್ ಆಗಿ ಬಿದ್ದಿವೆ. ಅಲ್ಲಿ ಜಾಗ ಇಲ್ಲದೆ ಕಿಷ್ಕಿಂಧಾ ಕಾಂಡವಾಗಿದೆ. ಅದು ಹೆಣ್ಣು ಮಕ್ಕಳ ಟ್ರೈನಿಂಗ್ ಕಾಲೇಜು. ಅವರ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂತೆ ಸ್ಥಳಾವಕಾಶ ವನ್ನು ಕಲ್ಪಿಸಿ ಕೊಡಲು ಸರ್ಕಾರದವರು ನಿಗಾ ಕೊಡಬೇಕೆಂದು ನಾನು ಸೂಚನೆ ಮಾಡುವುದಕ್ಕೆ ಇಷ್ಟ ಪಡುತ್ತೇನೆ.

ಇನ್ನು ಎಲ್ಲಾ ಕಡೆಯಿಂದಲೂ ಹಳ್ಳಿಗಳಿಂದ ಮೈಸೂರಿಗೆ ಕಂಡೆನ್ಸ್ಡ್ ಕೋರ್ಸಿಗೆ ಎಷ್ಟೋ ಜನ ಹೆಣ್ಣುಮಕ್ಕಳು ಬರುತ್ತಾರೆ. ಆದ್ದರಿಂದ ಅಲ್ಲಿ ಲೋಯರ್ ಸೆಕೆಂಡರಿ ಪರೀಕ್ಷೆ ಆದವರಿಗೆ ಅನುಕೂಲ ಮಾಡಿಕೊಡಬೇಕು. ಅಡಲ್ಟ್ ಎಜುಕೇಷನ್ ಮಾಡುತ್ತೇವೆಂದು ಸರ್ಕಾರದವರು ಲಕ್ಷಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದ್ದಾರೆ. ಆದರೆ ಅದು ಎಷ್ಟರಮಟ್ಟಿಗೆ ಅನುಕೂಲವಾಗುತ್ತಿದೆ ಎಂಬುದು ಗೊತ್ತಿಲ್ಲ. ಆದ್ದರಿಂದ ಅಡಲ್ಟ್ ಎಜುಕೇಷನ್ ಅನ್ನು ಡೈವರ್ಟ್ ಮಾಡಿ ಕಂಡೆನ್ಸ್ಡ್ ಕೋರ್ಸ್ ಮಾಡಿದರೆ ಅದರಿಂದ ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುತ್ತದೆ ಎಂದು ನಾನು ತಮ್ಮ ಗಮನಕ್ಕೆ ತರುತ್ತೇನೆ.

ಇನ್ನು ಸರ್ಕಾರದವರು ತಮಿಳು ಪ್ರೈಮರಿ ಸ್ಕೂಲು, ಉರ್ದು ಪ್ರೈಮರಿ ಸ್ಕೂಲು ತೆಲುಗು, ಮರಾಠಿ ಪ್ರೈಮರಿ ಸ್ಕೂಲು ಎಂದು ಇಪ್ಪತ್ತೆಂಟು ತರಹ ಪ್ರೈಮರಿ ಸ್ಕೂಲುಗಳನ್ನು ತೆರೆದಿದ್ದಾರೆ. ಇದು ಸರಿಯಿಲ್ಲ ಎಲ್ಲಾ ಒಂದೇ ತರಹ ಪ್ರೈಮರಿ ಸ್ಕೂಲುಗಳನ್ನು ಮಾಡಿ ಆ ಸ್ಕೂಲುಗಳಿಗೆ ಉಪಾಧ್ಯಾಯರುಗಳನ್ನು ಒದಗಿಸಿ ಕೊಡಬೇಕು. ಹಾಗೆಯೇ ಮಿಡಲ್ ಸ್ಕೂಲ್‌ಗಳಲ್ಲಿ ಅಪ್‌ಗ್ರೇಡೆಡ್ ಮಿಡಲ್‌ಸ್ಕೂಲ್, ನ್ಯೂಟೈಪ್ ಮಿಡಲ್‌ಸ್ಕೂಲ್ ಎಂದು ಇರುವುದಕ್ಕಿಂತ ಎಲ್ಲಾ ಒಂದೇ ತರಹ ಮಿಡಲ್ ಸ್ಕೂಲುಗಳನ್ನು ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಇನ್ನು ಹ್ಯಾಂಡಿಕ್ಯಾಪ್ಡ್ ಚಿಲ್ಡ್ರನ್ ಸ್ಕೂಲುಗಳ ವಿಚಾರಕ್ಕೆ ಬಂದರೆ ಮೈಸೂರು ವೆಲ್‌ಫೇರ್ ಸ್ಟೇಟ್ ಎಂದು ಗೊತ್ತಾಗಿದೆ. ಹ್ಯಾಂಡಿಕ್ಯಾಪ್ಡ್ ಚಿಲ್ಡ್ರನ್ಸ್ ಸ್ಕೂಲು ಇಂಡಿಯಾದಲ್ಲಿ ಇದೆಯೆಂದು ಗೊತ್ತಾಗಿರುವುದು ಇದೇ ಮೊದಲನೆಯ ಬಾರಿಗೆ ಎಂದು ರೀಡರ್ಸ್ ಡೈಜೆಸ್ಟ್ ಪತ್ರಿಕೆಯಲ್ಲಿ ಪ್ರಿಂಟ್ ಆಗಿ ಬರುತ್ತಿದೆ. ಈ ಹ್ಯಾಂಡಿಕ್ಯಾಪ್ಡ್ ಚಿಲ್ಡ್ರನ್ಸ್ ಸ್ಕೂಲಿನ ವಿಚಾರದಲ್ಲಿ ನಾನು ಅನೇಕ ಬಾರಿ

4-30 P.M.

ಹೇಳಿದ್ದೇನೆ. ಇಂತಹ ಮಕ್ಕಳ ಸ್ಥಿತಿಯನ್ನು ನಿಜವಾಗಿಯೂ ಕೂಡ ನೋಡಿದರೆ ಬಹಳ ದುಃಖ ವಾಗುತ್ತದೆ, ಈ ರೀತಿಯಾಗಬಾರದು. ಕಣ್ಣಿಲ್ಲದೇ ಇರುವುದೇ ಈ ಮಕ್ಕಳ ದೋಷವಾಗಿದೆ ಎಂದು ಹೇಳಬಹುದು. ಕಣ್ಣಿಲ್ಲದೆ ಇರುವುದರಿಂದ ಇವರು ಓದುವುದು ಕಷ್ಟ, ಇದಕ್ಕೆ ತಕ್ಕ ಸಹಾಯ ಸಲಕರಣೆ ಗಳನ್ನು ಒದಗಿಸದೇ ಇರುವುದು ಸರಿಯಲ್ಲ. ಸರಕಾರವೇ ಇದಕ್ಕೆ ಜವಾಬುದಾರರಾಗಿರತಕ್ಕವರು. ಈಗ ಇರುವ ಪಠ್ಯ ಪುಸ್ತಕ ಕ್ರಮಗಳನ್ನು ಬದಲಾಯಿಸಿ ಅವರನ್ನೂ ಇತರರಂತೆ ಒಳ್ಳೆಯ ಸಿಟಿಜನ್ ಆಗಿ ಮಾಡುವುದು ನಮ್ಮ ಕರ್ತವ್ಯ. ಇವೊತ್ತು ಎಷ್ಟಾಬ್ಲಿಷ್‌ಮೆಂಟಿಗಾಗಿ ಸುಮಾರು 2,68,000 ರೂಪಾಯಿಗಳಷ್ಟು ಇಂತಹ ಕುರುಡ ಹಾಗೂ ಮೂಗು ಮಕ್ಕಳಿಗಾಗಿ ಎಂದು ಖರ್ಚು ಮಾಡಿದ್ದರೂ ಕೂಡ ಸುಮಾರು 49 ಸಾವಿರ ರೂಪಾಯಿಗಳಷ್ಟು ಕೊಡುವುದು ಎಂದರೆ, ನಮ್ಮಲ್ಲಿ ಒಂದು ಗಾದೆ ಹೇಳುವಂತೆ ಏನು ಕೊಟ್ಟರೂ ಇಂತಹ ಕುರುಡ ಮಕ್ಕಳಿಗೆ ಯಾವ ಸೌಲಭ್ಯಗಳೂ ಸಿಗುವುದಿಲ್ಲ. ಇವೊತ್ತು ಸುಮ್ಮನೆ ಇಲ್ಲಿರುವ ಕುರುಡ ಮಕ್ಕಳನ್ನು ಹಾಡು ಎಂದು ಹಾಡಿಸುವುದು ತಬಲವನ್ನು ಹೊಡಿ ಎಂದು ತಬಲ ಕಲಿಸುವುದು ಇಷ್ಟೇ ಮಾಡದೆ ಬೇರೆ ಬೇರೆ ವಿಧವಾದ ಕೆಲಸಗಳನ್ನೂ ಇವರು ಗಳು ಕಲಿಯುವಂತೆ ಸಹಾಯ ಮಾಡಿಕೊಡಬೇಕು. ಈಗಂತೂ ಎಷ್ಟೋ ತರಹದ ಕೆಲಸಗಳು ಬಂದಿವೆ. ಕ್ರಾಫ್ಟ್ಸ್ ಕೆಲಸಗಳಿವೆ, ನಮ್ಮ ಮದರಾಸಿನಲ್ಲಿರುವ ಪೆರಂಬೂರು ಫ್ಯಾಕ್ಟರಿಯಲ್ಲಿ ನೋಡಿದರೆ ಅಲ್ಲಿ ಕುರುಡರು ಜಗತ್ತಿನಲ್ಲಿ ಎಲ್ಲೂ ಮಾಡದೇ ಇರುವಂತಹ ಕೆಲಸಗಳನ್ನು ಅವರು ಇಂದು ಮಾಡುತ್ತಿದ್ದಾರೆ. ಅಷ್ಟು ಮಟ್ಟಿಗೆ ಟೆಕ್ನಿಕಲ್ ವಿಷಯಗಳಲ್ಲಿ ಅವರಿಗೆ ತರಬೇತಿ ಕೊಟ್ಟು ಎಷ್ಟೋ ಲಕ್ಷಣವಾಗಿ ಕೆಲಸ ಮಾಡುತ್ತಿದ್ದಾರೆ. ಹೀಗೆ ಅವರು ಜೀವನವನ್ನ ಉತ್ತಮ ಮಾಡಿ ಕೊಳ್ಳಲು ಅನುಕೂಲವಾಗುವಂತಹ ಕೆಲಸಗಳನ್ನು ಸರಕಾರದವರು ಮಾಡಲು ತಕ್ಕ ಕ್ರಮಗಳನ್ನು ತೆಗೆದುಕೊಳ್ಳಬೇಕು. ಹಾಗೆ ಮಾಡದೆ ಈಗ ಇರುವಂತೆ ಕುರುಡ ಮಕ್ಕಳನ್ನು ಸುಮ್ಮನೆ ಹಾಡು ಎಂದು ಹಾಡನ್ನು ಕಲಿಸುವುದು, ತಬಲ ಹೊಡಿ ಎಂದು ತಬಲ ಕಲಿಸುವುದು ಈ ರೀತಿ ಮಾಡುವುದು ತಪ್ಪು. ಇದಕ್ಕೆ ಬದಲಾಗಿ ಅವನು ತನ್ನ ಕಾಲಿನ ಮೇಲೆ ನಿಂತು ಕೆಲಸಮಾಡುವಂತಹ ಕಸಬು ಗಳನ್ನು ಕಲಿಯಲು ಒಂದು ಅವಕಾಶ ಮಾಡಿಕೊಡಬೇಕು. ಅದರಿಂದ ಈಗಿರುವ ಸಿಲಬಸ್ಸು ಹಾಗೂ ಪಠ್ಯಕ್ರಮಗಳನ್ನು ಬದಲಾಯಿಸಬೇಕು ಎಂದು ಇಲ್ಲಿ ಹೇಳಲು ಇಷ್ಟಪಡುತ್ತೇನೆ.

ಯೂನಿವರ್ಸಿಟಿ ವಿಚಾರದಲ್ಲಿ ಇಲ್ಲಿ ಸ್ವಲ್ಪ ಮಾತನಾಡಬೇಕಾಗಿದೆ. ಯೂನಿವರ್ಸಿಟಿಯಲ್ಲಿ ಅದರಲ್ಲೂ ನಮ್ಮ ಮೈಸೂರು ಯೂನಿವರ್ಸಿಟಿಯಲ್ಲಿ ಹಿಂದೆ ಎಂದೂ ಇಂತಹ ಅನ್ಯಾಯವಾಗಿರಲಿಲ್ಲ, ಮುಂದೆ ಈ ತರಹ ಅನ್ಯಾಯವಾಗುತ್ತೋ ಇಲ್ಲವೋ ಗೊತ್ತಿಲ್ಲ. ಇದಕ್ಕೆ ಇಲ್ಲಿ ಉದಾಹರಣೆ ಕೊಡ ಬೇಕೆಂದರೆ ಈಗ ತಾನೇ ಒಬ್ಬರು ಮಾನ್ಯ ಸದಸ್ಯರು ಸಂಸ್ಕೃತದ ಬಗ್ಗೆ ಮಾತನಾಡುತ್ತಾ ಇದು ಎಷ್ಟು ಮಟ್ಟಿಗೆ ಅಧೋಗತಿಗೆ ಇಳಿದಿದೆ ಎನ್ನುವುದನ್ನು ಹೇಳಿದರು. ಹೀಗೆ ಅನ್ಯಾಯವಾದರೆ ಯಾರಾದರೂ ಸಂಸ್ಕೃತವನ್ನು ಓದಲು ಮುಂದೆ ಬರುತ್ತಾರೆಯೇ ? ಯಾರಿಗೂ ಕೂಡ ಮನಸ್ಸು ಬರುವುದಿಲ್ಲ ಎನ್ನುವುದನ್ನು ನಮ್ಮ ಮಾನ್ಯ ಸಚಿವರ ಅವಗಾಹನೆಗಾಗಿ ಇಲ್ಲಿ ತರುತ್ತಿದ್ದೇನೆ. ಯೂನಿವರ್ಸಿಟಿಯಲ್ಲಿ ಸಂಸ್ಕೃತಕ್ಕೆ ಒಂದು ರೀಡರು ಪೋಸ್ಟು ಬೇಕೆಂದು ಅಡ್ವರ್ಟೈಸ್ ಮಾಡಿದರು. ಒಬ್ಬ ಮನುಷ್ಯ ಸಂಸ್ಕೃ ಕಾಲೇಜಿನ ಪ್ರಿನ್ಸಿಪಾಲರಾದವರು ಒಂದು ಅಪ್ಲಿಕೇಷನ್ನು ಹಾಕಿದ್ದರು ಇದನ್ನು ಕೊಡಲು ಹೇಗೆ ಇಲ್ಲಿರುವ ಕೊಲಿಜಿಯೇಟು ಶಾಖೆಯ ಡೈರೆಕ್ಟರವರು ಮಾಡಿದರು ಎನುವು ದನ್ನು ಇಲ್ಲಿ ನೋಡಬಹುದು. ಅದನ್ನು ಗವರ್ನಮೆಂಟು ಸರ್ವಿಸ್ಸಿನಲ್ಲಿರುವ ಒಬ್ಬರಿಗೆ ಕೊಟ್ಟಿದ್ದಾರೆ. ಇದನ್ನು ಹೇಗೆ ಕೊಟ್ಟಿದ್ದಾರೆಂದರೆ, ಅವರು ಈ ಪೋಸ್ಟಿಗೆ ಅಪ್ಲೈ ಮಾಡಿದ್ದರು ಅವರು ಮಾಡುತ್ತ ಇದ್ದ ಕೆಲಸವನ್ನು ಬಿಡುವುದಕ್ಕಾಗದೆ ಈಚೆಗೆ ಬಂದಿರುವ ಸರ್ಕಾರಿ ಆಜ್ಞೆಯ ಪ್ರಕಾರ ವಾಲಂಟರಿ ರಿಟೈರುಮೆಂಟು ಮಾಡಿಕೊಂಡು ಆ ನಂತರ ರೀಡರು ಪೋಸ್ಟನ್ನು ಬೇರೆ ಕಡೆ ಒಪ್ಪಿಕೊಂಡು ಹೋಗ ಬೇಕಾಗಿ ಬಂತು. ಅಲ್ಲದೆ ಇದರ ಬಗ್ಗೆ ಅವರನ್ನು ರಿಟೈರುಮಾಡಲು ಸರ್ಕಾರದ ಆರ್ಡರ್ ಆಗದೆಹೋದುದರಿಂದಾಗಿ ಅವರನ್ನು ಪೆಂಡಿಂಗ್ ಆರ್ಡರ್ಸ್ ಆಫ್ ಗವರ್ನಮೆಂಟು ಎಂದು ಅವರು ರಿಲೀವ್ ಮಾಡಿಸಿಕೊಂಡು ಹೋಗಬೇಕಾಗಿ ಬಂತು. ಅವರು ಎಂ. ಎ. ಪಾಸು ಮಾಡಿದ್ದಾರೆ ಮತ್ತು ಸುಮಾರು 9—10 ವರ್ಷಗಳ ಕಾಲ ಸರಕಾರದಲ್ಲಿ ಕೆಲಸ ಮಾಡಿದ್ದಾರೆ ಮತ್ತು ಇನ್ನೂ ಎಲ್ಲತರಹ ಕ್ವಾಲಿಫಿಕೇಷನ್ನುಗಳನ್ನೂ ಪಡೆದಿದ್ದಾರೆ. ಹೀಗಿದ್ದೂ ಅವರು ಇದ್ದ ಕೆಲಸವನ್ನು ಬಿಡುವುದಕ್ಕಾಗಿ ವಾಲಂಟರಿ ರಿಟೈರುಮೆಂಟು ಮಾಡಿಕೊಂಡು ಬೇರೆ ಕಡೆ ಮತ್ತೆ ಹೋಗಿ ಕೆಲಸ ಮಾಡಬೇಕೆಂದು ರೀಡರು ಪೋಸ್ಟು ಅಕ್ಸೆಪ್ಟ್ ಮಾಡಿಕೊಳ್ಳಬೇಕಾಗಿ ಬಂತು. ಇದನ್ನು ನೋಡಿದರೆ ನಮ್ಮ ಸರಕಾರದಲ್ಲಿ ಹೇಳುವವರು ಯಾರು ಇಲ್ಲವೇ ? ಕೇಳುವವರು ಯಾರು ಇಲ್ಲವೇ ? ಹೇಗೆ ಎಂಬುದನ್ನು ಸರಕಾರ ಇಲ್ಲಿ ಹೇಳಬೇಕೆಂದು ಕೇಳುತ್ತೇನೆ.

(ಶ್ರೀಮತಿ ಕೆ. ಎಸ್. ನಾಗರತ್ನಮ್ಮ)

ಕೊನೆಯದಾಗಿ, ಈಗತಾನೇ ಮಾತನಾಡಿದ ಶ್ರೀಮಾನ್ ಅಣ್ಣಾರಾಯರು ಟೀಚರುಗಳನ್ನು ನೇಮಿಸುವಾಗ ಅವರನ್ನು ಒಂದೇ ಸ್ಥಳದಲ್ಲೇ ಇಟ್ಟರೆ ಒಳ್ಳೆಯದು, ಅವರನ್ನು ಬೇರೆ ದೂರದ ಕಡೆಗೆ ವರ್ಗಾಯಿಸಿದರೆ ತೊಂದರೆಯಾಗುತ್ತದೆ ಎಂದು ಹೇಳಿದರು. ಇದನ್ನು ನಾನು ವಿರೋಧ ಮಾಡುತ್ತೇನೆ. ಒಂದೇ ತಾಲ್ಲೂಕಿಗೆ ಸೇರಿದವರನ್ನೇ ಒಂದೇ ಸ್ಥಳದಲ್ಲೇ ಟೀಚರಾಗಿ ಕೆಲಸ ಮಾಡುವಂತೆ ಮಾಡಿದರೆ ಅವರಿಗೆ ಅಲ್ಲೇ ಅವರ ಆಸ್ತಿಪಾಸ್ತಿಗಳು ಇರುತ್ತವೆ. ಅದನ್ನು ನೋಡಿಕೊಳ್ಳಲು ಅನುಕೂಲವಾಗುತ್ತದೆಯೇ ಹೊರತು ಹುಡುಗರಿಗೆ ಚೆನ್ನಾಗಿ ಪಾಠ ಹೇಳುವುದಕ್ಕೆ ಆಗುವುದಿಲ್ಲ. ಈ ರೀತಿ ಮಾಡುವುದು ತಪ್ಪು. ಇದೇನಾಗುತ್ತೆ ಎಂದರೆ ಅಲ್ಲೇ ಇರುವವರು ತಮ್ಮ ತೋಟದಲ್ಲಿ ಹಿಪ್ಪುನೇರಳೆ ಸೊಪ್ಪು ಆರಿಸುವುದು ಮತ್ತು ಬೇರೆ ಕಡೆಯಿಂದ ಸೌದೆಗಾಗಿ ಕಡ್ಡಿಗಳನ್ನು ತರುವುದು ಇದಕ್ಕೆ ಹೆಚ್ಚು ಗಮನ ಹೋಗುತ್ತದೆಯೇ ಹೊರತು ಹುಡುಗರಿಗೆ ಒಳ್ಳೆಯ ಪಾಠ ಹೇಳಿಕೊಟ್ಟು ವಿದ್ಯೆ ಕಲಿಸುವುದಕ್ಕೆ ಆಗುವುದಿಲ್ಲ. ಅವರ ಇತರ ಎಲ್ಲ ವ್ಯವಹಾರಗಳನ್ನು ಮಾಡಲು ಅನುಕೂಲವಾಗುತ್ತದೆ. ಇದರಿಂದ ನಾನು ಸೂಚನೆ ಮಾಡುವುದು ಒಂದೇ ಊರಿನಲ್ಲಿರುವ ಟೀಚರುಗಳನ್ನು ಬೇರೆ ನೆರೆ ಊರುಗಳಲ್ಲಿ ಕೆಲಸ ಮಾಡುವಂತೆ ನೇಮಕ ಮಾಡಿದರೆ ಆಗ ಸ್ಕೂಲುಗಳಲ್ಲಿ ಹುಡುಗರಿಗೆ ಪಾಠ ಹೇಳಲು ಅವಕಾಶ ಸಿಕ್ಕುತ್ತದೆ. ಆ ರೀತಿ ಮಾಡಬೇಕು. ಒಂದೇ ಸ್ಥಳದಲ್ಲೇ ಇರಬೇಕೆಂದು ಹೇಳುವುದನ್ನು ನಾನು ವಿರೋಧ ಮಾಡುತ್ತೇನೆ.

ಆಮೇಲೆ ಕೊನೆಯದಾಗಿ ತಾಲ್ಲೂಕು ಬೋರ್ಡುಗಳ ಸ್ಕೂಲುಗಳಲ್ಲಿ ಹಾಗೂ ಡಿಸ್ಟ್ರಿಕ್ಟ್ ಬೋರ್ಡು ಸ್ಕೂಲುಗಳಲ್ಲಿ ನಡೆಯುತ್ತಿರುವುದರ ಬಗ್ಗೆ ಸ್ವಲ್ಪ ಇಲ್ಲಿ ಹೇಳಬೇಕಾಗಿದೆ. ತಾಲ್ಲೂಕು ಬೋರ್ಡು ಸ್ಕೂಲುಗಳ ಟೀಚರುಗಳನ್ನು ಅಲ್ಲಿಯೇ ಇರುವ ಡಿಸ್ಟ್ರಿಕ್ಟ್ ಬೋರ್ಡು ಸ್ಕೂಲುಗಳಿಗೆ ವರ್ಗ ಮಾಡುವಾಗ ಅಲ್ಲಿರುವ ಡೆಪ್ಯೂಟೀ ಕಮಿಷನರವರೇ ತೀರ್ಮಾನ ಮಾಡಬೇಕೆಂದು ಈಚೆಗೆ ಹೈಕೋರ್ಟಿನಿಂದಲೂ ಒಂದು ಆರ್ಡರು ಬಂದಿದೆ ಎಂದು ನಾನು ಕೇಳುತ್ತೇನೆ. ಇದರ ಬಗ್ಗೆ ಇಲಾಖೆಯವರು ಇನ್ನೂ ಯಾವ ಆರ್ಡರೂ ಸರಿಯಾಗಿ ಕೊಟ್ಟಿಲ್ಲ. ಇದರಿಂದೇನಾಗಿದೆ ಎಂದರೆ ಒಬ್ಬ ಅಧಿಕಾರಿಯನ್ನು ವರ್ಗ ಮಾಡುವಾಗ ಡಿ. ಸಿ. ಮಾಡುತ್ತಾರೆಂದು ಹೇಳುತ್ತಾರೆ. ಡಿ. ಸಿ. ಯವರ ಕಡೆಗೆ ಹೋಗಿ ನೋಡಿದರೆ ಇದನ್ನೆಲ್ಲಾ ಡಿ.ಪಿ.ಐ. ಆಫೀಸಿನೊಳಗೇ ಮಾಡುತ್ತಾರೆ ಬೇರೆಲ್ಲೂ ಮಾಡುವುದಿಲ್ಲ ಎಂದು ಹೇಳುತ್ತಾರೆ. ಹೀಗಾಗಿ ಒಬ್ಬ ಅನಾವಶ್ಯಕವಾಗಿ ಇಲ್ಲದ ತೊಂದರೆಗಳಿಗೆ ಸಿಕ್ಕಿ ಪೇಚಾಡುವ ಸ್ಥಿತಿಗೆ ಬಂದಿದೆ. ಇದನ್ನು ಸರಕಾರ ವಿಚಾರ ಮಾಡಿ ಸರಿಪಡಿಸಬೇಕೆಂದು ಇಲ್ಲಿ ಹೇಳುತ್ತೇನೆ.

ಮಾನ್ಯ ಅಧ್ಯಕ್ಷರು ಸ್ವಲ್ಪ ಹೆಚ್ಚು ಕಾಲಾವಕಾಶ ಕೊಟ್ಟು ನನಗೆ ಮಾತಾಡಲು ಅವಕಾಶ ಕೊಟ್ಟುದಕ್ಕಾಗಿ ಅವರಿಗೆ ನನ್ನ ವಂದನೆಗಳನ್ನು ಸಲ್ಲಿಸಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಮಾನ್ಯ ಅಧ್ಯಕ್ಷರೇ, ಮಾನ್ಯ ವಿದ್ಯಾ ಸಚಿವರು ಮಂಡಿಸಿರತಕ್ಕ ಬೇಡಿಕೆ ಏನಿದೆ ಅದನ್ನು ನಾನು ಸಂಪೂರ್ಣವಾಗಿ ವಿರೋಧಿಸುತ್ತಾ ಈ ಬೇಡಿಕೆಗಳ ಬಗ್ಗೆ ಕೆಲವು ಮುಖ್ಯ ಸಲಹೆಗಳನ್ನು ನಾನು ಇಲ್ಲಿ ಕೊಡುವುದಕ್ಕೆ ಇಷ್ಟಪಡುತ್ತೇನೆ. ಸ್ವಾಮೀ, ವಿದ್ಯಾ ಇಲಾಖೆಯಲ್ಲಿ ಹಣ ಖರ್ಚು ಮಾಡುತ್ತಾ ಇರುವುದು ಸುಮಾರು ಮೂವ್ವತ್ತು ಕೋಟಿಗೂ ಮೇಲ್ಪಟ್ಟು ಇದೆ. ಇಷ್ಟು ಹಣ ಬೇಕೆಂದು ಕೇಳುತ್ತಿರುವುದನ್ನು ನೋಡಿದರೆ ಇದು ಈಗಿನ ಆದಾಯದಲ್ಲಿ ಸುಮಾರು ಐದನೇ ಒಂದು ಭಾಗದಷ್ಟು ವಿದ್ಯಾಭ್ಯಾಸಕ್ಕಾಗಿ ಖರ್ಚು ಮಾಡಬೇಕೆಂದು ಇದ್ದಾರೆ. ಕೆಲವು ರೀತಿಯಲ್ಲಿ ವಿದ್ಯಾ ಇಲಾಖೆ ಉತ್ತಮವಾದ ಕೆಲಸಗಳನ್ನು ಮಾಡಬೇಕೆಂದು ನಿರ್ವಹಿಸುತ್ತಿದ್ದರೂ ಕೂಡ ಅನೇಕ ಗೊಂದಲಗಳನ್ನು ನಮ್ಮ ಮಾನ್ಯ ವಿದ್ಯಾ ಸಚಿವರು ಎಬ್ಬಿಸುತ್ತಿರುವುದರಿಂದಾಗಿ ವಿದ್ಯಾ ಕ್ಷೇತ್ರದಲ್ಲಿ ಪ್ರಗತಿಯಾಗಲೂ ಸಾಧ್ಯವಿಲ್ಲ ಎಂದು ನಾನಾದರೂ ಇಲ್ಲಿ ಹೇಳಲು ಇಚ್ಛೆ ಪಡುತ್ತೇನೆ.

ಈ ಇಲಾಖೆಯಲ್ಲಿ ಪದೇ ಪದೇ ಸಿಂಗಲ್ ಟೀಚರುಗಳು ಎಂದು ಪ್ರೈಮರಿ ಶಾಲೆಗಳಲ್ಲಿ ಕೆಲಸ ಮಾಡಬೇಕೆಂದು ನೇಮಿಸುತ್ತಿದ್ದಾರೆ. ಇದನ್ನು ತಪ್ಪಿಸಬೇಕೆಂದು ನಾವು ಆಗಾಗ್ಗೆ ಹೇಳುತ್ತಲೇ ಬರುತ್ತಿದ್ದೇವೆ. ಒಂದು ಪಾಠಶಾಲೆಯಲ್ಲಿ ಸುಮಾರು 50—60 ಮಕ್ಕಳು ಇರುತ್ತಾರೆ. ಮತ್ತು ನಾಲ್ಕು ತರಗತಿಗಳು ಇರುತ್ತವೆ. ಒಬ್ಬನೇ ಉಪಾಧ್ಯಾಯ ನಾಲ್ಕು ತರಗತಿಗಳನ್ನೂ ನೋಡುವುದಕ್ಕೆ ಸಾಧ್ಯವಿಲ್ಲ. ಇದರಿಂದಾಗಿ ಮಕ್ಕಳಿಗೆ ವಿದ್ಯಾಭ್ಯಾಸ ಕುಂಠಿತವಾಗುತ್ತದೆ. ಇದನ್ನು ತಪ್ಪಿಸಬೇಕೆಂದು ನಾವು ಬಹಳ ವರ್ಷಗಳಿಂದಲೂ ಹೇಳುತ್ತ ಬಂದಿದ್ದೇವೆ, ಈ ಬಗ್ಗೆ ಸರಕಾರ ಅಷ್ಟಾಗಿ ನಿಗಾ ಕೊಟ್ಟಂತೆ ಕಾಣುವುದಿಲ್ಲ. ಹಾಗೇ ಬಿಲ್ಡಿಂಗುಗಳ ಬಗ್ಗೆ ನಾವು 1962-63 ನೇ ಇಸವಿ

ಯಿಂದಲೂ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಿಗೆ ಕಟ್ಟಡವನ್ನು ಪಿ.ಡಬ್ಲ್ಯು.ಡಿ. ಇಲಾಖೆಯವರು ಕಟ್ಟಿಸಿಕೊಂಡುತ್ತಿದ್ದರು ಮತ್ತು ಅವನ್ನು ಪಂಚಾಯತಿಯವರು ಹಾಗೂ ತಾಲ್ಲೂಕು ಬೋರ್ಡುಗಳವರು ಆಗಾಗ್ಗೆ ರಿಪೇರಿ ಮಾಡಿಸಿಕೊಡುತ್ತಿದ್ದರು. ಈ ದಿವಸ ಸರಕಾರ ಒಂದು ಆರ್ಡರು ಹೊರಡಿಸಿ ಹಿಂದೆ ಇದ್ದ ಪದ್ಧತಿಯನ್ನು ರದ್ದು ಮಾಡಿದ್ದಾರೆ. ಹಿಂದಿನಿಂದಲೂ ಪಿ.ಡಬ್ಲ್ಯು ಇಲಾಖೆಯವರು ಸ್ಕೂಲುಗಳಿಗಾಗಿ ಕಟ್ಟಡಗಳನ್ನು ಕಟ್ಟಿ ಅದನ್ನು ವಿದ್ಯಾ ಇಲಾಖೆಗೆ ಕೊಡುತ್ತಿದ್ದರು ಮತ್ತು ವರ್ಷೇ ವರ್ಷೇ ಅದರ ರೀಪೇರಿಗಳನ್ನು ಮಾಡಿಸಿಕೊಡುತ್ತಿದ್ದರು. ಈಗ ಇದನ್ನು ತಪ್ಪಿಸಿ ಬಿಟ್ಟು ಆಯಾ ತಾಲ್ಲೂಕು ಬೋರ್ಡುಗಳವರೇ ಮಾಡಿಸಬೇಕೆಂದರೆ ಅದು ಆಗುವುದಿಲ್ಲ. ಇದನ್ನು ಸರಿಪಡಿಸಬೇಕೆಂದು ಎರಡು ಮೂರು ವರ್ಷಗಳಿಂದಲೂ ಹೇಳುತ್ತಿದ್ದೇವೆ ಮತ್ತು ಮಾನ್ಯ ಮಂತ್ರಿಗಳ ಗಮನಕ್ಕೂ ತರಲಾಗಿದೆ. ಆದರೂ ಅವರ ಗಮನ ಇತ್ತಕಡೆ ಹರಿಯದೇ ಇರುವುದು ತುಂಬಾ ವಿಷಾದಕರವಾದ ಸಂಗತಿ. ಲಕ್ಷಾಂತರ ರೂಪಾಯಿಗಳಷ್ಟು ಹಣ ವೆಚ್ಚ ಮಾಡಿ ದೊಡ್ಡ ಯೋಜನೆಗಳನ್ನು ಮಾಡಿ ಜನತೆಯ ಹಣ ಹಾಳಾಗುತ್ತಿದೆ. ಇದನ್ನು ಸಂಪೂರ್ಣವಾಗಿ ಪುನರ್ವಿಮರ್ಶೆ ಮಾಡಬೇಕಾದ್ದು ನಮ್ಮ ವಿದ್ಯಾ ಸಚಿವರ ಕರ್ತವ್ಯ ಹಾಗೂ ಸರಕಾರದ ಕರ್ತವ್ಯ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಹಾಗೇ ವಿದ್ಯಾರ್ಥಿಗಳ ನೇಮಕಗಳನ್ನು ಮಾಡುವಾಗ ಹಿಂದೆ ಎಸ್.ಎಸ್.ಎಲ್.ಸಿ. ಕೆಲವರಿಗೆ ಆಗಿದ್ದವರನ್ನೂ ಹಾಗೂ ಆಗದೇ ಇರುವವರನ್ನು ಉಪಾಧ್ಯಾಯರುಗಳಾಗಿ ನೇಮಕ ಮಾಡಿಕೊಂಡಿದ್ದಾರೆ. ಆದರೆ ಅವರಿಗೆ ವರ್ಷೆ ವರ್ಷೆ ನ್ಯಾಯವಾಗಿ ಕೊಡಬೇಕಾದ ಬಡತಿಯನ್ನು ಎಂದರೆ ಇನ್‌ಕ್ರಿಮೆಂಟನ್ನು ಕೊಡುತ್ತಿಲ್ಲ. ಸರಕಾರ ಇದನ್ನೇ ಕೊಡುತ್ತಿಲ್ಲ ಎನ್ನುವುದು ಗೊತ್ತಾಗಲಿಲ್ಲ. ಇದರಲ್ಲಿ ನಾನು ಕೇಳುತ್ತಿರುವುದು ಇವರಿಗೆ ಟ್ರೈನಿಂಗು ಆಗಿಲ್ಲ, ಅದರಿಂದ ಹೀಗಾಗಿದೆ ಎಂದು ಹೇಳುತ್ತಿದ್ದಾರೆ. ನೀವು ಉಪಾಧ್ಯಾಯರುಗಳನ್ನು ನೇಮಕ ಮಾಡುವಾಗ ಟ್ರೇನಿಂಗು ಆಗಿರುವವರನ್ನು ಹಾಗೂ ಟ್ರೇನಿಂಗು ಪಡೆಯದೇ ಇರುವವರನ್ನೂ ಸೆಲೆಕ್ಟು ಮಾಡಿ ತೆಗೆದುಕೊಳ್ಳುತ್ತಿರುವುದರಿಂದ ಸರಕಾರದವರೇ ಟ್ರೇನಿಂಗು ಆಗದೆ ಇರುವವರಿಗೆ ಟ್ರೇನಿಂಗು ಕೊಡತಕ್ಕದು ಅವರ ಕರ್ತವ್ಯವಲ್ಲವೇ ? ಅನೇಕ ವರ್ಷಗಳ ಕಾಲ ಟ್ರೇನಿಂಗು ಮಾಡಿಕೊಳ್ಳಲು ಅವಕಾಶವನ್ನೇ ಕೊಡದೇ ಅವರಿಗೆ ನ್ಯಾಯವಾಗಿ ಕೊಡಬೇಕಾದ ಇನ್‌ಕ್ರಿಮೆಂಟನ್ನು ಏಕೆ ತಡೆ ಹಿಡಿಯಬೇಕು ? ಹೀಗೆ ಬಡತಿಯನ್ನು ನಿಲ್ಲಿಸತಕ್ಕದ್ದು ಸರಿಯಾದ ಕ್ರಮವಲ್ಲ. ಹೀಗೆ ಅನೇಕ ವರ್ಷಗಳಿಂದ ಇನ್‌ಕ್ರಿಮೆಂಟು ಇಲ್ಲದೆ ಕೆಲಸ ಮಾಡುತ್ತಿರುವ ಉಪಾಧ್ಯಾಯರುಗಳಿಗೆ ಇನ್ನೂ ಚೆನ್ನಾಗಿ ಕೆಲಸ ಮಾಡಲು ಮನಸ್ಸು ಬರುವುದಿಲ್ಲ ಮತ್ತು ವಿದ್ಯಾಭ್ಯಾಸವೂ ಚನ್ನಾಗಿ ಆಗುವುದಿಲ್ಲ. ಉಪಾಧ್ಯಾಯರುಗಳಿಗೆ ಅವರಿಗೆ ಟ್ರೇನಿಂಗು ಆಗಿರಲಿ ಆಗಿಲ್ಲದಿರಲ್ಲಿ ಅವರಿಗೆ ಕೊಡಬೇಕಾಗಿರುವ ಒಂದು ಅಥವಾ ಎರಡು ಮೂರು ವರ್ಷಗಳ ಇನ್‌ಕ್ರಿಮೆಂಟುಗಳನ್ನು ಕೊಡಬೇಕಾದ್ದು ಸರಕಾರದ ಪ್ರಥಮ ಕರ್ತವ್ಯ. ಇದನ್ನು ನಿಲ್ಲಿಸಬೇಡಿ ಎಂದು ನಾನು ಸರಕಾರದಲ್ಲಿ ಹೇಳಲು ಇಷ್ಟಪಡುತ್ತೇನೆ. ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲೆಗಳಲ್ಲಿ ಪಠ್ಯಪುಸ್ತಕಗಳನ್ನು ಬದಲಾಯಿಸುವ ಪರಿಪಾಠವನ್ನು ಸರ್ಕಾರದವರು ಪ್ರಾರಂಭ ಮಾಡಿದ್ದೀರಿ. ಇದರಿಂದ ಎಷ್ಟು ಅನಾಹುತವಾಗುತ್ತಾ ಇದೆ ಎಂಬುದನ್ನು ತಾವು ನೋಡಬೇಕು.

ಶ್ರೀ ಎಸ್. ಆರ್. ಕಂಠಿ.—3 ವರ್ಷಕ್ಕೊಮ್ಮೆ ಬದಲಾಯಿಸುತ್ತಾ ಇದ್ದೇವೆ. I have been saying from the beginning if the hon'ble members prove that we are changing the text books every year, I am prepared to make full amendments to it. We are not making changes like that. They are continued for 3 years. Sometimes we give extension also.

ಶ್ರೀ ಬಿ. ಬೈರಪ್ಪಾಜಿ.—3 ವರ್ಷಕೊಮ್ಮೆ ಬದಲಾಯಿಸುತ್ತೇವೆ ಎಂದು ಮಾನ್ಯಮಂತ್ರಿಗಳು ಹೇಳುತ್ತಾರೆ, ಪ್ರತಿ ಜಿಲ್ಲೆ ಜಿಲ್ಲೆಗೂ ಕೂಡ ಬದಲಾವಣೆ ಮಾಡುತ್ತಾ ಇದ್ದೀರಿ. ಒಬ್ಬ ಅಧಿಕಾರಿ ತುಮಕೂರಿನಿಂದ ಧಾರವಾಡಕ್ಕೆ ವರ್ಗವಾಗಿ ಹೋಗಬೇಕಾಗುತ್ತದೆ, ಅವರ ಮಕ್ಕಳು ಅಲ್ಲಿಗೆ ಹೋಗಿ ಪಾಠಶಾಲೆಗೆ ಸೇರಬೇಕು ಆಗ ಪಠ್ಯಪುಸ್ತಕ ಬದಲಾವಣೆಯಾಗವುದಿಲ್ಲವೇ ? ಅಥವಾ ಮಕ್ಕಳಿಗೆ ತೊಂದರೆಯಾಗುವುದಿಲ್ಲವೇ ? 3 ವರ್ಷ ಆದರೂ ಕೂಡ ಕಷ್ಟವಾಗುವುದಿಲ್ಲವೇ ಎಂಬುದು ನನ್ನ ಪ್ರಶ್ನೆ. ಹಿಂದೆ ಇದ್ದಂಥ ಪದ್ಧತಿಯೇನೆಂದರೆ ಇಡೀ ದೇಶಕ್ಕೆ ಅನ್ವಯಿಸುವ ರೀತಿಯಲ್ಲಿ ಪಠ್ಯಪುಸ್ತಕವನ್ನು ತಯಾರು ಮಾಡುತ್ತಾ ಇದ್ದರೂ ತೊಂದರೆಯಾಗುತ್ತಾ ಇರಲಿಲ್ಲ. ಹಿಂದೆ ಇದ್ದ ಪದ್ಧತಿಯನ್ನು ನಿರ್ಲಕ್ಷ್ಯ ಮಾಡುತ್ತಾ ಇರುವುದರಿಂದ ವಿದ್ಯಾಭ್ಯಾಸದಲ್ಲಿ ಕುಂಠಿತವಾಗುತ್ತಾ ಇದೆ ಎಂದು ನನ್ನ ಅಭಿಪ್ರಾಯ. ಇದನ್ನು ಸರಿಪಡಿಸುವುದು ಸರ್ಕಾರದವರ ಕರ್ತವ್ಯ ಎಂದು ಹೇಳುತ್ತಾ ಇದ್ದೇನೆ.

ಸಿಂಗಲ್ ಟೀಚರ್ಸ್ ಮತ್ತು ಕಟ್ಟಡಗಳ ಸಮಸ್ಯೆ ಏನಿದೆ ಇದನ್ನು ಕೂಡ ಮೊದಲನಿಂದಲೂ ಮತ್ತೆ ಮತ್ತೆ ಹೇಳುತ್ತಾ ಇದ್ದೇನೆ. ಕಟ್ಟಡಗಳ ಬಗ್ಗೆ ಯೋಚನೆ ಮಾಡಿ ಅಡ್‌ಹಾಕ್ ಬೇಸಿಸ್

(ಶ್ರೀ ಬಿ. ಬೈರಪ್ಪಾಜಿ)

ಮೇಲೆ 5 ಸಾವಿರ 2 ಸಾವಿರ ರೂಪಾಯಿಗಳನ್ನು ಕೊಟ್ಟು ರಿಪೇರಿ ಮಾಡಿಕೊಳ್ಳಿ ಎಂದು ಹೇಳು ವುದು ತಪ್ಪಬೇಕು. ಹಿಂದೆ ಇದ್ದಂತೆ ಪಿ. ಡಬ್ಲ್ಯೂ. ಡಿ. ಇಲಾಖೆಗೆ ಇದನ್ನು ವಹಿಸಬೇಕು. ವರ್ಷೇ ವರ್ಷೇ ಅವರು ಅದನ್ನು ರಿಪೇರಿ ಮಾಡಿ ಕಟ್ಟಡಗಳು ವ್ಯವಸ್ಥಿತವಾಗಿರುವಂತೆ ಏರ್ಪಾಡು ಮಾಡ ಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ ಇದ್ದೇನೆ.

ಪ್ರಾರ್ಥಮಿಕ ಶಿಕ್ಷಣವನ್ನು ಕಡ್ಡಾಯ ಮಾಡಿದ್ದೀರಿ. ಅದಕ್ಕೆ ಸರಿಯಾದ ವ್ಯವಷ್ಥೆ ಮಾಡಧಿದ್ದರೆ ಅದರಿಂದ ವಿದ್ಯಾಭ್ಯಾಸಕ್ಕೆ ತೊಂದರೆಯಾಗುವುದಿಲ್ಲವೇ ? ಅನೇಕ ಗ್ರಾಮಗಳಲ್ಲಿ ಪಾಠಶಾಲೆಗಳನ್ನು ಪ್ರಾರಂಭಮಾಡಿರುತ್ತೀರಿ ಅವಕ್ಕೆ ಕಟ್ಟಡಗಳೇ ಇರುವುದಿಲ್ಲ. ಮರದ ಕೆಳಗೋ ಅಥವಾ ಇನ್ನೆಲ್ಲೋ ಮಕ್ಕಳು ಓದುತ್ತಾ ಇರತಕ್ಕ ಸನ್ನಿವೇಶ ಕೂಡ ಇದೆ. ಅವಕ್ಕೆ ಕಟ್ಟಡವನ್ನು ಒದಗಿಸುವುದೂ ಕೂಡ ಸರ್ಕಾರದವರ ಕರ್ತವ್ಯ, ಪ್ರಾರ್ಥಮಿಕ ಶಿಕ್ಷಣವನ್ನು ಸಂಪೂರ್ಣವಾಗಿ ಸರ್ಕಾರದವರೇ ವಹಿಸಿ ಕೊಳ್ಳಬೇಕಾಗುತ್ತದೆ. ಯಾವ ವಿಧವಾದ ಭಾರವನ್ನೂ ಕೂಡ ಪ್ರಾಥಮಿಕ ಶಿಕ್ಷಣದಲ್ಲಿ ಜನರಿಗೇ ಆಗಲಿ ಮಕ್ಕಳಿಗೇ ಆಗಲಿ ವಿಧಿಸುವುದಿಲ್ಲ ಎಂದು ಒಪ್ಪಿಕೊಂಡಿದ್ದು ಆಗಿರುವುದರಿಂದ ಸರ್ಕಾರದವರು ಅವರಿಗೆ ಕಟ್ಟಡವನ್ನೂ ಕೂಡ ಒದಗಿಸಿಕೊಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತಾ ಇದ್ದೇನೆ.

7ನೇ ಸ್ಟಾಂಡರ್ಡ್ ಎಕ್ಸಾಮಿನೇಷನ್‌ನ್ನು ಮಾಡುತ್ತಾ ಇದ್ದೀರಿ. ಈ ವರ್ಷ ಅದನ್ನು ಜಾರಿಗೆ ತಂದಿದ್ದೀರಿ ಬಹಳ ಉತ್ತಮವಾದದ್ದು. ಹಿಂದೆ ಇದನ್ನು ತೆಗೆದು ವಿದ್ಯಾಭ್ಯಾಸದ ಒಂದು ಪ್ರಗತಿ ಯನ್ನೇ ಹಾಳು ಮಾಡಿದ್ದೀರಿ. ಈ ಸಾರಿ ಅದನ್ನು ಪುನಃ ತಂದಿರುವುದು ಸರಿಯಾಗಿದೆ. ಪೇಪರ್ ಗಳನ್ನು ಜಿಲ್ಲಾ ಮಟ್ಟದಲ್ಲಿ ಕರೆಕ್ಷನ್ ಮಾಡುವ ರೀತಿಯಲ್ಲಿ ವ್ಯವಸ್ಥೆ ಮಾಡಬೇಕೆಂದು ಸೂಚನೆ ಕೊಡು ವುದಕ್ಕೆ ಇಷ್ಟಪಡುತ್ತೇನೆ.

ಸೆಕೆಂಡರಿ ಸ್ಕೂಲುಗಳಲ್ಲಿ ರಿಸಲ್ಟ್ ಬರುವುದು ಏನಿದೆ ಅದು ಸಲ್ಪ ಉತ್ತಮ ಸ್ಥಿತಿಯಲ್ಲ ಬರ ಬೇಕೆಂದು ಹೇಳಿ ಒಂದು ಆರ್ಡ್‌ರನ್ನು ಹೊರಡಿಸಿದ್ದೀರಿ. ಪ್ರೈವೇಟ್ ಹೈಸ್ಕೂಲುಗಳಲ್ಲಿ ರಿಸಲ್ ಹತ್ತು ಪರ್ಸೆಂಟ್‌ಗಿಂತ ಕಡಿಮೆ ಬರುವುದಾದರೆ ಅವರಿಗೆ ಕೊಡತಕ್ಕ ಗ್ರಾಂಟನ್ನು ಖೋತಾ ಮಾಡ ತ್ತೇವೆ ಎಂದು ಹೇಳಿದ್ದೀರಿ. ಅದು ಸರ್ಕಾರದ ಸ್ಕೂಲುಗಳಿಗೆ ಅನ್ವಯಿಸು ವುದಿಲ್ಲ ಎಂದು ಹೇಳಿದ್ದೀರಿ

ಅಧ್ಯಕ್ಷರು.—ಸರ್ಕಾರಿ ಸ್ಕೂಲುಗಳಿಗೆ ಗ್ರಾಂಟ್ ಕೊಡುವುದಿಲ್ಲವಲ್ಲಾ.

ಶ್ರೀ ಬಿ. ಬೈರಪ್ಪಾಜಿ.—ಟೀಚರ್ಸ್‌ಗೆ ಸಂಬಳ ಖೋತಾ ಮಾಡಿ. ಈ ರೀತಿ ತಾರತಮ್ಯ ಏಕೆ ?

ಶ್ರೀ ಎಸ್. ಆರ್. ಕಂಠಿ.—ಸರ್ಕಾರಿ ಹೈಸ್ಕೂಲಿನಲ್ಲಿ ಸರಿಯಾಗಿ ನಡೆಯದಿದ್ದರೆ ಏನು ಕ್ರಮ ತೆಗೆದುಕೊಳ್ಳಬೇಕು ಎನ್ನುವುದಕ್ಕೆ ತಕ್ಕ ರೂಲ್ಸ್ ಮಾಡುತ್ತಾ ಇದ್ದೇವೆ. ಅದನ್ನೂ ಕೂಡ ಯೋಚನೆ ಮಾಡುತ್ತಾ ಇದ್ದೇವೆ.

ಶ್ರೀ ಬಿ. ಬೈರಪ್ಪಾಜಿ.—ತಾವು ಹೇಳುವುದು ಸರಿ. ಸರ್ಕಾರಿ ಸ್ಕೂಲುಗಳಲ್ಲಿ ರಿಸಲ್ಟ್ ಸರಿ ಯಾಗಿ ಬರದಿದ್ದರೆ ಸಂಬಂಧಪಟ್ಟ ಉಪಾಧ್ಯಾಯರನ್ನು ಸಸ್‌ಪೆಂಡ್ ಮಾಡುವುದು, ಡಿಸ್‌ಮಿಸ್ ಮಾಡುವುದು ಇದನ್ನು ಮಾಡಿ. ಪ್ರೈವೇಟ್ ಸ್ಕೂಲ್‌ಗಳಿಗೆ ಗ್ರಾಂಟ್ ಕಟ್ ಮಾಡುವ ಒಂದು ನೀತಿ ಯನ್ನು ಅನುಸರಿಸುವುದು ಸರಿಯಲ್ಲ ಎಂದು ಹೇಳುತ್ತಾ ಇದ್ದೇನೆ.

ಹೈಸ್ಕೂಲಿನಲ್ಲಿ ಕನ್ನಡ ಪಂಡಿತರು ಮತ್ತು ಭಾಷಾ ಪಂಡಿತರ ಸಮಸ್ಯೆ ಒಂದು ಇದೆ. ಪ್ರಮೋಷನ್‌ನಲ್ಲಿ ಕನ್ನಡ ಪಂಡಿತರಿಗೂ ಗ್ರಾಜ್ಯುಯೇಟ್ಸ್‌ಗೂ 1:4 ಇಟ್ಟಿದ್ದೀರಿ. ಇದು ಕನ್ನಡ ದೇಶ ವಾಗಿ ಕನ್ನಡಕ್ಕೆ ಹೆಚ್ಚಿನ ಪ್ರೋತ್ಸಾಹ ದೊರೆಯಬೇಕು.

ಶ್ರೀ ಎಸ್. ಆರ್. ಕಂಠಿ.—ಅದು ಇನ್ನೂ ಆಗಿಲ್ಲ. ಲೋಕಲ್ ಬಾಡಿಸ್‌ನಲ್ಲಿ ಕೊಡುತ್ತಾ ಇದ್ದೇವೆ. ಆದ್ದರಿಂದ ಲೋಕಲ್ ಬಾಡೀಸ್‌ನಲ್ಲಿ ಕೊಡುತ್ತಾ ಇದ್ದೀರಿ ಸರ್ಕಾರದಲ್ಲಿ ಕೊಡುತ್ತಾ ಇಲ್ಲ ಎಂದು ತಾವು ಹೇಳಬಹುದು. ಆ ವಿಚಾರ ಇದೆ.

ಶ್ರೀ ಬಿ. ಬೈರಪ್ಪಾಜಿ.—1961ರಲ್ಲಿ ರಿವೈಸ್ ಮಾಡಿದ್ದೀರಿ ಮುನಿಸಿಪಾಲಿಟಿಗಳಿಗೆ ಮಾತ್ರ ಅನ್ವಯಿಸುತ್ತದೆ ಎಂದು. ಇದನ್ನು ಒಂದು ವ್ಯವಸ್ಥಿತವಾದ ರೀತಿಯಲ್ಲಿ ಮಾಡಬೇಕು. ಸಮಾಜ ದಲ್ಲಿ ಕನ್ನಡ ಪಂಡಿತರಿಗೂ ಒಂದು ಸ್ಥಾನಮಾನ ಸರಿಯಾಗಿ ಒದಗುವಂತೆ ಒಂದು ಆರ್ಡ್‌ರನ್ನು ಹೊರಡಿಸಬೇಕೆಂದು ಅವರ ಬಗ್ಗೆ ಸರ್ಕಾರ ಸರಿಯಾದ ಒಂದು ನಿಲುವನ್ನು ತಾಳಬೇಕೆಂದು ಹೇಳಿ ಕನ್ನಡ ಪಂಡಿತರ ಪರವಾಗಿ ಸರಕಾರದವರನ್ನು ಪ್ರಾರ್ಥನೆ ಮಾಡುತ್ತಾ ಇದ್ದೇನೆ.

ಈಗ ನನಗೆ ಒಂದು ಕಾಗದ ಬಂದಿದೆ. ಮಾನ್ಯ ಮುಖ್ಯ ಮಂತ್ರಿಗಳ ಹುಟ್ಟು ಹಬ್ಬದ ಸಂದರ್ಭದಲ್ಲಿ ಪ್ರತಿಯೊಬ್ಬ ಕ ಪ್ರಾಥಮಿಕ ಶಾಲಾ ಉಪಾಧ್ಯಾಯನಿಂದಲೂ 20 ರೂಪಾಯಿಗಳನ್ನು ಕಡ್ಡಾಯವಾಗಿ ವಸೂಲು ಮಾಡುತ್ತ ಇರತಕ್ಕ ಸನ್ನಿವೇಶವನ್ನು ಕುರಿತು ಅದರಲ್ಲಿ ಬರೆದಿದ್ದಾರೆ ಇದು ನಮ್ಮ ದೇಶದ ಮುಖ್ಯ ಮಂತ್ರಿಗಳಿಗಾಗಲಿ ಅಥವಾ ಸರ್ಕಾರಕ್ಕೆ ಆಗಲಿ.........

ಶ್ರೀ ಎಸ್. ಆರ್. ಕಂಠಿ.—ಅದು ಅವರಿಗೆ ಹೋಗುವುದಿಲ್ಲ, ಟೀಚರ್‌ಸ್‌ಗೆ ಹೋಗುತ್ತದೆ.

ಶ್ರೀ ಬಿ. ಬೈರಪ್ಪಾಜಿ.—ಈ ರೀತಿ ಕಡ್ಡಾಯವಾಗಿ ವಸೂಲು ಮಾಡುವುದು ಸರ್ಕಾರದವರಿಗೇ ಆಗಲಿ ಕಮಿಟಿಗೇ ಆಗಲಿ ಸರಿಯಾದ್ದಲ್ಲ ಎಂದು ಹೇಳುತ್ತಾ ಇದ್ದೇನೆ.

Sri S. R. KANTHI.—In North Kanara District according to the number of students the collection ought to be Rs. 1 lakh and odd, but they have hardly collected Rs. 30,000. That is all voluntary.

ಶ್ರೀ ಬಿ. ಬೈರಪ್ಪಾಜಿ.—ಸ್ವಾಮಿ, ಕೆಲವರು ತಾವೇ ಒಪ್ಪಿ ನಗುನಗುತ್ತಾ ಕೊಡುವವರು ಇದ್ದಾರೆ. ಆದರೆ ಈ ದುರ್ಭರ ಪರಿಸ್ಥಿತಿಯಲ್ಲಿ ತಮ್ಮ ಕಣ್ಣೀರನ್ನು ಸುರಿಸುತ್ತಾ ಕೊಡತಕ್ಕವರೂ ಕೂಡ ಮಾತಿನ ಕಟ್ಟಿಗೆ ಬಿದ್ದಾಗಲೀ, ಆಜ್ಞೆಯ ಕಟ್ಟಿಗೆ ಬಿದ್ದಾಗಲೀ ಕೊಡತಕ್ಕ ಸಂದರ್ಭ ಇದೆ. ಆದ್ದರಿಂದ ಸಂತೋಷವಾಗಿ ಕೊಟ್ಟರೆ ತೆಗೆದುಕೊಳ್ಳುವುದು ಉತ್ತಮ. ಆದರಿಂದ ಘನತೆ ಗೌರವ ಕೂಡ ಇರುತ್ತದೆ. ದೇಶದ ಮುಖ್ಯ ಮಂತ್ರಿಗಳ ಹುಟ್ಟು ಹಬ್ಬದ ಸಂದರ್ಭದಲ್ಲಿ ಈ ಸಭೆಯ ಎಲ್ಲ ಸದಸ್ಯರಿಗೂ ಕೂಡ ಒಂದು ವಿಶ್ವಾಸ ಇರುತ್ತದೆ. ಈ ಕಾಗದವನ್ನು ತೋರಿಸಿ ಆಗಲಿ, ಮಾತನಾಡಿಯಾಗಲಿ, ಅವರಿಗೆ ಅಗೌರವ ಸೂಚಿಸುತ್ತಾ ಇದ್ದೇನೆ ಎನ್ನುವ ರೀತಿಯಲ್ಲಿ ತಾವು ತಿಳಿದುಕೊಳ್ಳಬಾರದು. ಅವರಿಗೆ ಅಗೌರವವಾಗದ ರೀತಿಯಲ್ಲಿ ಅವರ ವ್ಯಕ್ತಿತ್ವಕ್ಕೆ ಧಕ್ಕೆಬಾರದ ರೀತಿಯಲ್ಲಿ ದೇಶದ ಹಿತದೃಷ್ಟಿಯನ್ನು ಗಮನಿಸಿ ಜನತೆಯ ಹಿತದೃಷ್ಟಿಯಿಂದ ಈ ರೀತಿ ಮಾಡುವುದು ಸರಿಯಲ್ಲ ಎಂಬುದನ್ನು ಹೇಳುತ್ತಾ ಇದ್ದೇನೆ. ಮಾನ್ಯ ಶಿಕ್ಷಣ ಸಚಿವರು ವಿದ್ಯಾಭ್ಯಾಸದ ಇಲಾಖೆಯನ್ನು ಇನ್ನೂ ಪ್ರಗತಿಪರವಾಗಿ ತರಲು ಮಾಡುವಂತಹ ಖರ್ಚನ್ನು ಅದರಿಂದ ಹೆಚ್ಚಿನ ಪ್ರತಿಫಲ ಬರುವಂತೆ ಮಾಡಬೇಕಾದ್ದು ಅವರ ಕರ್ತವ್ಯ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

Sri G. V. GOWDA.—Mr. Speaker, the Education Minister has placed before us demand for spending 29.75 crores during the course of the next financial year. In my humble opinion there is no justification for the proposed expenditure for the simple reason that all the moneys that have been spent so far have not conferred any benefit, either directly or indirectly, to the people at large. Out of 29 crores nearly one crore is accountable to increased expenditure in the universities. It was stated some time back by the Education Minister that the Bangalore University was not a scheme provided in the Third Plan and it was taken outside the Plan. I wish to invite the attention of the House to the assurance he gave to the House while piloting the Bangalore University Bill. In the Statement of Objects and Reasons to that Bill it was stated that "since it is the intention that this university should be got converted into a federal university and that is the reason why we are establishing the university". He has asked for a few lakhs but what is the actual expenditure spent out of Government funds during 1965-66? It is more than 35 lakhs. Next year he proposes to spend amount more than 60 to 70 lakhs, both for planned schemes and non-planned schemes. That shows this is an additional financial strain which was not warranted. If the Education Minister, as promised to the House had taken steps to get this university converted into federal university, we would have welcomed it. But no attempts are made and no steps have been taken to get this university converted into federal university. As you are aware we are facing a financial crisis and without establishing or functioning of the Bangalore University we could have carried on. Providing drinking water or irrigation facility is much more important today without which nobody could expect the survival of the people. In this background the Education Minister should have seen that the assurances are implemented. I must say that is the reason why we

(SRI G. V. GOWDA)

oppose the demand vehemently. I consider that it is a breach of privilege of the House because the assurance held out to this House has not been implemented. I do not know whether attempts are made to get this university converted into a federal university. By the fact that moneys are provided for the Bangalore University shows that there is no idea of even making an approach to the Central Government to request them to convert this into a federal university.

Coming to the other points, I do not wish to dilate much because almost all of them have been touched by other hon'ble members who have spoken. I shall confine to two or three points. Primary education in rural parts has become very bad. The facilities that are necessary in the rural parts especially are not given. The Minister says that it is the responsibility of the concerned Village Panchayats to see that suitable accommodation is provided for play grounn or any other facility. It is not correct because it is the Government's responsibility as per the Directive Principle of the Constitution to provide primary education. It is the duty of the Government to provide everything. The Government may take the co-operation of other bodies like Village Panchayats or Taluk Boards whose income shows more and more. But there are Taluk Boards and Village Panchayats which cannot provide even the basic needs of the villages. Such being the case how can the Government expect them to provide for play grounds and such other facilities as an incentive to attract students to schools? It is really disappointing. It may be that attendance in urban parts may be good; but what is the incentive that a child gets in rural parts? We say that primary education is the foundation of all education and unless that foundation is laid on a strong basis, there is no use. We are having so many universities and colleges. What is the use? So sufficient attention has not been paid for the expansion of good education so far as primary schools are coneerned. As my other hon'ble friends were observing there is one teacher for five or six classes. It is not possible for one inspector to have supervision in all schools. Such being the case it is undesirable to say that we have given all importance to the primary education. It is absolutely disappointing that the Government or the Department has not taken steps to impart nursery and primary education which is the basic need of the day. It is stated that compulsory education must be given to all children before they attain the age of 14 years. I do not know whether we have complied with that directive. It has become impossible. As we all know in the rural parts most of them are very poor. The poor farmers or villagers will not be in a position to send their children to schools because they would like to send them to watch buffaloes or cows or some such thing and get some income to the family. Therefore unless incentives are created in the rural parts it may be difficult to give good education to the rural children.

There was a question sometime back and the Minister was pleased to say about the selection of graduate teachers to undergo M. A. and

M. Sc. courses. The selection made is highly arbitrary. It has not been based on any basis. The Hon'ble Minister must review the selections made. Graduate teachers taking even 30 per cent of the marks have been selected and persons getting 65 per cent have been rejected. This shows how partiality is shown in the matter of selection.

SRI S. R. KANTHI.—It is done in respect of private aided schools. They are to choose teachers to be sent for training and they give guarantee. It is not like Government where we pool all the teachers and send them. We have in our State far more private schools; we we have to respect the opinion of the institutions. In the matter of selection it cannot be done on marks. I think I have made it clear. It cannot be done because some come from Madras University; some from Bombay University and some from Osmania University and some from Mysore University. So, the marks are not same. and cannot be compared. We take a teacher who his 10 years old and who is 5 years old.

SRI G. V. GOWDA.—There must be some basis for selection. If some principles are adopted, no body bothers. But there are instances where those principles on which selections are made, have not been followed strictly. Let the Hon'ble Minister make a review.

About the private engineering college started with or without permission of the All-India Council on Technical Education, my learned friend Sri Sivappa pointed out yesterday how we have been depriving people in State to have equality before law. As you are aware only persons who have means are likely to be profited by this.

5-00 P. M.

It is the violation of the fundamental right that is guaranteed under the Constitution. There cannot be discrimination on any grounds. This is the state of affairs that is going on. But the Minister for Education say levying capitation fee is bad. Has he taken any action to prevent this? Are all the students capable of paying so mush of capitation fees fixed? Medical Colleges are levying and Engineering Colleges are levying at different rates. Some Colleges demand Rs. 10,000 and who can afford it? It is only rich class can afford it. Does it mean the poor is denied of education just because he is unable to pay so much of money? The Government is responsible for all such things. The Government is allowing 65 per cent of seats in this way. It is not a violation of rights that are guaranteed? The Minister must make up his mind to nationalise all these Colleges at whatever cost. Even in respect of 11th standard in the rural areas, the treatment given is very bad. There is no better equipment and even teachers are not qualified. There is no library. We are having a very big ambition that we should give all educational facilities to rural parts. There is a circular issued by the Government saying that all the teachers must be made to come under the Triple Benefit Scheme. But this scheme is

(SRI G. V. GOWDA)

made political in all the schools. It is said that it is extended to all but actually all teachers have not come under the scheme. The grant-in-aid is also not being sanctioned regularly to Training Institutions and other Institutions. There should be uniformity in sanctioning grant-in-aid and it should be attended to early. I would suggest that the retirement age must be increased because we know that there is difficulty in providing trained teachers to all Institutions. If the retirement age is increased, the old trained people could be continned for some time. There is another thing which I want to bring to the notice of the Hon'ble House is that 9 months training period is absurd. This period must be increased. In private Schools teachers are allowed to work up to 60 years but in the Government Schools the teachers are retiring at 55. There should be no discrimination because the profession is the same. Therefore, I urge the Government to increase the age of retirement up to 58 years. In the matter of pension, it is causing anxiety. So for as pension is concerned, I quote one instance. In Kollegal there are 5 to 6 cases pending sanction. Their pensions have not been sanctioned. This is wrong and I request the Government to pay immediate attention and see these pension cases are sanctioned very early because they are pending from a long time.

There are so many orphanages in the State. So far as the amount that are being spent on these orphanages, we must review the entire thing. In so many orphanages, the real orphans are not being admitted. We are spending Rs. 18 lakhs for these Orphanages in the Mysore State. Some Institutions are misusing the amount allotted to them. If the Government want to do some justice to the real orphans they must, through an agency, invite applications and select the real orphans and ask the Orphanages to feed them. If you want to see that real orphans are benefited, it is through the Government Agency and through the Departmental supervision.

† ಶ್ರೀ ಎ. ಎಂ. ದೇವ್ (ಗುಬ್ಬಿ).—ಮಾನ್ಯ ಅಧ್ಯಕ್ಷರೇ, ಈ ವಿದ್ಯಾ ಇಲಾಖೆಯಲ್ಲಿ ಪರಿಸ್ಥಿತಿ ಒಂದು ನಿರ್ದಿಷ್ಟವಾದ ಘಟ್ಟ ಮುಟ್ಟಿದೆ. ಶುಲ್ಕ ಜಾಸ್ತಿ ಮಾಡಬಾರದು ಎಂದು ವಿದ್ಯಾರ್ಥಿಗಳು ಹೋರಾಟ ಮಾಡಿದರು. ವಿದ್ಯಾರ್ಥಿಗಳ ಬೇಡಿಕೆ ಮನ್ನಿಸಬೇಕು. ನನ್ನ ವಿಚಾರ ಏನು ಅಂದರೆ, ತಾವು 18 ವರ್ಷ ರಾಜ್ಯಭಾರ ಮಾಡಿದ್ದೀರಿ, ತಕ್ಕ ಪಾಲಿಸುತ್ತೀರಿ ಆದುದರಿಂದ ಹುಡುಗರು ಎಷ್ಟು ಕೇಳಿದ್ದಾರೋ ಅಷ್ಟನ್ನು ಕೊಡಬೇಕು. ಎಸ್. ಎಸ್. ಎಲ್. ಸಿ. ವರೆಗೆ ಶುಲ್ಕ ವಸೂಲ್ಮಾಡು ವುದಿಲ್ಲ. ಅದು ತಿರುಗು ಮುರುಗು ಆಗಿದೆ. ಪಿ ಯು.ಸಿ.ಯಲ್ಲಿ ಸೀ.ಬಿ.ಜಡ್. ಮತ್ತು ಪೀ.ಸಿ.ಬಿ. ತೆಗೆದುಕೊಂಡು ಮೆಡಿಕಲ್ ಕೋರ್ಸಿಗೆ ಹೋಗುವುದಕ್ಕೆ ಅವಕಾಶ ಇಲ್ಲದ ಹಾಗೆ ಆಗಿದೆ. ಅವರು ಡಿಗ್ರೀ ಕೋರ್ಸಿಗೆ ಹೋದರೂ ಕೂಡ ಒಂದು ಹ್ಯಾಂಡೀಕ್ಯಾಪ್ ಇದೆ. ಜೊತೆಗೆ ರಿಸರ್ಚ್ ಕೋರ್ಸಿಗೆ ಹೋಗುವುದಕ್ಕೆ ಕೂಡ ಒಂದು ದೊಡ್ಡ ಹ್ಯಾಂಡಿಕ್ಯಾಪ್ ಇರುತ್ತದೆ. ಬಾಟನೀ ಮತ್ತು ಜೂ ಆಲಜಿ ಈ ಎರಡು ವಿಷಯಗಳು ಸೀ.ಬಿ.ಜಡ್.ನಲ್ಲಿ ಅರ್ಧ ಪೋರ್ಶನ್ ಬರುತ್ತದೆ. ಆದುದರಿಂದ ಸೀಟ್ಸ್ ಕೊಡುವಾಗ್ಗೆ ಸರಿಯಾಗಿ ಪಿ.ಸಿ.ಬಿ. ವಿದ್ಯಾರ್ಥಿಗಳಿಗೆ ಎಲ್ಲರಿಗೂ ಮೆಡಿಕಲ್ ಕೋರ್ಸಿಗೆ ಹೋಗುವುದಕ್ಕೆ ಅವಕಾಶ ಕೊಡಬೇಕು. ಸೆಗಂಡ್ ಪ್ರಿಫರೆನ್ಸ್ ಸೀ.ಬಿ.ಜಡ್. ಅವರಿಗೆ ಇರುತ್ತದೆ. ಇಂದರೇ ಯಾವದೇ ಕಾರಣದಿಂದ ಅವರು ಮೆಡಿಕಲ್ ಕೋರ್ಸಿಗೆ ಹೋಗುವುದು ಆಗದೇ ಇದ್ದರೆ ಸ್ಪೆಶಲಾಯಜೇಶನ್ ಮಾಡುವುದಕ್ಕೆ ಡಿಗ್ರೀ ಕೋರ್ಸಿಗೆ ಹೋಗಬಹುದು. ಎರ ಡನ್ನೂ ಇಕ್ವೇಟ್ ಮಾಡಿದರೆ ಸೀ.ಬಿ.ಜಡ್.ದವರು ಮುಂದಾಗಿ ಪಿ.ಸಿ.ಬಿ. ಸ್ಟೂಡಂಟ್ಸ್ ಇನ್ ಬಾಟನಿ ಅಂಡ್ ಜೂ ಆಲಜಿ ವಿದ್ಯಾರ್ಥಿಗಳ ಕರೀಯರ್ ಹಾಳು ಮಾಡಿದ ಹಾಗೆ ಆಗುತ್ತದೆ.

ದಿಲ್ಲಿ ಯೂನಿವರ್ಸಿಟಿಯಲ್ಲಿ ಒಂದು ಒಳ್ಳೇ ವ್ಯವಸ್ಥೆ ಇದೆ ಎಂದು ಕೇಳಿದ್ದೇನೆ. ಅಲ್ಲಿ ಪೀ.ಸಿ.ಬಿ.ಡ್. ಎಂದು ಮಾಡಿದ್ದಾರೆ. ಇದರಿಂದ ಏನಾಗುತ್ತದೆ ಅಂದರೆ ಅವರು ಯಾವ ಕೋರ್ಸಿಗಾದರೂ ಹೋಗಬಹುದು. ಮೆಡಿಕಲ್ ಕೋರ್ಸಿಗೆ ಹೋಗದೇ ಇದ್ದರೆ ಎಂಜಿನಿಯರಿಂಗ್ ಕೋರ್ಸಿಗೆ ಅವರು ಹೋಗಬಹುದು. ಒಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಅನ್ಯಾಯವಾಗಬಾರದು. ಆದುದರಿಂದ ಪಿ.ಯೂ.ಸಿ. ಕ್ಲಾಸಿಗೆ ಬಂದಾಗ್ಗೆ ಒಂದು ನಿರ್ದಿಷ್ಟವಾದ ಗಟ್ಟಕ್ಕೆ ಬಂದಿರುತ್ತಾರೆ. ಅವರ ಫ್ಯೂಚರ್ ಕರೀಯರ್ ಹಾಳು ಮಾಡಬಾರದು. ವಿಜ್ಞಾನ ವಿಷಯ ತೆಗೆದುಕೊಳ್ಳುವ ವಿದ್ಯಾರ್ಥಿಗಳು ದೇಶಕ್ಕೆ ಕಾಂಟ್ರಿಬ್ಯೂಟ್ ಮಾಡಬಹುದು. ಬುದ್ಧಿವಂತರಾದ ವಿದ್ಯಾರ್ಥಿಗಳು ಆ ವಿಷಯ ತೆಗೆದುಕೊಳ್ಳುತ್ತಾರೆ. ಒಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಅನ್ಯಾಯವಾಗದ ಹಾಗೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ನಡೆಸಬೇಕಾದರೆ ವಿದ್ಯಾವಂತರಾದ ಲೇಬರ್ ಫೋರ್ಸ್ ಒದಗಿಸಿ ಸಹಾಯ ಮಾಡಬೇಕಾಗುತ್ತದೆ. ಇಂಥ ಜನರನ್ನು ಯೂನಿವರ್ಸಿಟಿ ತಯಾರು ಮಾಡುತ್ತದೆ. ದೊಡ್ಡ ಕೈಗಾರಿಕೆಗಳಿಗೆ ಮ್ಯಾನ್ ಪವರ್ ಬೇಕಾಗುತ್ತದೆ. ಕಂದಾಯ ದಿಂದ ಸರಕಾರಕ್ಕೆ ಬರುವ 30 ಕೋಟಿ ರೂಪಾಯಿ ಹಣವನ್ನು ಇಂದು ವಿದ್ಯಾ ಇಲಾಖೆಗೆ ಖರ್ಚು ಮಾಡುತ್ತೀರಿ. ಇವತ್ತು ಇಂಡಸ್ಟ್ರೀಸ್ ನಡೆಸುವುದು ಕಷ್ಟವಾಗಿದೆ. ಯಾಕೆಂದರೆ, ಸರಿಯಾದ ಮ್ಯಾನ್ ಪಾವರ್ ಇಲ್ಲ. ಆದುದರಿಂದ ಇವರ ಸಾಧನೆಯಿಂದ ಬೆನಿಫಿಟ್ ತೆಗೆದುಕೊಳ್ಳುವ ಹಾಗೆ ಮೊದಲು ಮಾಡಬೇಕು ಎಂದು ನನಗೆ ಅನಿಸುತ್ತದೆ. ಇದನ್ನು ಸರಕಾರ ಯೋಚನೆ ಮಾಡಬೇಕು. ಇನ್ನು ಮುಂದೆ ಯಾವ ತರಹದ ಇಂಡಸ್ಟ್ರೀಸ್ ದೇಶದಲ್ಲಿ ಬೆಳೆಯುತ್ತಿವೆ ಎಂಬುದನ್ನು ನೋಡಬೇಕು. ವಿದ್ಯಾವಂತರನ್ನು ಸರಕಾರ ಎಂಪ್ಲಾಯ್ ಮಾಡಿದೆಯೇ ಎಂಬುದನ್ನು ನೋಡಬೇಕು ಎಂದು ಕೇಳಿಕೊಳ್ಳುತ್ತೇನೆ. ಈಗ ನಮ್ಮ ದೇಶದಲ್ಲಿ ಬಡವರ ಮತ್ತು ಶ್ರೀಮಂತರ ನಡುವೆ ಹೆಚ್ಚು ಅಂತರ ಇರುವುದರಿಂದ 37 ಕೋಟಿ ರೂಪಾಯಿಗಳನ್ನು ಈ ಜನರರ್ ಬಡ್ಜೆಟ್‌ನಲ್ಲಿ ಕೊಡುವುದು ಸರಿಯಲ್ಲ. ಏಕೆಂದರೆ ಒಂದು ಸಾರಿ ದಿವಂಗತ ಜವಹರ್‌ಲಾಲ್ ನೆಹರೂ ಅವರು ಡಿಫೆನ್ಸ್ ಫಂಡಿಗೆ ಜುಲುಮೆಯಿಂದ ಹಣವನ್ನು ತೆಗೆದುಕೊಂಡರೆ ಅದನ್ನು ಸಮುದ್ರಕ್ಕೆ ಎಸೆಯಿರಿ ಎಂದು ಹೇಳಿದ್ದರು. ನಾನು ಹೇಳುವುದು ಇಷ್ಟೇ, ಈ ಬಾಬಿಗೆ ಬೇಕಾಗುವ ಹಣವನ್ನು ಹೆಚ್ಚಿನ ರೂಪದಲ್ಲಿ ಕೈಗಾರಿಕೆ ನಡೆಸುವವರಿಂದ ವಸೂಲು ಮಾಡಬೇಕು. ಏಕೆಂದರೆ ನೀವು ವಿದ್ಯಾರ್ಥಿಗಳನ್ನು ವಿದ್ಯಾವಂತರನ್ನಾಗಿ ಮಾಡಿ ಕೈಗಾರಿಕೆಗಳಿಗೆ ಕೊಡುತ್ತೀರಿ. ಇಲ್ಲದಿದ್ದರೆ ಸಮಾಜಕ್ಕೆ ನ್ಯಾಯ ದೊರಕಿಸಿಕೊಟ್ಟಂತೆ ಆಗುವುದಿಲ್ಲ. ಈ ದೃಷ್ಟಿಯಿಂದ ಒಂದು ಲೆಜಿಸ್‌ಲೇಷನ್ ಎನ್‌ಆಕ್ಟ್‌ಮೆಂಟ್ ತಂದು ಕಾರ್ಯಗತಗೊಳಿಸುವುದಕ್ಕೆ ಪ್ರಯತ್ನ ಮಾಡಬೇಕು. ಇಷ್ಟು ಮಾತನಾಡುವುದಕ್ಕೆ ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ—ಅಧ್ಯಕ್ಷರೇ, ಈ 5 ವರ್ಷದಲ್ಲಿ 4 ವರ್ಷ ಕಳೆದು ಕೊನೆಯ ವರ್ಷದಲ್ಲಿದ್ದೇವೆ. ಈ 4 ವರ್ಷದಲ್ಲಿ ವಿದ್ಯಾ ಖಾತೆಯಲ್ಲಿ ಎದ್ದಿರುವ ಗೊಂದಲವನ್ನು ಸರಿ ಮಾಡುವುದಕ್ಕೆ ಇವರ ಕೈಯಲ್ಲಿ ಸಾಧ್ಯವಾಗಲಿಲ್ಲ ಎಂದು ಹೇಳುತ್ತೇನೆ. ಕೊನೆಯ ವರ್ಷದಲ್ಲಿ ಇನ್ನೂ ಹೆಚ್ಚಿನ ಬಿರುಗಾಳಿ ಎದ್ದಿದೆ. 30 ಕೋಟಿ ರೂಪಾಯಿಗಳನ್ನು ಇವರು ತಮಗೆ ಬೇಕಾದ ಹಾಗೆ ಖರ್ಚುಮಾಡಿಕೊಳ್ಳಬಹುದು ಏಕೆಂದರೆ ಮುಂದಿನ ವರ್ಷ ಎಲೆಕ್ಷನ್ ಬರುತ್ತದೆ. ನಂತರ ವಿದ್ಯಾಮಂತ್ರಿಯಾಗುತ್ತೇನೋ ಇಲ್ಲವೋ ಎಂದು ತಿಳಿದು ಕೊಂಡು ಹೇಗೆ ಬೇಕಾದರೂ ಹಣವನ್ನು ಖರ್ಚುಮಾಡಬಹುದು. 14 ಜನ ಮಂತ್ರಿಗಳು ಸಭೆಯಲ್ಲಿ ಸದಸ್ಯರು ಹೇಳುವುದನ್ನು ಕೇಳಿ ಅದಕ್ಕೆ ಸರಿಯಾದ ಮನ್ನಣೆ ಕೊಡುತ್ತಾರೆ. ಆದರೆ ಸಭೆಗೆ ಮನ್ನಣೆ ಕೊಡಬೇಕು ಎನ್ನುವುದು ಇವರಲ್ಲಿ ಮಾತ್ರ ಇಲ್ಲ. 15 ಜನ ಮಂತ್ರಿಗಳಲ್ಲಿ ಸದಸ್ಯರು ಹೇಳುವುದನ್ನು ಕೇಳಿ ಕೊಂಚಕಾಲ ಯೋಚನೆ ಮಾಡಿ, ಅವರು ಹೇಳುವುದರದಲ್ಲಿ ಅರ್ಥವಿದೆ, ಅದಕ್ಕೆ ಸರಿಯಾದ ಕಾರಣ ಕೊಡಬೇಕು ಎನ್ನುವುದರಲ್ಲಿ 14 ಜನ ಮಾತ್ರ. ಆದರೆ ಇವರದ್ದು ಮಾತ್ರ ಬೇರೆ ಹಾದಿ. ಇವರು ಹೇಳುವುದು ನನ್ನ ಕುದುರೆಗೆ 3 ಕಾಲು, ನನ್ನ ಕುದುರೆಯೇ ಹೆಚ್ಚು ಮುಂದಕ್ಕೆ ಹೋಗುತ್ತದೆ. ನಾನು ಹೇಳಿದ್ದೇ ನಡೆಯಬೇಕು ಎನ್ನುವ ಒಂದು ಹಠವಾದಿತನ, ಒಂದು ರೀತಿಯ ಮೊಂಡತನ ಈ ವಿದ್ಯಾ ಮಂತ್ರಿಗಳಲ್ಲಿ ಇದೆ. ನಾನು ವಿದ್ಯಾಕ್ಷೇತ್ರದಲ್ಲಿ ಎಷ್ಟೋ ಸೇವೆ ಸಲ್ಲಿಸುವುದಕ್ಕೆ ಇವರಿಗೆ ಅವಕಾಶವಿದೆ ಎಂದು ತಿಳಿದುಕೊಂಡಿದ್ದೆ. ಆದರೆ ಇವರ ಕಾಲದಲ್ಲಿ ಯಾವ ವಿಧವಾದ ವಿದ್ಯಾಪ್ರಗತಿಯೂ ಆಗಿಲ್ಲ. ಇವತ್ತು ಈ ವಿದ್ಯಾಕ್ಷೇತ್ರಕ್ಕೆ 30 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ. ಅಂದರೆ, ದೇಶದ ಆದಾಯದಲ್ಲಿ ಶೇಕಡ 30 ಭಾಗವನ್ನು ಇದಕ್ಕೆ ಕೊಡುತ್ತೇವೆ. ಏಕೆಂದರೆ ದೇಶದ ಮಕ್ಕಳು ವಿದ್ಯಾವಂತರಾಗಲಿ, ದೇಶದ ಕಲ್ಯಾಣವಾಗಲಿ ಎಂದು. ಇವತ್ತಿನದಿವಸ ಬೇರೆ ರಾಜ್ಯಗಳಲ್ಲಿ ಆಗಿರುವ ವಿದ್ಯಾಪ್ರಗತಿ ನಮ್ಮ ರಾಜ್ಯದಲ್ಲಿ ಆಗಿದ್ದರೆ ಒಂದು ಟೀಕಾರ ಶಬ್ದವನ್ನೂ ವಿದ್ಯಾಮಂತ್ರಿಗಳ ಬಗ್ಗೆ ಹೇಳುತ್ತಿರಲಿಲ್ಲ.

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಈ 5 ವರ್ಷಗಳ ಕಾಲದಲ್ಲಿ ಈ ಶಿಕ್ಷಣ ಶಾಖೆಯುಲ್ಲಿ ಆಗಿರುವ ಒಂದು ಗೊಂದಲ ಮತ್ತೆಲ್ಲಿಯೂ ಆಗಿಲ್ಲವೆಂದು ಹೇಳುತ್ತೇನೆ. ಶ್ರೀಮಾನ್ ಗೋಪಾಲಗೌಡರು ಹೇಳಿದಹಾಗೆ ಈ ವಿದ್ಯಾಕ್ಷೇತ್ರ ಗೊಂದಲದ ತೌರುಮನೆಯಾಗಿದೆ.

ವಿಶ್ವವಿದ್ಯಾನಿಲಯಗಳ ಖರ್ಚಿಗಾಗಿ :

1964-65 ರಲ್ಲಿ	...	1,75,42,737	ರೂಪಾಯಿಗಳು.
1965-66 ರಲ್ಲಿ	...	2,10,83,400	ರೂಪಾಯಿಗಳು.
1965-66 ರಲ್ಲಿ (ರಿವೈಸ್ಡ್ ಎಸ್ಟಿಮೇಟ್)	...	2,04,33,200	ರೂಪಾಯಿಗಳು.
1966-67 ರಲ್ಲಿ	...	2,12,84,700	ರೂಪಾಯಿಗಳು.

ಕೊಟ್ಟಿರುವುದು. ಈ ವರ್ಷದಲ್ಲಿ ಇಷ್ಟೊಂದು ಹಣ ಏತಕ್ಕೆ ಎಂದು ಕೇಳಿದರೆ 3 ವಿಶ್ವವಿದ್ಯಾನಿಲಯುಗಳು ಆಗಿವೆಯೆಂದು ಹೇಳುತ್ತಾರೆ. 3 ವಿಶ್ವವಿದ್ಯಾನಿಲಯಗಳು ಆದವೇ ಹೊರತು, ಕಾಲೇಜುಗಳು ಏನೂ ಜಾಸ್ತಿಯಾಗಿಲ್ಲ. ಒಂದೆರಡು ಜಾಸ್ತಿಯಾಗಿರಬಹುದು. ಈ ವಿಶ್ವವಿದ್ಯಾನಿಲಯಗಳಿಗೆ ಸೇರಿರುವ ಕಾಲೇಜುಗಳಲ್ಲಿ ಇವತ್ತಿನ ವಿದ್ಯಾಭ್ಯಾಸದ ಮಟ್ಟದಲ್ಲಿ ಕ್ವಾಲಿಟಿಯೇನಾದರೂ ಜಾಸ್ತಿಯಾಗಿದೆಯೇ ಎಂದರೆ ಕ್ವಾನ್‌ಟಿಟಿ ಜಾಸ್ತಿಯಾಗಿದೆ. ಗುಣಗಳು ಕಮ್ಮಿಯಾಗಿ ಅವಗುಣಗಳು ಜಾಸ್ತಿಯಾಗಿದೆ. ಮೊದಲಿನ ಗುಣಗಳು ಆಕಾಶಕ್ಕೆ ಹಾರಿಹೋಗಿವೆ. ಈಗ ಎರಡೂಕಾಲು ಕೋಟಿ ರೂಪಾಯಿಗಳನ್ನು ಇವರು ಮನಬಂದಂತೆ, ಸ್ವೇಚ್ಛೆಯಾಗಿ ಖರ್ಚು ಮಾಡುವುದಕ್ಕೆ ಈ ಸಭೆ ಅನುಮತಿ ಕೊಡಲು ತಯಾರಾಗಿಲ್ಲ ಇನ್ನು ಉಳಿದಿರುವ 11 ತಿಂಗಳು ಈ ವಿದ್ಯಾಖಾತೆ ಇವರ ಕೈಯಲ್ಲಿ ಇರುವುದು ಬೇಡ, ಬೇರೆಯವರಿಗೆ ವಹಿಸುವುದು ಒಳ್ಳೆಯದು ; ಎಂದು ಹೇಳುತ್ತೇನೆ. ಜಾಯಿಂಟ್ ರೆಸ್‌ಫಾನ್ಸಿಬಿಲಿಟಿ ಎಂದು ಹೇಳುತ್ತಾರೆ, ಕೆಲಸ ಮಾತ್ರ ಸರಿಯಾಗಿ ನಡೆಯುವುದಿಲ್ಲ, ಕೆಲವು ತಿಂಗಳ ಹಿಂದೆ ಮುಖ್ಯಮಂತ್ರಿಗಳು 4 ಖಾತೆಗಳನ್ನು ಬದಲಾವಣೆ ಮಾಡಿದರು. (1) ಪೋಲೀಸ್ ಖಾತೆ, (2) ಲಾ ಖಾತೆ, (3) ಹಣ ಕಾಸಿನ ಖಾತೆ, (4) ಕಮ್ಯುನಿಟಿ ಡೆವಲಪ್‌ಮೆಂಟ್ ಅಂಡ್ ಕೋ-ಆಪರೇಷನ್. ಯಾರು ಸರಿಯಾಗಿ ಅವರವರ ಖಾತೆಗಳನ್ನು ನಡೆಸಿಕೊಂಡು ಹೋಗುತ್ತಿದ್ದರೋ, ಅಂತಹವರ ಖಾತೆಗಳನ್ನು ಬದಲಾವಣೆ ಮಾಡಿದರು, ಯಾರು ರಾಜ್ಯದಲ್ಲಿ 5 ವರ್ಷಗಳಿಂದ ಒಂದೇ ಸಮ ಗೊಂದಲ ಎಬ್ಬಿಸಿದರೋ, ಯಾರು ವಿದ್ಯಾ ಕ್ಷೇತ್ರ ನಿರ್ನಾಮವಾಗಲು ದುಡಿದರೋ ಅಂಥವರ ಖಾತೆಯನ್ನು ಬದಲಾವಣೆ ಮಾಡಿಲ್ಲ. ಈ ವಿದ್ಯಾಮಂತ್ರಿಗಳು ಕಟ್ಟುಪಾಡಿಗೆ ಬದ್ಧ ಕೆಲಸ ಮಾಡುತ್ತಿದ್ದಾರೆಯೇ ! ನೆನ್ನೆ ತಾನೆ ಮುಖ್ಯಮಂತ್ರಿಗಳು ನಿಮ್ಮ ಹೆಸರಿನಲ್ಲಿ 4 ಲಕ್ಷ ರೂಪಾಯಿಗಳನ್ನು ವಸೂಲು ಮಾಡುತ್ತಿದ್ದೀರಂತೆ ಎಂದು ಇವರನ್ನು ಕೇಳಿದಾಗ, ಇವರು ಅವರ ಬಾಯಿ ಮುಚ್ಚಿಸಿಬಿಟ್ಟರು. ನೀವು ಸುಮ್ಮನೆ ಇರಿ ಎಂದು. ಎಷ್ಟೇ ಆಗಲಿ ಅವರ ಕಲೀಗ್ ಅಲ್ಲದೆ ಇವರು ಭರತ, ಅವರು ರಾಮ. ದೇಶದ ಅಭಿವೃದ್ಧಿ ಕೆಲಸಗಳನ್ನು ಸರಿಯಾಗಿ ಇವರು ಮಾಡುವುದಾದರೆ ವಿದ್ಯಾ ಕ್ಷೇತ್ರವನ್ನು ಸರಿಯಾದ ರೀತಿಯಲ್ಲಿ ಮುಂದುವರೆಸಿದ್ದರೆ ನಿಜವಾಗಿ ನಾವು ತಲೆಬಾಗಬಹುದು. ಎರಡೂಕಾಲು ಕೋಟಿ ರೂಪಾಯಿಗಳನ್ನು ಈ ವಿಶ್ವವಿದ್ಯಾನಿಲಯಕ್ಕಾಗಿ ಕೊಡುವುದು ಸರಿಯಲ್ಲ. ಆಟಾನಮಿ ಇದೆ ಎಂದು ಇವರು ಹೇಳುತ್ತಾರೆ, ಆದರೆ ಅದನ್ನು ಇವರಿಂದು ಕಿತ್ತುಕೊಂಡಿದ್ದಾರೆ. ಯಾರಿಗಾದರೂ ಇನ್‌ಕ್ರಿಮೆಂಟ್, ಪ್ರಮೋಷನ್, ಸೆಲೆಕ್ಷನ್ ಪೋಸ್ಟ್ ಕೊಡಬೇಕಾದರೆ, ಅಂಥ ದಿನ ಟೆಲಿಫೋನ್ ಮಾಡುತ್ತಾರೆ. ಇಂಥವರನ್ನೇ ತೆಗೆದುಕೊಳ್ಳಿ ಎಂದು ಹೇಳುತ್ತಾರೆ. ಈ ಪ್ರೈಮರೀ ಸ್ಕೂಲು ಮತ್ತು ಮಿಡಲ್ ಸ್ಕೂಲುಗಳನ್ನು ಸೇರಿಸಿ ಅಪ್‌ಗ್ರೇಡೆಡ್ ಎಂದು ಮಾಡಿ ವಿದ್ಯಾಭ್ಯಾಸದ ಮಟ್ಟವನ್ನು ಕಡಿಮೆ ಮಾಡಿದ್ದಾರೆ. ಶ್ರೀಮಾನ್ ಅಂದಾನಯ್ಯನವರು ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ಹೊರಗಿನಿಂದ ವೈಸ್‌ಚಾನ್ಸ್‌ಲರನ್ನು ತರುವುದು ಬೇಡ ಎಂದು ಹೇಳಿದರು. ಎಲ್ಲರ ಒಪ್ಪಿಗೆ ತೆಗೆದುಕೊಂಡು ಈ ರಾಜ್ಯದವರನ್ನೇ ತರುವುದು ಒಳ್ಳೆಯದೆಂದು ಹೇಳುತ್ತೇನೆ. ಈಗಾಗಲೇ 2 ವಿಶ್ವವಿದ್ಯಾನಿಲಯಗಳಲ್ಲಿ ನಮ್ಮವರೇ ಇದ್ದಾರೆ. ಕೃಷಿ ವಿಶ್ವವಿದ್ಯಾನಿಲಯದಲ್ಲಿ ನಮ್ಮವರೇ ಇದ್ದಾರೆ, ಅವರು ಬಹಳ ಮೇಧಾವಿಗಳು. ಬಹಳ ತಿಳಿದಂತಹವರು, ಅವರು ನಮ್ಮ ರಾಜ್ಯದವರು. ಕರ್ನಾಟಕ ವಿಶ್ವವಿದ್ಯಾನಿಲಯದಲ್ಲಿ ಶ್ರೀಮಾನ್ ಪಾವಟೆಯವರು ಇದ್ದಾರೆ, ಅವರು ಸಹ ನಮ್ಮ ರಾಜ್ಯದವರೇ ಆಗಿದ್ದಾರೆ. ಈ 2ನ್ನು ಬಿಟ್ಟರೆ ಉಳಿದ ಎರಡು ವಿಶ್ವವಿದ್ಯಾನಿಲಯದಲ್ಲಿ ಹೊರಗಿನವರೇ ಇದ್ದಾರೆ. ಬೆಂಗಳೂರು ವಿಶ್ವವಿದ್ಯಾನಿಲಯದಲ್ಲಿ ಡಾಕ್ಟರ್ ಲಾರೋಯ ಇದ್ದರು, ಅವರ ವಿಷಯದಲ್ಲಿ ನಾನು ಏನನ್ನೂ ಹೇಳುವುದಿಲ್ಲ. ಅವರ ಜಾಗಕ್ಕೆ ಹೊರಗಡೆಯಿಂದ ತರುವುದಕ್ಕೆ, ಆಮದು ಮಾಡಿ

ಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ನಮ್ಮ ರಾಜ್ಯದಲ್ಲಿಯೇ ಇರುವ ಯಾರನ್ನಾದರೂ ವೈಸ್‌ಚಾನ್ಸಲರನ್ನಾಗಿ ನೇಮಕ ಮಾಡುವುದಕ್ಕಾಗುವುದಿಲ್ಲವೇ?

Sri S. R. KANTHI.—The point is: we are not free to do anything as we like, because there is a procedure. There will be a three-man committee and that three-man committee will give a panel of three names to the Government. Therefore, we are not free.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಾನು ಈರ್ಷ್ಯೆ ಆಗುತ್ತಿಲ್ಲ.

ಶ್ರೀ ಎಸ್. ಆರ್. ಕಂಠಿ.—ಶ್ರೀ ಸಿ. ಡಿ. ದೇಶಮುಖ್‌ರವರನ್ನು ತೆಗೆದುಕೊಂಡಿಲ್ಲವೇ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಶ್ರೀ ಸಿ. ಡಿ. ದೇಶಮುಖ್ ಅವರೇ ಅಲ್ಲ, ಲೇಟ್ ರಾವ್ ಬಹದ್ದೂರ್ ಶಾಸ್ತ್ರಿಗಳನ್ನು ಬೇಕಾದರೆ ನೀವು ಅಲ್ಲಾಡಿಸಬಹುದು. ನಿಮಗೆ ಬೇಕಾದರೆ ದೊಡ್ಡ ದೊಡ್ಡ ತಿಮಿಂಗಿಲಗಳನ್ನು ನುಂಗುಬಿಡುತ್ತೀರಿ. ತಮಗೆ ಸಮಾಧಾನವಿರಬೇಕು. ನಾನು ಮಾತನಾಡುವಾಗ ನೀವು ಸುಮ್ಮನೆ ಕುಳಿತುಕೊಳ್ಳಬೇಕು. ನಿಮ್ಮಲ್ಲಿ ತಪ್ಪು ಇದ್ದರೆ ಒಪ್ಪಿಕೊಳ್ಳಿ. ನಾನು ಹೇಳುವುದು ಸ್ವಲ್ಪ ಕಹಿಯಾಗಿರಬಹುದು. ಆದರೂ ಸಹ ನೀವು ಸಮಾಧಾನದಿಂದ ಇರಬೇಕು. ಸ್ವಾಮಿ, ಉಪಕುಲಪತಿಗಳನ್ನು ಹೊರಗಡೆಯಿಂದ ತರತಕ್ಕದ್ದನ್ನು ನಾನು ತೀವ್ರವಾಗಿ ವಿರೋಧ ಮಾಡುತ್ತೇನೆ. ನನ್ನ ಕಾಲದಲ್ಲಿ ಫ್ರೀ ಸೆಕೆಂಡರಿ ಎಜುಕೇಷನ್ ಕೊಡುವಷ್ಟುಮಟ್ಟಿಗೆ ಮಾಡಿದ್ದೇವೆ ಎಂದು ಹೇಳಿ ಹಳ್ಳಿ ಹಳ್ಳಿಗಳಲ್ಲಿ ಮೂಲೆ ಮೂಲೆಯಲ್ಲಿ ಪ್ರೈವೇಟ್ ಹೈಸ್ಕೂಲ್ ಪ್ರಾರಂಭ ಮಾಡಿದ್ದಾರೆ. ಅಲ್ಲಿ ಮಾಸ್ಟರ್ ಇಲ್ಲ, ಲ್ಯಾಬರೇಟರಿ ಇಲ್ಲ, ಬಿಲ್ಡಿಂಗ್ ಇಲ್ಲ, ಎಕ್ವಿಪ್‌ಮೆಂಟ್ ಇಲ್ಲ. ಈಗ ಪ್ರಾರಂಭ ಮಾಡಿದ ಶಾಲೆಗಳಿಗೆ ಹಣ ಬೇರೆ ಕೊಡುವುದಿಲ್ಲ ಎಂದು ಹೇಳಿದರು. ಇಂತಹ ಹೈಸ್ಕೂಲುಗಳಲ್ಲಿ ಮಕ್ಕಳಿಗೆ ಸರಿಯಾದ ವಿದ್ಯಾಭ್ಯಾಸ ಕೊಡಲು ಹೇಗೆ ಸಾಧ್ಯವಾಗುತ್ತದೆ? ಅಲ್ಲಿ ಇಂಗ್ಲೀಷ್ ಸೈನ್ಸ್ ಯಾವುದೇ ಪಾಠವನ್ನು ಕಲಿತು ಉತ್ತೀರ್ಣರಾಗುವುದಕ್ಕೆ ಅವಕಾಶ ಇಲ್ಲ. ನನ್ನ ತಾಲ್ಲೂಕಿನಲ್ಲಿ 6-7 ಸ್ಕೂಲ್ ಪ್ರಾರಂಭ ಆಗಿವೆ. ಅಲ್ಲಿ ಯಾರಾದರೂ ಒಂದು ಮಗು ಫಸ್ಟ್ ಕ್ಲಾಸ್ ಮಾರ್ಕ್ಸ್ ತೆಗೆದುಕೊಂಡು ಪಾಸ್ ಆದರೆ ಶ್ರೀಮಾನ್ ಕಂಠಿಯವರ ವಿಷಯದಲ್ಲಿ ನಾನು ಏನು ಮಾತನಾಡಿದ್ದೇನೋ ಅದನ್ನು ವಾಪಸ್ಸು ತೆಗೆದುಕೊಳ್ಳುತ್ತೇನೆ. ಎಲ್ಲರೂ ಬಂದು ಪೊಲಿಟಿಕಲ್ ಪ್ರೆಷರ್ ಮತ್ತು ಇನ್‌ಫ್ಲೂಯನ್ಸ್ ಉಪಯೋಗಿಸಿದರು, ಹೈಸ್ಕೂಲು ಕೊಟ್ಟಿರಿ. ಆ ಸ್ಕೂಲುಗಳಿಗೆ ಮಾಸ್ಟರ್ ಇಲ್ಲ, ಬಿಲ್ಡಿಂಗ್ ಇಲ್ಲ, ಅಪರೇಟಸ್ ಇಲ್ಲ! ಚೀಪ್ ಪಾಪ್ಯುಲಾರಿಟಿಗೋಸ್ಕರ ರಾಜ್ಯದ $4\frac{1}{4}$ ಕೋಟಿ ರೂಪಾಯಿ ಹಣ ವೆಚ್ಚಮಾಡಿ ಸೆಕೆಂಡರಿ ಎಜುಕೇಷನ್ ಸಮಾಧಿ ಮಾಡಿದ್ದೀರಿ. ಶ್ರೀ ಕಂಠಿಯವರು ಸತ್ತರೂ ಇದ್ದರೂ ಆ ಅಪವಾದವನ್ನು ಹೊತ್ತುಕೊಂಡು ತಿರುಗಬೇಕಾಗುತ್ತದೆ.

Mr. SPEAKER.—The Hon'ble Member has no right to speak so far as others are concerned with regard to their longivity. Each has got his own idea.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದಕ್ಕೋಸ್ಕರ ಸೆಕೆಂಡರಿ ಎಜುಕೇಷನ್‌ಗೆ ಮಾಡಿರತಕ್ಕ ಪಾಪ ಏನು ಇದೆ, ಮಕ್ಕಳ ವಿದ್ಯಾಭ್ಯಾಸಕ್ಕಾಗಿ ದುಃಖಪಡುತ್ತಿದ್ದಾರೋ ಅದರಿಂದ ನಿಜವಾಗಿಯೂ ಕೂಡ ಒಳ್ಳೆಯದಾಗುವುದಿಲ್ಲ. ಸರ್ಕಾರದವರು ಸೆಕೆಂಡರಿ ಎಜುಕೇಷನ್‌ಗೆ $4\frac{1}{4}$ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಏನು ಇವೊತ್ತಿನ ದಿವಸ ಕೇಳುತ್ತಿದ್ದೀರೋ ಅದಕ್ಕೆ ನಾನು ಒಪ್ಪಿಗೆ ಕೊಡುವುದಕ್ಕೆ ತಯಾರಾಗಿಲ್ಲ. 15 ಕೋಟಿ ರೂಪಾಯಿಗಳನ್ನು ಪ್ರೈಮರಿ ಎಜುಕೇಷನ್ ಮಟ್ಟದಲ್ಲಿ ಕೇಳುತ್ತಿದ್ದಾರೆ. ಎರಡನೇ ಪಂಚವಾರ್ಷಿಕ ಯೋಜನೆ ಮತ್ತು ಮೂರನೇ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಸಾವಿರ ಉಪಾಧ್ಯಾಯರಿಗೆ ತಾವು ಟ್ರೈನಿಂಗ್ ಕೊಟ್ಟಿರಿ? ಎಷ್ಟು ಸಾವಿರ ಉಪಾಧ್ಯಾಯರನ್ನು ನೇಮಕ ಮಾಡಿದಿರಿ? ಎಷ್ಟು ಶಾಲೆಗಳನ್ನು ತೆಗೆದಿರಿ? ಎಷ್ಟು ಮಕ್ಕಳು ವಿದ್ಯಾಭ್ಯಾಸ ಮಾಡಿದರು? ಎಂದು ಲೆಕ್ಕ ಹಾಕಿದರೆ, ಇವೊತ್ತಿನ ದಿವಸ ಮುಖ್ಯ ಮಂತ್ರಿಗಳು ಹೇಳುತ್ತಾರೆ ಒಂದು ವರ್ಷಕ್ಕೆ 5 ಸಾವಿರ ಉಪಾಧ್ಯಾಯರನ್ನು ನೇಮಕ ಮಾಡುತ್ತೇವೆ ಎಂದು. ಸಭೆಯ ಸದಸ್ಯರು ಹೇಳುತ್ತಾರೆ, ಎಷ್ಟೋ ಶಾಲೆಗಳಲ್ಲಿ ಉಪಾಧ್ಯಾಯರು ಇಲ್ಲ, ಒಂದೊಂದು ಕೊಠಡಿಯಲ್ಲಿ ನೂರು ನೂರು ಮಕ್ಕಳು ಕೂತುಕೊಳ್ಳುತ್ತಿದ್ದಾರೆ. ನೀವು ಇವೊತ್ತಿನ ದಿವಸ 15 ಕೋಟಿ ಹಣ ಕೇಳುತ್ತಿದ್ದೀರಿ. ಯಾವುದು ಮುಂದಿನ ವಿದ್ಯಾಭ್ಯಾಸದ ಬುನಾದಿಯೋ ಅಂತಹ ಬುನಾದಿಯನ್ನು ಸಡಿಲ ಮಾಡಿಬಿಟ್ಟಿದ್ದೀರಿ. ಪ್ರೈಮರಿ ಎಜುಕೇಷನ್ ಮೈಸೂರು ಸಂಸ್ಥಾನದಲ್ಲಿ ಹೆಸರು ಇಲ್ಲದ ಹಾಗೆ ಹಾಳಾಗಿ ಹೋಗಿದೆ. ಅದಕ್ಕೋಸ್ಕರ 15 ಕೋಟಿ ಯಾವ ರೀತಿ ಕೊಡಬೇಕೆಂದು ನಾನಾದರೂ ತಮಗೆ ಕೇಳುತ್ತಿದ್ದೇನೆ. ಟೆಕ್ನಿಕಲ್ ಎಜುಕೇಷನ್ನಿಗೆ 76 ಲಕ್ಷ ರೂಪಾಯಿ ಮತ್ತು ಜನರಲ್ ಎಕ್ಸ್

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಪೆಂಡಿಚರ್ 6,84,59,500 ರೂಪಾಯಿ ಕೇಳುತ್ತಿದ್ದೀರಿ. ಇದನ್ನು ಸ್ವೇಚ್ಛೆಯಾಗಿ ತಮ್ಮ ಮನ ಬಂದಂತೆ ಖರ್ಚು ಮಾಡುವುದಕ್ಕೆ ಅವಕಾಶ ಇದೆ. ಅದಕ್ಕೋಸ್ಕರ ನಾನು ವಿದ್ಯಾ ಮಂತ್ರಿಗಳಿಗೆ ಹೇಳುತ್ತೇನೆ. ಇಷ್ಟು ಹಣ ಕೊಡುವುದಾದರೆ ಇಷ್ಟು ಹಣಕ್ಕೆ ಈ ಸಭೆ ಒಪ್ಪಿಗೆ ಕೊಡುವುದಾದರೆ ಮೈಸೂರು ಸರ್ಕಾರ ವಿದ್ಯಾಭ್ಯಾಸದ ಖಾತೆ ಸರ್ವ ನಾಶವಾಗುತ್ತದೆ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ತಾವು ಎಲ್ಲೂ ಟೆಕ್ನಿಕಲ್ ಎಜುಕೇಷನ್ ಕೊಡುವುದಿಲ್ಲ, ಎಲ್ಲೂ ಮೆಡಿಕಲ್ ಕಾಲೇಜು ತೆರೆಯುವುದಿಲ್ಲ ಎಲ್ಲೂ ಇಂಜನಿಯರಿಂಗ್ ಕಾಲೇಜು ತೆರೆಯುವುದಿಲ್ಲ ಎಂದು ಹೇಳುತ್ತಿರುವಾಗ ದಾವಣಗೆರೆಯಲ್ಲಿ ಮೆಡಿಕಲ್ ಕಾಲೇಜು ತೆರೆದಿರಿ. ಯಾರು ಮೆಡಿಕಲ್ ಎಜುಕೇಷನ್ನಿಗೆ ಬಾಧ್ಯರೋ, ಯಾರು ಅಸ್ತು ಎಂದು ಹೇಳಬೇಕೋ ಅವರನ್ನು ಕೇಳಿಯೇ ಇಲ್ಲ. ತಾವು ಮುಖ್ಯ ಮಂತ್ರಿಗಳು ಹೋಗಿ ಆ ಕಾಲೇಜನ್ನು ಓಪನ್ ಮಾಡಿದಿರಿ. ಒಂದೇ ದಿವಸದಲ್ಲಿ ಮೈಸೂರು ಸಂಸ್ಥಾನದ ಮೆಡಿಕಲ್ ಕಾಲೇಜು ಓಪನ್ ಆಯಿತು ಮತ್ತು ಮೈಸೂರಿನ ಸುತ್ತೂರು ಮಠದವರಿಂದ ಇಂಜಿನಿಯರಿಂಗ್ ಕಾಲೇಜು ಓಪನ್ ಆಯಿತು. ಇದು ನ್ಯಾಯವೇ? ನಮಗೆ ಜಾತಿ, ಕುಲ, ಗೋತ್ರ ಒಂದೂ ಇಲ್ಲ ಎಂದು ಹೇಳುತ್ತೀರಿ. ಸೆಕ್ಯೂಲರ್ ಸ್ಟೇಟ್ ಎಂದು ಹೇಳುತ್ತೀರಿ. ಆದರೆ ಎರಡು ಕಾಲೇಜುಗಳನ್ನು ಯಾರ ಪ್ರಭಾವದಿಂದ, ಯಾರ ಒತ್ತಡಕ್ಕೆ ಸಿಕ್ಕಿ ಕಾಲೇಜು ತೆರೆದಿರಿ ಎಂದು ನಾನಾದರೂ ಸರ್ಕಾರವನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ನಾನು ಹೇಳುತ್ತೇನೆ ಇವತ್ತಿನ ದಿವಸ ಮುಖ್ಯ ಮಂತ್ರಿಗಳು ಮನಸ್ಸು ಮಾಡಿ, ರಾಜ್ಯದಲ್ಲಿ 30 ಕೋಟಿ ರೂಪಾಯಿ ಖರ್ಚು ಮಾಡತಕ್ಕ ವಿದ್ಯಾ ಖಾತೆಯನ್ನು ವಿದ್ಯಾಸಚಿವರ ಕೈಯಿಂದ ತಾವಾದರೂ ವಹಿಸಿಕೊಳ್ಳಿ ಅಥವಾ ಇನ್ನು ಯಾರ ಕೈಯಲ್ಲಿ ಆದರೂ ಕೊಡಿ.

Mr. SPEAKER.—That does not come under the Budget. Under which Demand can the Member ask for a change of portfolio? It refers to individuals. I am not allowing it.

Sri C. J. MUCKANNAPPA.—To whom are we giving the money? It is to the Education Minister. He alone spends Rs. 30 crores.

Mr. SPEAKER.—Then we may say that he should not be given that amount.

Sri C. J. MUCKANNAPPA.—That is my contention. He cannot spend money, he cannot do justice to others. That is my contention. Therefore he should not hold that portpolio. That is my contention. ಅದಕ್ಕೋಸ್ಕರ ಹೇಳುತ್ತೇನೆ ಶ್ರೀಮಾನ್ ಅಣ್ಣಾರಾವ್ ಅವರು 1962 ರಲ್ಲಿ ಎಲೆಕ್ಷನ್ ಬರುತ್ತಾ ಇತ್ತು ಆಗ ಕಡ್ಡಾಯ ಶಿಕ್ಷಣ ತಂದರು. ಈಗ ಚುನಾವಣೆ ಬರುತ್ತಾ ಇದೆ. ಅದಕ್ಕೋಸ್ಕರ free education for all children in secondary schools, whether he is rich or poor, or whether he is a labourer or factory worker ಎಂದು ಮಾಡುವುದಕ್ಕೋಸ್ಕರ ತಂದಿದ್ದೀರಿ? ಚೀಪ್ ಪಾಪ್ಯುಲಾರಿಟಿ ಇದಕ್ಕಾಗಿ 50 ಲಕ್ಷ ರೂಪಾಯಿ ಖರ್ಚಾಗುತ್ತದೆ. ದೊಡ್ಡದು ಅಲ್ಲ ಎಂದು ಹೇಳುತ್ತೀರಿ. ಅದಕ್ಕೋಸ್ಕರ ನಾನು ಹೇಳುತ್ತೇನೆ, ನಿಜವಾಗಿ ಇವರ ಕೈಯಲ್ಲಿ ನ್ಯಾಯ ದೊರೆಯುವುದಿಲ್ಲ. ಆದ್ದರಿಂದ ಈ ಡಿಮ್ಯಾಂಡಿಗೆ ಒಪ್ಪಿಗೆ ಕೊಡುವುದಕ್ಕೆ ಕಠಿಣವಾಗಿ ವಿರೋಧ ಮಾಡುತ್ತೇನೆ. ಒಂದೆರಡು ನಿಮಿಷ ಮಾತನಾಡಲು ಹೆಚ್ಚಿಗೆ ತೆಗೆದುಕೊಂಡಿದ್ದರೆ ಅದನ್ನು ಮಾನ್ಯ ಅಧ್ಯಕ್ಷರು ದೊಡ್ಡ ಮನಸ್ಸು ಮಾಡಿ ಕ್ಷಮಿಸಬೇಕು ಎಂದು ಹೇಳುತ್ತೇನೆ.

ಶ್ರೀಮತಿ ಜಿ. ಸಿ. ಭಾಗೀರಥಮ್ಮ (ತುಮಕೂರು).—ಮಾನ್ಯ ಅಧ್ಯಕ್ಷರೇ, ನಮ್ಮ ಮುಂದಿರುವ ಡಿಮ್ಯಾಂಡನ್ನು ಅನುಮೋದಿಸುತ್ತಾ ನಮ್ಮ ತಾಲ್ಲೂಕಿಗೆ ಸಂಬಂಧಪಟ್ಟ ಒಂದೆರಡು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಹಿಂದೆ ಎಸ್. ಎಸ್. ಎಲ್. ಸಿ. ಮುಗಿದ ನಂತರ ಮುಂದಿನ ವಿದ್ಯಾಭ್ಯಾಸಕ್ಕೆ ಅನುಕೂಲ ಇಲ್ಲದಂಥ ಮಕ್ಕಳಿಗೆ ಇಂಡಸ್ಟ್ರಿಯಲ್ ಟ್ರೈನಿಂಗ್ ಸ್ಕೂಲ್ ತೆಗೆಯುವುದಕ್ಕೆ ಸರ್ಕಾರದವರು ಆಶ್ವಾಸನೆ ಕೊಟ್ಟಿದ್ದರು. ಇದುವರೆಗೂ ಯಾವ ಜಿಲ್ಲೆಯಲ್ಲೂ ಯಾವುದೂ ತೆರೆದಿರುವುದು ಕಾಣಲಿಲ್ಲ. ಮುಂದಾದರೂ ಇಂತಹ ಇಂಡಸ್ಟ್ರಿಯಲ್ ಟ್ರೈನಿಂಗ್ ಸ್ಕೂಲುಗಳನ್ನು ತೆರೆಯಬೇಕು ಎಂದು ನಾನು ಸೂಚನೆ ಮಾಡುತ್ತೇನೆ ಮತ್ತು ಈ ಫ್ರೀ ಟೆಕ್ಸ್ಟ್ ಬುಕ್ಸ್

ಸಪ್ಲೈ ಮಾಡುವಾಗ ತರಗತಿ ಪ್ರಾರಂಭವಾದ ಎಷ್ಟೋ ದಿವಸ ಆದ ಮೇಲೆ ಫ್ರೀ ಟೆಕ್ಸ್ಟ್ ಸಪ್ಲೈ ಮಾಡುತ್ತಾ ಇದ್ದಾರೆ ಮತ್ತು 5 ನೇ ಫಾರಂ ಓದುತ್ತಾ ಇರುವ ಹುಡುಗರಿಗೆ 4ನೇ ಫಾರಂ ಪುಸ್ತಕಗಳನ್ನು ಎಸ್. ಎಸ್. ಎಲ್. ಸಿ. ಓದುವವರೆಗೆ 5ನೇ ಫಾರಂ ಪುಸ್ತಕಗಳನ್ನು ಕೊಡುತ್ತಾ ಇದ್ದಾರೆ. ಈ ರೀತಿ ಆಗದೆ ಆಯಾಯ ವಿದ್ಯಾರ್ಥಿಗಳಿಗೆ ಅನುಕೂಲವಾದ ಟೆಕ್ಸ್ಟ್ ಬುಕ್ಸ್ ಒದಗಿಸಬೇಕು ಮತ್ತು ಕಾಲಕ್ಕೆ ಸರಿಯಾಗಿ ಒದಗಿಸಬೇಕು ಎಂದು ಸೂಚಿಸುತ್ತೇನೆ. ನರ್ಸರಿ ಶಾಲೆಗಳಿಗೆ 50 ಪರ್ಸೆಂಟು ಗ್ರಾಂಟು ಮಾತ್ರ ಕೊಡುತ್ತಾ ಇದ್ದಾರೆ. ಇದೂ ಸಾಕಾಗುವುದಿಲ್ಲ. ಇನ್ನೂ ಹೆಚ್ಚಿನ ಗ್ರಾಂಟನ್ನು ಕೊಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ತುಮಕೂರು ತಾಲ್ಲೂಕಿನಲ್ಲಿ ಒಂದೇ ಒಂದು ಹೆಣ್ಣು ಮಕ್ಕಳ ಹೈಸ್ಕೂಲ್ ಇದೆ. 1500 ಜನ ವಿದ್ಯಾರ್ಥಿನಿಯರು ಓದುತ್ತಾ ಇದ್ದಾರೆ. ಸಾಕಷ್ಟು ಕಟ್ಟಡವಿಲ್ಲ. ಮರದ ಕೆಳಗೆ ತರಗತಿಗಳನ್ನು ಮಾಡುತ್ತಾ ಇದ್ದಾರೆ. ಆದುದರಿಂದ ಸರ್ಕಾರದವರು ಮತ್ತೊಂದು ಹೆಣ್ಣುಮಕ್ಕಳ ಹೈಸ್ಕೂಲನ್ನು ತೆರೆಯಬೇಕೆಂದು ಈ ಸಂದರ್ಭದಲ್ಲಿ ಸರ್ಕಾರವನ್ನು ಪ್ರಾರ್ಥಿಸಿಕೊಳ್ಳುತ್ತೇನೆ. ಈಗ ಹಾಲಿ ನಡೆಯುತ್ತಾ ಇರುವ ಫಸ್ಟ್ ಗ್ರೇಡ್ ಕಾಲೇಜನ್ನು ಹೊಸ ಕಟ್ಟಡಕ್ಕೆ ಬದಲಾಯಿಸುತ್ತಾ ಇದ್ದಾರೆ. ಹೆಣ್ಣುಮಕ್ಕಳಿಗೆ ಹೋಗುವುದಕ್ಕೆ ಆ ಕಟ್ಟಡ ಬಹಳ ದೂರ ಇದೆ, ಮೂರು ಮೈಲಿ ದೂರ ಹೆಣ್ಣು ಮಕ್ಕಳು ಹೋಗಬೇಕಾಗುತ್ತದೆ. ಬೆಂಗಳೂರಿನಲ್ಲಿರುವ ಹಾಗೆ ಅಲ್ಲಿ ಯಾವ ಬಸ್ ಸೌಕರ್ಯವೂ ಇರುವುದಿಲ್ಲ. ಆದುದರಿಂದ ಅಲ್ಲಿ ಕೂಡಲೇ ಒಂದು ಹೆಣ್ಣುಮಕ್ಕಳ ಕಾಲೇಜನ್ನು ತೆಗೆಯಬೇಕೆಂದು ಕೇಳಿಕೊಳ್ಳುತ್ತೇನೆ. ಪೊಲಿಟಿಕಲ್ ಸಫರರ್ಸ್ ಮಕ್ಕಳ ಬಗ್ಗೆ ಶ್ರೀಮತಿ ರತ್ನಮ್ಮ ಮಾಧವರಾವ್‌ರವರು ಮಾತನಾಡಿದ್ದಾರೆ. ನಾನು ಅದನ್ನು ಇನ್ನೊಮ್ಮೆ ಒತ್ತಾಯ ಮಾಡಿ ಹೇಳುತ್ತೇನೆ. 50 ಪರ್ಸೆಂಟು ಮಾರ್ಕ್ಸ್ ಬಂದರೆ ಮಾತ್ರ ಹೈಸ್ಕೂಲ್ ಮತ್ತು ಮಿಡಲ್ ಸ್ಕೂಲ್ ಮಕ್ಕಳಿಗೆ ಸ್ಕಾಲರ್‌ಷಿಪ್ ಕೊಡುತ್ತಾ ಇದ್ದಾರೆ. ತೇರ್ಗಡೆ ಆದಮೇಲೆ ಹುಡುಗರಿಗೆ ಪುಸ್ತಕ ವಗೈರೆ ಕೊಂಡುಕೊಳ್ಳುವುದಕ್ಕೆ ಅನುಕೂಲವಾಗಬೇಕು. ಆದ್ದರಿಂದ ಏನು ರೂಲ್ಸ್ ಇದೆ ಅದನ್ನು ಸ್ವಲ್ಪ ತಿದ್ದುಪಡಿ ಮಾಡಿ. ತೇರ್ಗಡೆ ಹೊಂದಿದರೆ ಸಾಕು, ಅವರಿಗೆ ಸ್ಕಾಲರ್‌ಷಿಪ್ ದೊರಕಬೇಕು ಎಂದು ತಿದ್ದುಪಡಿ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

5-30 P.M.

ಹಿಂದಿಗೆ ಸಾಕಷ್ಟು ಟೀಚರ್ಸ್ ಇಲ್ಲ ಎಂದು ಹೇಳುತ್ತಿದ್ದಾರೆ. ಆದರೆ ಹಿಂದಿ ಟೀಚರ್ಸ್ ಸಾಕಷ್ಟು ಇದ್ದಾರೆ. ಅವರಿಗೆ ಇನಟರ್‌ವ್ಯೂಗೆ ಕರೆದು ನೌಕರಿ ಕೊಡದೆ ಹಾಗೆಯೇ ಇಟ್ಟು ಕೊಂಡಿದ್ದಾರೆ. ಅವರಿಗೆಲ್ಲಾ ನೌಕರಿ ಕೊಟ್ಟು ಎಲ್ಲೆಲ್ಲಿ ಖಾಲಿ ಜಾಗವಿದೆಯೊ ಅಂತಹ ಜಾಗಗಳನ್ನು ಭರ್ತಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಪ್ರಾಥಮಿಕ ಶಾಲೆಗಳಲ್ಲಿ ಹೆಚ್ಚಾಗಿ ಹೆಣ್ಣು ಮಕ್ಕಳನ್ನೇ ಉಪಾಧ್ಯಾಯಿನಿಯರನ್ನಾಗಿ ನೇಮಕ ಮಾಡಬೇಕು. ಏಕೆಂದರೆ, ಮಕ್ಕಳ ಮನಸ್ಸನ್ನು ಅರಿತುಕೊಳ್ಳುವಂತಹ ಶಕ್ತಿ ಮತ್ತು ಸಹನೆ, ಶಾಂತಿ, ಹೆಣ್ಣುಮಕ್ಕಳಿಗೆ ಹೆಚ್ಚಾಗಿ ಇರುವುದರಿಂದ, ಪ್ರಾಥಮಿಕ ಶಾಲೆಗಳಲ್ಲಿ ಹೆಚ್ಚಾಗಿ ಹೆಣ್ಣುಮಕ್ಕಳನ್ನೇ ಉಪಾಧ್ಯಾಯಿನಿಯರನ್ನಾಗಿ ನೇಮಕ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮತ್ತು ಸಂಸ್ಕೃತ ವಿದ್ಯಾಭ್ಯಾಸದ ಬಗ್ಗೆ ಸರ್ಕಾರದವರು ಸ್ವಲ್ಪ ಹೆಚ್ಚಿನ ಉತ್ತೇಜನ ಕೊಡುತ್ತಾ ಇಲ್ಲ. ನಮ್ಮ ಮೂಲ ಭಾಷೆಯಾದ ಸಂಸ್ಕೃತಕ್ಕೆ ಸರ್ಕಾರ ಹೆಚ್ಚಿನ ಪ್ರೋತ್ಸಾಹ ಕೊಡಬೇಕು. ಖಾಸಗಿಯಾಗಿ ಯಾರಾದರೂ ಪಾಠಶಾಲೆಗಳನ್ನು ತೆರೆಯುವುದಾದರೆ, ಅಂಥವರಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕೆಂದು ನಾನು ಈ ಸಮಯದಲ್ಲಿ ಸರ್ಕಾರಕ್ಕೆ ಮನವಿ ಮಾಡಿ ಕೊಳ್ಳುತ್ತೇನೆ.

ಇನ್ನೊಂದು ವಿಷಯ. ತುಮಕೂರು ಟೌನಿನ ಮಧ್ಯದಲ್ಲಿರತಕ್ಕ ಹೆಣ್ಣುಮಕ್ಕಳ ಶಾಲೆಗಳಲ್ಲಿ ಒಂದು ಲ್ಯಾಟ್ರಿನ್ ವ್ಯವಸ್ಥೆ ಕೂಡ ಇಲ್ಲ ಎಂದು ಹೇಳುವುದಕ್ಕೆ ನನಗೆ ಬಹಳ ನಾಚಿಕೆಯಾಗುತ್ತದೆ. ಟೌನಿನ ಮಧ್ಯದಲ್ಲಿರತಕ್ಕ ಇಂತಹ ಹೆಣ್ಣುಮಕ್ಕಳ ಶಾಲೆಗಳಲ್ಲಿ ಒಂದು ಲ್ಯಾಟ್ರೀನ್ ವ್ಯವಸ್ಥೆ ಕೂಡ ಇಲ್ಲದೆ ಇರುವಾಗ, ಗ್ರಾಮಾಂತರ ಪ್ರದೇಶಗಳಲ್ಲಿ ಎಷ್ಟು ಮಟ್ಟಿಗೆ ಸರ್ಕಾರದವರು ಜವಾಬ್ದಾರಿಯನ್ನು ವಹಿಸಿದ್ದಾರೆ ಮತ್ತು ಅಭಿವೃದ್ಧಿಯನ್ನು ಮಾಡಿದ್ದಾರೆ ಎಂಬುದು ಅರ್ಥವಾಗುತ್ತದೆ. ಇಷ್ಟು ಹೇಳಿ, ನನಗೆ ಮಾತನಾಡಲು ಅವಕಾಶವನ್ನು ಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ಆರ್. ರಂಗೇಗೌಡ (ಮಾಗಡಿ).—ಪೂಜ್ಯ ಸಭಾಪತಿಯವರೇ, ವಿದ್ಯಾ ಮಂತ್ರಿಯವರು ನಮ್ಮ ಮುಂದೆ ಇಟ್ಟಿರುವ 17, 37, ಮತ್ತು 49ನೆ ಬೇಡಿಕೆಗಳನ್ನು ಸ್ವಾಗತಿಸುತ್ತಾ ಕೆಲವು ವಿಷಯಗಳನ್ನು ತಮ್ಮ ಮೂಲಕ ಸರ್ಕಾರದ ಗಮನಕ್ಕೆ ತರಬಿಚ್ಛಿಸುತ್ತೇನೆ. ಯಾವ ಇಲಾಖೆಯಲ್ಲಿಯೂ ಜಾತೀಯತೆ ಪ್ರಾಂತೀಯತೆ ಇರಬಾರದೆಂದು ತಜ್ಞರ ಅಭಿಪ್ರಾಯ. ಅದರಲ್ಲೂ ಮುಖ್ಯವಾಗಿ ಈ ವಿದ್ಯಾ ಇಲಾಖೆಯಲ್ಲಿ ಜಾತೀಯತೆ, ಮತ್ತು ಪ್ರಾಂತೀಯತೆಯ ಭಿನ್ನಾಭಿಪ್ರಾಯಗಳು ಕಿಂಚಿತ್ತೂ

(ಶ್ರೀ ಸಿ. ಆರ್. ರಂಗೇಗೌಡ)

ತಲೆದೋರಬಾರದು ಎಂಬುದು ತಜ್ಞರ ಅಭಿಪ್ರಾಯ. ಆದರೆ ಇಂದು ಏನು ದುರದೃಷ್ಟವೋ ನಮ್ಮ ದೇಶದಲ್ಲಿ ಡೈರೆಕ್ಟರನ್ನು ನೇಮಕ ಮಾಡುವಾಗ ಆಗಲೀ, ಜಾಯಿಂಟ್ ಡೈರೆಕ್ಟರನ್ನು ಮಾಡುವಾಗ ಆಗಲೀ, ವಿದ್ಯಾ ಇಲಾಖೆಯಲ್ಲಿ ಜಾತೀಯತೆ, ಪ್ರಾಂತೀಯತೆಯು ಎದ್ದು ಕಾಣುತ್ತಿದೆ. ಈ ತರದ ಭಾವನೆಗಳು ಅಧಿಕಾರಿಗಳಲ್ಲಿ ಮೂಡಿದಾಗ, ಅದು ಅಧಿಕಾರಿಗಳಿಂದ ಉಪಾಧ್ಯಾಯರುಗಳಿಗೆ ಉಪಾಧ್ಯಾಯರುಗಳಿಂದ ಮುಂದೆ ಮಕ್ಕಳಿಗೆ ಬಂದು ಈ ಅಂಟುಜಾಡ್ಯದಿಂದ ವಿದ್ಯಾಭ್ಯಾಸವೇ ಕೆಡುವಂತಹ ಪರಿಸ್ಥಿತಿ ಬರಬಹುದು. ಇದೇ ತಿಂಗಳಲ್ಲಿ 23ಕ್ಕೆ ಡಿ. ಪಿ. ಐ. ಯವರು ನಿವೃತ್ತರಾಗುತ್ತಾರೆ ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಇವರ ಸ್ಥಾನಕ್ಕೆ ಯಾರನ್ನು ನೇಮಕ ಮಾಡುತ್ತಾರೆಂದು ನೋಡಿದರೆ ಇದರಲ್ಲಿ ಜಾತೀಯತೆ ಅದರಲ್ಲೂ ಮುಖ್ಯವಾಗಿ ಪ್ರಾಂತೀಯತೆ ಎದ್ದು ಕಾಣುತ್ತಿದೆ. ಇದು ಬಹಳ ಶೋಚನೀಯವಾದುದು. ಈ ವಿಷಯದಲ್ಲಿ ನಾನಾದರೂ ಮಾನ್ಯ ಮುಖ್ಯ ಮಂತ್ರಿಯವರಲ್ಲಿ ಪ್ರಾರ್ಥನೆ ಮಾಡುವುದೇನೆಂದರೆ, ಇದರಲ್ಲಿ ಜಾತೀಯತೆ, ಅಥವಾ ಪ್ರಾಂತೀಯತೆ ಬರದಹಾಗೆ ನೋಡಿಕೊಳ್ಳಬೇಕು. ಮುಖ್ಯ ಮಂತ್ರಿಗಳು ಇದರಲ್ಲಿ ಜಾತೀಯತೆಗೆ ಅಥವಾ ಪಾಂತೀಯತೆಗೆ ಅವಕಾಶವಿಲ್ಲವೆಂದು ಹೇಳಿದರೆ ನಾನು ಮುಂದೆ ಏನನ್ನು ಮಾತನಾಡದೆ ಸುಮ್ಮನಿರುತ್ತೇನೆ. ತಕ್ಷಣದಲ್ಲಿ ಈ ಡೈರೆಕ್ಟರನ್ನು ನೇಮಕಮಾಡಬೇಕಾಗಿರುವುದರಿಂದ, ಈ ಸಭೆ ಹಾಗೂ ದೇಶವೇ ಕಾದು ನೋಡುತ್ತಿದೆ. ಆದ್ದರಿಂದ ಅದನ್ನು ಜಾಗ್ರತೆಯಾಗಿ ಜಾತೀಯತೆ ಮತ್ತು ಪ್ರಾಂತೀಯತಾತೀತವಾಗಿ ಮಾಡುವುದು ಅತ್ಯಗತ್ಯವೆಂದು ನಾನಾದರೂ ಸರ್ಕಾರಕ್ಕೆ ತಿಳಿಸುತ್ತೇನೆ. ನಾನು 11-10-65ರಲ್ಲಿ ಈ ಮಾನ್ಯ ಸಭೆಯಲ್ಲಿ ಒಂದು ಪ್ರಶ್ನೆಯ ಮೂಲಕ ಅಕಡಮಿ ಆಫ್ ಜನರಲ್ ಎಜುಕೇಶನ್, ಮನಿಪಾಲ್ ಇದನ್ನು ರೆಸಿಡೆನ್ಸಿಯಲ್ ಯುನಿವರ್ಸಿಟಿಯಾಗಿ ಮಾಡುವ ವಿಚಾರವನ್ನು ಕೇಳಿದಾಗ ಮಾನ್ಯ ವಿದ್ಯಾ ಮಂತ್ರಿಯವರು ಅಸಂಬದ್ಧವಾದ ಉತ್ತರವನ್ನು ಕೊಟ್ಟರು. ಅವರು ಏಕೆ, ಯಾವ ಕಾರಣಕ್ಕೆ ಆ ತರ ಉತ್ತರ ಕೊಟ್ಟರೋ ನನಗೆ ಅರ್ಥವಾಗಲಿಲ್ಲ. ನಂತರ ಸರ್ಕಾರಕ್ಕೆ ಒಂದು ಕಾಗದ ಬರೆದೆ. ಅದಕ್ಕೆ ಮಾನ್ಯ ಮುಖ್ಯ ಮಂತ್ರಿಗಳು 17-11-65ಕ್ಕೆ ಬರೆದ ಪತ್ರಕ್ಕೆ ಈ ರೀತಿ ಉತ್ತರ ಕೊಟ್ಟರು. Chief Minister's reply to my letter dated 17-11-65 :

> "...that at present the University Grants Commission as well as the Ministry of Education are not in favour of opening more universities. There is however a proposal before the University Grants Commission to open university centres in large cities. Attempts will be made to secure one or two university centres for Mysore during the fourth plan and the location of one of them at Mangalore may be considered in consultation with the University."

ನಾನು ಯಾವ ಉದ್ದೇಶದಲ್ಲಿ ರೆಸಿಡೆನ್ಷಿಯಲ್ ಯುನಿವರ್ಸಿಟಿ ಮಾಡಬೇಕೆಂದು ಕೇಳಿದ್ದೇನೋ, ಅದನ್ನು ತಪ್ಪು ಅರ್ಥಮಾಡಿಕೊಂಡ ಹಾಗೆ ಕಾಣುತ್ತದೆ. ದೊಡ್ಡ ದೊಡ್ಡ ಪಟ್ಟಣಗಳಲ್ಲಿ ಯೂನಿವರ್ಸಿಟಿ ಸೆಂಟರ್ಸ್ ಮಾಡುವುದಕ್ಕೂ ಸಂಬಂಧ ಕಲ್ಪಿಸುವುದು ಬೇಡ. ಹೊಸದಾಗಿ ಯೂನಿವರ್ಸಿಟಿ ಮಾಡಲು ಯೂನಿವರ್ಸಿಟಿ ಗ್ರಾಂಟ್ಸ್ ಕಮೀಷನ್ ಅಡ್ಡಿ ಬರಬಹುದು, ಒಪ್ಪದಿರಬಹುದು. ಅಲ್ಲದೆ ಯೂನಿವರ್ಸಿಟಿ ಸೆಂಟರ್‌ಗಳು ಯಾವ ವಿಧದಲ್ಲಿಯೂ ನನ್ನ ಉದ್ದೇಶದ ರೆಸಿಡೆನ್ಷಿಯಲ್ ಯೂನಿವರ್ಸಿಟಿಯ ಮಟ್ಟಕ್ಕೆ ಬರಲಾರದೆಂದು ನನ್ನ ಖಚಿತ ಅಭಿಪ್ರಾಯ.

ಶ್ರೀ ಎಸ್. ಆರ್. ಕಂಠಿ.—ಅದಕ್ಕೆ ಯು.ಜಿ.ಸಿಯವರು ಒಪ್ಪುವುದಿಲ್ಲ. ಅದಕ್ಕೇ 4ನೆ ಪ್ಲಾನ್‌ನಲ್ಲಿ ಸೇರಿಸಿಲ್ಲ.

ಶ್ರೀ ಸಿ. ಆರ್. ರಂಗೇಗೌಡ.—ಅಣ್ಣಾಮಲೈ ಯೂನಿವರ್ಸಿಟಿಯಲ್ಲಿ ಏನೇನು ಅನುಕೂಲಗಳಿವೆಯೋ ಅದೆಲ್ಲಾ ಮಣಿಪಾಲದಲ್ಲಿವೆ ಎಂದು ನಾನು ತಿಳಿದುಕೊಂಡಿದ್ದೇನೆ. ಅಲ್ಲಿ ಉತ್ತಮ ವಾತಾವರಣ, ಉತ್ತಮ ಸೌಲಭ್ಯ, ಉತ್ತಮ ಶಿಕ್ಷಣ ದೊರೆಯುವುದರಲ್ಲಿ ಕಿಂಚಿತ್ತೂ ಸಂಶಯವಿಲ್ಲ. ಅದರಲ್ಲಿ ಯಾವ ಒಂದು ಜಾತೀಯತೆಯನ್ನು ಬೀರದೆ ರೆಸಿಡೆನ್ಸಿಯಲ್ ಯೂನಿವರ್ಸಿಟಿ ಮಾಡಿದರೆ, ಅದು ನಮ್ಮ ದೇಶಕ್ಕೆ ಒಂದು ಘನತೆ ಗೌರವವನ್ನು ತರುವುದು ಎಂದು ನಾನಾದರೂ ತಿಳಿದುಕೊಂಡಿದ್ದೇನೆ. ಶ್ರೀಮಾನ್ ಅಣ್ಣಾರಾಯರು ಪರೀಕ್ಷೆಗಳ ವಿಚಾರದಲ್ಲಿ ಮಾತನಾಡುತ್ತಾ ಹೇಳಿದರು. ಪರೀಕ್ಷಾ ಪತ್ರಗಳನ್ನು ಒಂದೇ ಕಡೆ ಇವ್ಯಾಲ್ಯುಯೇಟ್ ಮಾಡಿಸುತ್ತಾರೆ. ಹಾಗೆ ಮಾಡುವಾಗ ಉಪಾಧ್ಯಾಯರ ಮೇಲೆ ನಂಬಿಕೆಯಿಲ್ಲದೆ ಸುತ್ತಲೂ ಪಹರೆ ಇಟ್ಟು ಇವ್ಯಾಲ್ಯುಯೇಟ್ ಮಾಡುತ್ತಾ

ರೆಂದು ನಾನಾದರೂ ಹೇಳುತ್ತೇನೆ. ಇದು ಸರಿಯಾದುದಲ್ಲ. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ, ಈಗ ಸರ್ಕಾರಿ ಶಾಲೆಗಳನ್ನು ಬಿಟ್ಟು ಮುನಿಸಿಪಲ್ ಮತ್ತು ಏಡೆಡ್ ಸ್ಕೂಲುಗಳಲ್ಲಿ ಪ್ರಶ್ನೆ ಪತ್ರಿಕೆಗಳನ್ನು ಕಾಯಲು ಕಸ್ಟೋಡಿಯನ್ ಎಂದು ಇಟ್ಟಿದ್ದಾರೆ. ನಾನಾದರೂ ಹೇಳುತ್ತೇನೆ ಈ ಸರ್ಕಾರಿ ಅಧಿಕಾರಿಗಳಲ್ಲಿ ಮಾತ್ರ ಇವರಿಗೆ ನಂಬಿಕೆ ಇರುವುದಲ್ಲದೆ ಮುನಿಸಿಪಲ್ ಮತ್ತು ಏಡೆಡ್ ಸ್ಕೂಲ್‌ಗಳಲ್ಲಿರುವವರಲ್ಲಿ ಇವರಿಗೆ ನಂಬಿಕೆ ಇಲ್ಲ ಎಂದು ಅರ್ಥವಾಗುತ್ತದೆ. ಕೆಲವು ಕಡೆ ಮಿಡಲ್ ಸ್ಕೂಲ್ ಟೀಚರುಗಳನ್ನೋ, ಹೆಡ್‌ಮಾಸ್ಟರುಗಳನ್ನೋ ಕಸ್ಟೋಡಿಯನ್ ಆಗಿ ನೇಮಕ ಮಾಡುತ್ತಾರೆ. ಇಂತಹ ಪಾಲಿಸಿ ಸರ್ಕಾರ ಅನುಸರಿಸುವುದು ಸರಿಯಲ್ಲ. ಇದರಿಂದ ಸರ್ಕಾರಿ ಅಧಿಕಾರಿಗಳು ಮಾತ್ರ ನಂಬಿಕೆಗೆ ಅರ್ಹರು ಇತರರು ನಂಬಿಕೆಗೆ ಅರ್ಹರಲ್ಲವೆಂದೂ ಹಾಗೂ ಸರ್ಕಾರಿ ಅಧಿಕಾರಿಗಳೇ ಪ್ರೈವೇಟ್ ಸ್ಕೂಲ್ ಉಪಾಧ್ಯಾಯರ ಮೇಲೆ ಕೊಂಕು ದೃಷ್ಟಿಯಿಡುವ ಸಂದರ್ಭಗಳೂ ಬರುತ್ತವೆ.

ಇನ್ನು ಮುನಿಸಿಪಲ್ ಉಪಾಧ್ಯಾಯರುಗಳ ಸರ್ವಿಸ್ ರೆಗುಲರೈಸೇಶನ್ 1955ರಲ್ಲಿ ಮಾಡಿದರು. ಅವರಿಗೆ ಕೊಡಬೇಕಾದ ಹಣವನ್ನು ಕೊಡದೆ, ಸರ್ಕಾರಕ್ಕೆ ಮನವಿ ಮಾಡಿಕೊಂಡರೂ ಕೂಡ, ಸರ್ಕಾರದವರು ಹೇಳುತ್ತಾರೆ, ಮೇನೇಜಿಂಗ್ ಕಮಿಟಿ ಹಣ ಕೊಡಲಿ ನಂತರ ನಾವು ಕೊಡುತ್ತೇವೆ ಎಂದು. ಉದಾಹರಣೆಗೆ ನಮ್ಮ ತಾಲ್ಲೂಕಿನಲ್ಲಿ ಸುಮಾರು ಹತ್ತು ಸಾವಿರ ಹಣವನ್ನು ಮುನಿಸಿಪಲ್ ಉಪಾಧ್ಯಾಯರಿಗೆ ಕೊಡಬೇಕಾಗಿತ್ತು. ಮೇನೇಜಿಂಗ್ ಕಮಿಟಿಯಲ್ಲಿ ಇಷ್ಟು ದೊಡ್ಡ ಮೊತ್ತವನ್ನು ಒಂದೇ ಕಂತಿನಲ್ಲಿ ಕೊಡುವುದಕ್ಕೆ ಹಣವಿಲ್ಲ. ಆದ್ದರಿಂದ ಸರ್ಕಾರದವರು ಏನೇನು ಕೊಡಬೇಕೋ ಅದನ್ನು ಕೊಡುವ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತೇನೆ. ಸರ್ಕಾರದವರ ಪಾಲನ್ನು ಮೊದಲು ಕೊಟ್ಟು ಉಳಿದ ಭಾಗದ ಮೇನೇಜ್‌ಮೆಂಟ್‌ನವರ ಹಣವನ್ನು ನಂತರ ಪಡೆಯಲು ವ್ಯವಸ್ಥೆ ಮಾಡಬೇಕು. ನಾನು ಹಿಂದೆ ಮಾನ್ಯ ಸಭೆಯಲ್ಲೂ ಹಾಗೂ ಸರ್ಕಾರಕ್ಕೂ 1964ನೇ ಸಾಲಿನಲ್ಲಿ ನಮ್ಮ ತಾಲ್ಲೂಕಿನಲ್ಲಿ ಮಾಯನಾಯಕನಹಳ್ಳಿಯಲ್ಲಿ ಒಂದು ಶಾಲಾ ಕಟ್ಟಡಕ್ಕೆ ಗ್ರಾಮದವರು ಹಣ ಡಿಪೋಸಿಟ್ ಕೂಡ ಮಾಡಿದ್ದಾರೆ. ಆದರೆ ಇದರ ವಿಷಯದಲ್ಲಿ ಕಾಗದ ಕೂಡ ಬರೆದರೂ ಜವಾಬೇ ಇಲ್ಲ. ಈಗಲಾದರೂ ಸರ್ಕಾರದವರು ರೈತರ ಭಾಗದ ಹಣವನ್ನು ಉಪಯೋಗಿಸಿಕೊಂಡು ಉಳಿದ ಹಣ ಹಾಕಿ ಆ ಗ್ರಾಮಕ್ಕೆ ಪ್ರೈಮರಿ ಸ್ಕೂಲ್ ಕಟ್ಟಡವನ್ನೂ ಕಟ್ಟಿಸಬೇಕು. ಕಟ್ಟಡ ಇನ್ನೊಂದು ಮಂಗಳೂರು, ಬೆಂಗಳೂರು ರೋಡಿನಲ್ಲಿ ಇದೆ. ಇದು ಬಿದ್ದು ಹೋಗುವ ಸ್ಥಿತಿಯಲ್ಲಿವೆ. ರಸ್ತೆ ಪಾಳ್ಯದ P.B.S. ಸ್ಕೂಲಿನ ವಿಷಯವನ್ನು ನಾನು ಸರ್ಕಾರದ ಗಮನಕ್ಕೆ ಅನೇಕ ವೇಳೆ ತಂದರೂ ಈ ವರೆವಿಗೂ ಯಾರೂ ಗಮನ ಕೊಡಲಿಲ್ಲ. ಇಂದೋ ನಾಳೆಯೋ ಬಿದ್ದು ಹೋಗಲಿದೆ. ಸರ್ಕಾರದವರು ತಮಗೆ ಬೇಕಾದ ಬಾಬುಗಳಿಗೆ ಬೇಕಾಬಿಟ್ಟಿಯಾಗಿ ಖರ್ಚು ಮಾಡುತ್ತಾರೆ. ಈಗ ಒಂದು ಉದಾಹರಣೆಗೆ ಹೇಳುವುದಾದರೆ, ಬೆಂಗಳೂರಲ್ಲಿ ಈಗ ಸುಭಾಸ್‌ನಗರದಲ್ಲಿ ಒಂದು ಎಗ್ಸಿಬಿಷನ್ ನಡೆಯುತ್ತಾ ಇದೆ. ಅದರಲ್ಲಿ ಸರ್ಕಾರದವರು ಅನೇಕ ಇಲಾಖೆಗಳ ಸ್ಟಾಲ್ ಹಾಕಿದ್ದಾರೆ. ಪ್ರತಿ ಇಲಾಖೆ ಸ್ಟಾಲ್‌ಗಳಿಗೂ ಗ್ರೌಂಡ್ ರೆಂಟ್ ಎಂದು ಅವಕ್ಕೆ ಕೊಡುವ 50-60 ಸಾವಿರ ರೂಪಾಯಿಗಳನ್ನು ಕಾಂಗ್ರೆಸ್ ಎಗ್ಸಿಬಿಷನ್‌ನವರು ವಸೂಲಿ ಮಾಡುತ್ತಿದ್ದಾರೆ. ಇದನ್ನು ನೋಡಿದರೆ ತುಂಬಾ ಆಶ್ಚರ್ಯವಾಗುತ್ತದೆ. ಇದನ್ನು ಈ ತರಹ ವೇಸ್ಟ್ ಮಾಡುತ್ತಾರೆಯೇ ಹೊರತು ಗ್ರಾಮಾಂತರ ಪ್ರದೇಶದಲ್ಲಿ ಪ್ರಾಥಮಿಕ ಶಾಲೆಗಳಿಗೆ ಕಟ್ಟಡಗಳಿಗೆ ಅಗತ್ಯವಾಗಿ ಕೊಡಬೇಕಾದರೆ ಅವನ್ನು ಕೊಡುತ್ತಾ ಇಲ್ಲ. ಇದು ಬಹಳ ತಪ್ಪು ಎಂದು ನಾನಾದರೂ ಹೇಳುತ್ತೇನೆ. ಒಂದು ಸಂಸ್ಥೆಯನ್ನು ಬೆಳೆಸಿಕೊಳ್ಳುವುದಕ್ಕೋಸ್ಕರ, ಚುನಾವಣೆಯ ಖರ್ಚಿಗೋಸ್ಕರ ಹಣ ಸಂಪಾದಿಸಲು ಹಣ ದುರುಪಯೋಗವಾಗುತ್ತಿದೆ, ಬಡ ರೈತರ ದುಡ್ಡು ಅನ್ಯಾಯವಾಗಿ ಖರ್ಚಾಗುತ್ತಿದೆ ಎಂದು ಬಹಳ ವಿಷಾದದಿಂದ ಹೇಳಬೇಕಾಗಿದೆ, ಸ್ವಾಮಿ.

ನಾನು ಮೊನ್ನೆಯ ದಿನ ಇದೇ ಶಾಸನ ಸಭೆಯಲ್ಲಿ ಪ್ರಶ್ನೆ ಕೇಳಿ ಹಿಂದಿ ಉಪಾಧ್ಯಾಯರನ್ನು ಪೂರ್ತಿಕಾಲದ ಉಪಾಧ್ಯಾಯರುಗಳಾಗಿ ಮಾಡಿರುವಂತೆ ಸಂಗೀತವನ್ನು ಹೇಳಿಕೊಡುವವರನ್ನೂ ಪೂರ್ತಿ ಕಾಲದ ಉಪಾಧ್ಯಾಯರುಗಳಾಗಿ ಮಾಡಬೇಕು ಎಂದು ಕೇಳಿದಾಗ, ಅದನ್ನು ಮಾಡುವುದಾಗಿ ಮಾನ್ಯ ಮಂತ್ರಿಗಳು ಭರವಸೆಯನ್ನು ಕೊಟ್ಟರು. ಅವರಿಗೆ ಈಗ ಕೊಡತಕ್ಕ ಅಲೋವೆನ್ಸ್ 30 ರೂಪಾಯಿ. ನಾಲ್ಕನೆಯ ದರ್ಜೆ ಅಧಿಕಾರಿಗೆ 50 ರೂಪಾಯಿ ಸಂಬಳ, 33 ರೂಪಾಯಿ ತುಟ್ಟಿ ಭತ್ಯವನ್ನು ಕೊಡುವಾಗ ಕಲೆಯನ್ನು ಉದ್ಧಾರ ಮಾಡಬೇಕು, ನಮ್ಮ ಮಕ್ಕಳು ಸಂಗೀತದಲ್ಲಿ ಪರಿಣತರಾಗಬೇಕು ಎಂದು ಹೇಳುವಾಗ ಆ ವಿದ್ಯೆಯನ್ನು ಹೇಳಿಕೊಡುವವರಿಗೆ ತಿಂಗಳಿಗೆ 30 ರೂಪಾಯಿ ಕೊಟ್ಟರೆ ಈ ದುರ್ಭರ ಕಾಲದಲ್ಲಿ ಅವರು ಜೀವನ ಹೇಗೆ ಮಾಡಬೇಕು ? ಈ ರೀತಿ ಮಾಡಿರುವುದು ಸರಿಯಲ್ಲ. ಅವರಿಗೂ ಹೆಚ್ಚಿನ ಅನುಕೂಲ ಮಾಡಿಕೊಡಬೇಕು ಅವರನ್ನು ಅತಿ ಜರೂರಾಗಿ ಖಾಯಂ ಪೂರ್ಣಕಾಲದ ಉಪಾಧ್ಯಾಯರನ್ನಾಗಿ ಮಾಡಿ ಎಲ್ಲಾ ನೌಕರರಿಗೂ ಕೊಡುವಂತೆ ಸಂಬಳಸಾರಿಗೆ ಕೊಡಬೇಕು ಎಂದು ಪ್ರಾರ್ಥಿಸಿಕೊಳ್ಳುತ್ತೇನೆ, ಸ್ವಾಮಿ.

(ಶ್ರೀ ಸಿ. ಆರ್. ರಂಗೇಗೌಡ)

ಕೊನೆಯದಾಗಿ, ನಾನು ಅನೇಕ ವೇಳೆ ಸರ್ಕಾರದ ಗಮನವನ್ನು ಸೆಳೆದಿದ್ದೆ ಮತ್ತು ಮಂತ್ರಿಗಳಿಗೂ ಕಾಗದ ಬರೆದಿದ್ದೆ. ರಾಮನಗರ ತಾಲ್ಲೂಕಿನ ಜಲಮಂಗಳ ಗ್ರಾಮದಲ್ಲಿ ಹೈಸ್ಕೂಲು ಕಟ್ಟಡಕ್ಕಾಗಿ 95,500 ರೂಪಾಯಿಗಳಿಗೆ ಮಂಜೂರಾತಿಯನ್ನು ಕೊಟ್ಟಿರುವುದಕ್ಕಾಗಿ ಅವರನ್ನು ಅಭಿನಂದಿಸಿ, ಮಾತನಾಡುವುದಕ್ಕೆ ಅವಕಾಶ ಕೊಟ್ಟ ಪೂಜ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಮಾನ್ಯ ಅಧ್ಯಕ್ಷರೆ, ಮಾನ್ಯ ವಿದ್ಯಾ ಸಚಿವರು ತಮ್ಮ ಬೇಡಿಕೆಗಳನ್ನು ಸಭೆಯ ಮುಂದೆ ಮಂಡಿಸಿದ್ದಾರೆ. ವಿದ್ಯೆಗೆ ತೊಡಗಿಸುವ ಹಣ ಕೇವಲ ಒಂದು ವೆಚ್ಚವಲ್ಲ, ಅದು ಒಂದು ಬಂಡವಾಳಕ್ಕೆ ತೊಡಗಿಸುವುದೇ ಆಗಿದೆ ಎನ್ನುವ ಮಾತನ್ನು ಪ್ರೊಫೆಸರ್ ಗಾಲ್‌ಬ್ರೇತ್ ಅವರು ಹೇಳಿದ್ದಾರೆ. ಇದು ಒಂದು ಇನ್‌ವೆಸ್ಟ್‌ಮೆಂಟ್ ಎಂದು ಅವರು ಹೇಳಿದ್ದಾರೆ. ಆ ದೃಷ್ಟಿಯಿಂದ ನಾವು ವೆಚ್ಚ ಮಾಡತಕ್ಕ ಹಣ, ಏನು ಸುಮಾರು 33 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ ಅದು ನಮ್ಮ ಆರ್ಥಿಕ ದೃಷ್ಟಿಯಿಂದ ದೊಡ್ಡದಾಗಿ ಕಾಣುತ್ತದೆಯೇ ಹೊರತು ಇವತ್ತು ಎಲ್ಲ ಮಕ್ಕಳಿಗೆ ವಿದ್ಯೆಯನ್ನು, ಸಾಕಷ್ಟು ಒಳ್ಳೆಯ ವಿದ್ಯೆಯನ್ನು ಒದಗಿಸುವುದಾದರೆ, ಇದರ ಆರು ಪಟ್ಟು ಹತ್ತು ಪಟ್ಟು ಹಣ ಖರ್ಚು ಮಾಡಬೇಕಾದೀತು ಎಂದು ನನಗನ್ನಿಸುತ್ತದೆ. ಬಹಳ ಬಡತನದ ದೇಶದ ಅನಕ್ಷರಸ್ಥ ತಂದೆತಾಯಿಗಳ ಮಕ್ಕಳಿಗೆ ವಿದ್ಯೆಯನ್ನು ಕೊಡುವಂಥ ಸನ್ನಿವೇಶದಲ್ಲಿ ಇವತ್ತು ಎಲ್ಲ ಮಕ್ಕಳಿಗೂ ವಿದ್ಯೆ ಕೊಡಬೇಕಾದ ಸಂದರ್ಭ ಬಂದಿರುವುದರಿಂದ ಹೆಚ್ಚಿನ ಹೊರೆಯನ್ನು ಸರ್ಕಾರ ಹೊರಬೇಕಾಗುತ್ತದೆ.

ನಮ್ಮ ಸಮಾಜ, ಮತ ಮತ್ತು ಜಾತಿಗಳಲ್ಲಿ ಹರಿದು ಹಂಚಿ ಹೋಗಿದೆ. ಅದು ಬೇರೆ ದೇಶಗಳಲ್ಲಿ ಕೇವಲ ವರ್ಗ ಭೇದವಿದ್ದರೆ ನಮ್ಮ ದೇಶಕ್ಕೆ ಜಾತೀಯತೆ ಮತ್ತು ಮತಭೇದ ಒಂದು ದೊಡ್ಡ ಶಾಪ. ಇದರಿಂದ ಈ ದೇಶವನ್ನು ಹೇಗೆ ಎತ್ತಬೇಕು, ಎತ್ತುವುದಕ್ಕೆ ಸಾಧ್ಯ ಎನ್ನುವುದನ್ನು ಅನೇಕರು ವಿಚಾರಮಾಡಿದ್ದಾರೆ. ಆದರೆ ಈವರೆಗೂ ಸಾಧ್ಯವಾಗಲಿಲ್ಲ. ಇವತ್ತು ಹೆಚ್ಚಾಗಿ ಜಾತೀಯತೆ ಹೋಗುವ ಬದಲು ಅದು ಹೆಚ್ಚು ರಾಜಕೀಯ ಮಟ್ಟದಲ್ಲಿ ಎಂದರೆ ಓಟುಗಳನ್ನು ಗಳಿಸುವಾಗ ಮತ್ತು ಉದ್ಯೋಗಗಳನ್ನು ದೊರಕಿಸಿಕೊಳ್ಳುವಾಗ ಮತ್ತು ಇತರ ಸೌಲಭ್ಯಗಳನ್ನು ಪಡೆಯುವಾಗ ಅದು ಬಹಳ ಹಾವಳಿಯನ್ನು ಮಾಡುತ್ತಿದೆ ಎನ್ನುವುದನ್ನು ನಾವು ಕಾಣಬಹುದು. ಆಯವ್ಯಯದ ಅಂದಾಜು ಪಟ್ಟಿಯಲ್ಲಿ ಅಪೆಂಡಿಕ್ಸ್ (ಸಿ) 594ನೆ ಪುಟದಲ್ಲಿ ನೋಡಿದರೆ ಗೊತ್ತಾಗುತ್ತದೆ. ಅದರಲ್ಲಿ Grants-in-aid to General Hostels, ಎಂದು ಕೊಟ್ಟಿದ್ದಾರೆ. ಮತಭೇದ, ಜಾತೀಯತೆ ಇಲ್ಲ ಎನ್ನುವುದು ಎಷ್ಟು ಸುಳ್ಳು ಎನ್ನುವುದಕ್ಕೆ ಇದನ್ನು ಹೇಳುತ್ತಿದ್ದೇನೆ. ಟ್ರೇನಿಂಗ್ ಕಾಲೇಜ್ ಮೈಸೂರು—ಲಿಂಗಾಯತ್ ಸೆಕ್ಷನ್, ಅದೇ ಕಾಲೇಜಿಗೆ ಸಂಬಂಧಪಟ್ಟ ಹಾಗೆ ಹಿಂದು ಸೆಕ್ಷನ್, ಒಕ್ಕಲಿಗರ ಸೆಕ್ಷನ್, ಮೊಹಮಡನ್ ಸೆಕ್ಷನ್, ಆದಿಕರ್ಣಾಟಕ ಸೆಕ್ಷನ್ ಎಂದು ಕೊಟ್ಟಿದ್ದಾರೆ. ಇದು ಒಂದು ದೊಡ್ಡ ಜಾಡ್ಯ, ರೋಗ. ಇದು ನಮ್ಮ ನರನಾಡಿಗಳಲ್ಲಿ ತುಂಬಿದೆ. ನಾನು ಉದಾಹರಣೆಗೆ ಮಾತ್ರ ಆಯವ್ಯಯ ಪಟ್ಟಿಯಲ್ಲಿ ಇರುವುದನ್ನು ಓದಿ ಹೇಳಿದ್ದೇನೆ. ಇದಕ್ಕೆ ವಿದ್ಯಾಮಂತ್ರಿಗಳು ಪರಿಹಾರವನ್ನು.......

ಶ್ರೀ ಎಸ್. ಆರ್. ಕಂಠಿ.—ಈ ಜಾಡ್ಯ ಹಳೆಯದು, ಬಹಳ ವರ್ಷಗಳಿಂದ ಬಂದಿದೆ.

ಶ್ರೀ ಎಸ್. ಗೋಪಾಲಗೌಡ.—ಹಳೇ ಜಾಡ್ಯವನ್ನು ಹೋಗಲಾಡಿಸುವುದಕ್ಕೆ ನಮ್ಮಿಂದ ಸಾಧ್ಯವಾಗಿಲ್ಲ. ಎಷ್ಟೇ ಪ್ರಚಾರವವನ್ನು ಹೊರಗಡೆ ಮಾಡುತ್ತ ಹೋದರೂ ಈ ಜಾಡ್ಯ ನಮ್ಮನ್ನು ನುಂಗಿ ನೀರು ಕುಡಿಯುತ್ತಿದೆ ಎನ್ನುವ ಮಾತಿಗಾಗಿ ತಮ್ಮ ಗಮನಕ್ಕೆ ತಂದಿದ್ದೇನೆ ಅಷ್ಟೇ.

ಸ್ವಾಮಿ, ಪ್ರಾಥಮಿಕ ವಿದ್ಯಾಭ್ಯಾಸವನ್ನು ಉಚಿತವಾಗಿ, ಕಡ್ಡಾಯವಾಗಿ ಕೊಡಬೇಕಾದ ಹೊಣೆಯನ್ನು ರಾಜ್ಯ ಸರ್ಕಾರ ಹೊತ್ತಿದೆ. ಈ ಹೊಣೆ ಸ್ವಲ್ಪಮಟ್ಟಿಗೆ ಕೇಂದ್ರ ಸರ್ಕಾರದ್ದೂ ಆಗಿರುತ್ತದೆ. ಇದು ರಾಜ್ಯಾಂಗದ ನಿರ್ದೇಶನದ ತತ್ವಗಳಲ್ಲಿ ಹಿಂದೆ ಉಲ್ಲೇಖಿಸಲ್ಪಟ್ಟಿದೆ. ಆದರೆ ಕಾರ್ಯತಃ ನಾವು ಆ ದಿಸೆಯಲ್ಲಿ ಪೂರ್ತಿ ಸಾಧನೆಯನ್ನು ಮಾಡುವುದಕ್ಕೆ ಆಗಿಲ್ಲ. 1961–62ರಲ್ಲಿ ಎನ್ಯೂಮರೇಷನ್ ಆದವರು 4,05,000 ಹುಡುಗರು 3,45,000 ಹುಡುಗಿಯರು, 1965–66 ರಲ್ಲಿ 16,38,000 ಹುಡುಗರು ಮತ್ತು 13,74,000 ಹುಡುಗಿಯರು. ಅದರಲ್ಲಿ ಎನ್‌ರೋಲ್‌ಮೆಂಟ್ಸ್ ಪೊಸಿಷನ್‌ನಲ್ಲಿ 1961-62 ರಲ್ಲಿ 93.5 ಆದರೆ 1965-66 ರಲ್ಲಿ 89.0ಗೆ ಇಳಿದಿದೆ. ಏರುವುದರ ಬದಲು ಇಳಿದಿದೆ. ಮಾನ್ಯ ಸದಸ್ಯರಾದ ಅಣ್ಣಾರಾಯರು ಹೇಳಿದರು, ಪ್ರಮಾಣದಲ್ಲಿ ವಿಸ್ತಾರವಾಗಿದೆ, ಗುಣದಲ್ಲಿ ಹೆಚ್ಚಿಗೆ ಆಗಿಲ್ಲ ನಮ್ಮ ವಿದ್ಯಾಭ್ಯಾಸ ಎಂದು. ಸಾರ್ವತ್ರಿಕವಾಗಿ ಎಲ್ಲರಿಗೂ ವಿದ್ಯೆಯನ್ನು ಕೊಡತಕ್ಕ ಕಾಲದಲ್ಲಿ, ಸಾಮೂಹಿಕವಾಗಿ ಕೊಡತಕ್ಕ ಕಾಲದಲ್ಲಿ, ಸ್ವಲ್ಪ

ಮಟ್ಟಿಗೆ ಗುಣಕ್ಕೆ ಧಕ್ಕೆ ಬರುತ್ತದೆ ಎನ್ನುವುದನ್ನು ಗಮನಿಸಬೇಕು. ನಾವು ಗುರುಕುಲದ ಕಾಲದಲ್ಲಿ ಇಲ್ಲ, ವಿನೋಬಭಾವೆಯವರು ಹೇಳತಕ್ಕ ವಿದ್ಯಾಭ್ಯಾಸವನ್ನು ಕೊಡುವುದಕ್ಕೆ ಸಾಧ್ಯವಂತೂ ಆಗುವುದಿಲ್ಲ. ಆದರೂ ನಮ್ಮ ಸ್ಥಿತಿಗಳಿಗೆ ತಕ್ಕಮಟ್ಟಿಗಾದರೂ ವಿದ್ಯಾಭ್ಯಾಸವನ್ನು ಸರ್ಕಾರ ಕೊಡುವಂಥ ಪ್ರಯತ್ನವನ್ನು ಮಾಡಿಲ್ಲ. ಮಾಡುತ್ತ ಇಲ್ಲ ಎನ್ನುವುದು ವಿಷಾದದ ಸಂಗತಿ. ಹಣದ ಕೊರತೆ ಒಂದು ಕಡೆ ಇದ್ದರೆ ಸರ್ಕಾರ ಸಾಕಷ್ಟು ನಿಗಾ ವಹಿಸದೆ ಆಗತಕ್ಕ ತೊಂದರೆಗಳು ಬಹಳಷ್ಟು ಇವೆ. ಕೆಲವು ತತ್ವಗಳನ್ನು ಮಾತ್ರ ಸರ್ಕಾರ ನಿರ್ಣಯಿಸಬೇಕು.

ಖಾಸಗಿ ಮತ್ತು ಸರ್ಕಾರಿ, ಎರಡು ತೆರನಾದ ಶಾಲೆಗಳು ಇವೆ. ನಾನು ಖಾಸಗಿ ಶಾಲೆಗಳಲ್ಲಿ ನಂಬಿಕೆ ಇಲ್ಲದೇ ಇರತಕ್ಕವನು. ಅದರಲ್ಲೂ ಮುಖ್ಯವಾಗಿ ಪ್ರಾಥಮಿಕ ಮತ್ತು ಸೆಕೆಂಡರಿ ವಿದ್ಯಾಭ್ಯಾಸವನ್ನು ಖಾಸಗಿಯವರಿಗೆ ಬಿಟ್ಟುಕೊಡಬೇಕೆಂದು ಹೇಳುವುದರಲ್ಲಿ ನನಗೆ ನಂಬಿಕೆ ಇಲ್ಲ. ಈ ಬಗ್ಗೆ ಸರ್ಕಾರದವರು ಒಂದು ನಿರ್ಣಯವನ್ನು ತೆಗೆದುಕೊಳ್ಳಬೇಕು. ಶ್ರೀ ಮಾನ್ ಡಿಮೆಲೋ ಅವರು ವಿಶೇಷವಾಗಿರತಕ್ಕ ಆಂಗ್ಲೋ ಇಂಡಿಯನ್ ವಿದ್ಯಾಭ್ಯಾಸದ ಸಮಸ್ಯೆ ಬಗ್ಗೆ ಮಾತನಾಡುತ್ತಾ ಆ ವಿದ್ಯಾಭ್ಯಾಸ ಕ್ಷೇತ್ರದಲ್ಲಿ ಬಹಳ ಕೆಲಸವಾಗಿದೆ ಎಂದು ಹೇಳಿದರು. ಆದ್ದರಿಂದ ಅವರ ಸಮಸ್ಯೆಯನ್ನು ಪೂರ್ಣವಾಗಿ ಸರ್ಕಾರದವರು ವಿಚಾರಮಾಡಿ ಆ ಬಗ್ಗೆ ಕೂಡಲೇ ತೀರ್ಮಾನವನ್ನು ತೆಗೆದುಕೊಳ್ಳುತ್ತಾರೆಂದು ನಾನು ನಂಬುತ್ತೇನೆ.

ಇನ್ನು ನಮ್ಮಲ್ಲಿ ಮುಖ್ಯವಾಗಿ ದುರ್ದೈವವಶಾತ್ ಒಂದು ಐತಿಹಾಸಿಕವಾದ ಸಾಮ್ರಾಜ್ಯಶಾಹಿ ವ್ಯವಸ್ಥೆಯ ಒಂದು ಪಿಶಾಚಿ ನಮ್ಮನ್ನು ಕಾಡುತ್ತಿದೆ. ಈ ರೀತಿ ವಿದ್ಯಾಭ್ಯಾಸದಲ್ಲಿ ನಾವು ಸಿಕ್ಕಿಬಿದ್ದಿದ್ದೇವೆ. ಆ ಒಂದು ವಾತಾವರಣದಲ್ಲಿ ರಾಷ್ಟ್ರೀಯ ಭಾವನೆಯನ್ನು ಮೊದಲು ತುಂಬಬೇಕು. ಅದು ಮೊದಲನೆಯದು. ಎರಡನೆಯದು ಶಿಕ್ಷಣ ಮಾಧ್ಯಮ ಕನ್ನಡವಾಗಬೇಕೆಂಬುದು. ಶ್ರೀಮಾನ್ ಕಂಠಿಯವರು ಅಚ್ಚ ಕನ್ನಡದವರು. ಸಾಮಾನ್ಯವಾಗಿ ಎಲ್ಲಾ ತಜ್ಞರು ಇವತ್ತು ಶಿಕ್ಷಣ ಮಾಧ್ಯಮ ಮಾತೃಭಾಷೆಯಲ್ಲಿಯೇ ಇರಬೇಕೆಂಬುದನ್ನು ಒಪ್ಪುತ್ತಾರೆ- ನಾನು ನೋಡುತ್ತಿದ್ದೇನೆ. ಪ್ರಾಥಮಿಕ ಶಿಕ್ಷಣದಿಂದ ಹಿಡಿದು ಪೂರ್ತಿಯಾಗಿ ಇಂಗ್ಲಿಷ್‌ನಲ್ಲಿ ಶಿಕ್ಷಣ ಕೊಡಬೇಕು ಎಂಬುದಾಗಿ ಈ ದೇಶದಲ್ಲಿ ಅನೇಕರಿಗೆ ಹುಚ್ಚು ಹಿಡಿದಿದೆ. ಮಾನ್ಯ ಮುಖ್ಯಮಂತ್ರಿಗಳೂ ಸಹ ಒಂದು ಸಾರಿ ಒಂದು ವಿಷಯವನ್ನು ಪ್ರಸ್ತಾಪಮಾಡಿದರು The sophisticated rich are sending their children to these schools and they pay Rs. 200 or more ಎಂದು. ಸರ್ಕಾರದವರು ಶಾಲೆಗಳನ್ನು ನಿರ್ಮಾಣಮಾಡುವ ಉದ್ದೇಶವೇನು, ತಂದೆತಾಯಿಗಳು ಯಾವ ಉದ್ದೇಶದಿಂದ ಆ ಶಾಲೆಗಳಿಗೆ ಅವರ ಮಕ್ಕಳನ್ನು ಇಷ್ಟು ಹಣವನ್ನು ಖರ್ಚುಮಾಡಿ ಕಳುಹಿಸುತ್ತಾರೆಂಬುದನ್ನು ಯೋಚನೆ ಮಾಡಬೇಕು. ಹಿಂದೆ ಆಕ್ಸ್‌ಫರ್ಡ್ ಮತ್ತು ಕ್ಯಾಂಬ್ರಿಡ್ಜ್ ಹೆಸರಿನ ಶಾಲೆಗಳು ನಿರ್ಮಾಣವಾಗಿದ್ದುವು ಆ ಶಾಲೆಗಳನ್ನು ಖಸಗಿಯವರು ನಡೆಸುತ್ತಿದ್ದರು. ಅಂತಹ ಶಾಲೆಗಳಿಗೆ ರೆಕಗ್‌ನಿಷನ್ ಕೊಡುತ್ತಿದ್ದರು. ಕೆಲವರಿಗೆ ಗ್ರಾಂಟು ಕೂಡ ಕೊಡುತ್ತಿದ್ದರು. ಈಗಲೂ ಇವೆಲ್ಲಾ ನಡೆಯುತ್ತಿದೆ. ಈ ವಿಚಾರದಲ್ಲಿ ಇವರ ಧೋರಣೆ ಏನೆಂಬುದನ್ನು ತೀರ್ಮಾನ ಮಾಡಬೇಕು. ಶಿಕ್ಷಣ ಮಾಧ್ಯಮ ಏನಾಗಿರಬೇಕೆಂದರೆ ಪ್ರಾಥಮಿಕ ವಿದ್ಯಾಭ್ಯಾಸದಿಂದ ಹಿಡಿದು ಅವನು ಓದಿ ಪೂರ್ತಿ ಪೋಸ್ಟ್ ಗ್ರಾಜುಯೇಟ್ ಆಗುವವರೆಗೂ ಪ್ರತಿಯೊಂದು ಸಂದರ್ಭದಲ್ಲೂ ಅದನ್ನೇ ಉಪಯೋಗಿಸಬೇಕು. ಅದು ಸಾಧ್ಯವಿದೆ, ಆದರ ಬಗ್ಗೆ ಸರ್ಕಾರದವರು ಕೂಡಲೇ ತೀರ್ಮಾನವನ್ನು ತೆಗೆದುಕೊಳ್ಳಬೇಕೆಂದು ಒತ್ತಾಯಪಡಿಸುತ್ತೇನೆ.

ಇನ್ನು ಇವತ್ತು ನಮ್ಮಲ್ಲಿ ವ್ಯವಸಾಯಕ್ಕೆ ಸಂಬಂಧಪಟ್ಟಹಾಗೆ ಒಂದು ವಿಶ್ವವಿದ್ಯಾನಿಲಯ ಬಂತು. ಅದು ವ್ಯವಸಾಯ ಖಾತೆಯಲ್ಲಿದೆ. ಮೆಡಿಕಲ್‌ಗೆ ಸಂಬಂಧಪಟ್ಟ ಕಾಲೇಜುಗಳು ಮೆಡಿಕಲ್ ಡಿಪಾರ್ಟ್‌ಮೆಂಟಿನಲ್ಲಿದೆ. ಹೀಗೆ ಬೇರೆ ಬೇರೆ ಇಲಾಖೆಗಳ ಕೆಳಗೆ ಅವು ಕೆಲಸಮಾಡುತ್ತಿವೆ. ಒಟ್ಟಿನಲ್ಲಿ ಈ ವಿದ್ಯಾಭ್ಯಾಸವನ್ನು ಕೊಡುವುದರ ಬಗ್ಗೆ ಒಂದು ಸಮಂಜಸವಾದ ರೀತಿನೀತಿಯನ್ನು ಅಳವಡಿಸುವುದಕ್ಕೆ ಕೇಂದ್ರ ಸರ್ಕಾರದವರೂ ಹಾಗೂ ರಾಜ್ಯಸರ್ಕಾರದವರೂ ಪ್ರಯತ್ನಮಾಡಬೇಕು. ಏಕೆಂದರೆ, ಈ ದೇಶದಲ್ಲಿ ಇವರು ಮಾಡಿದ ಪ್ರಯತ್ನಗಳು ಏನೂ ಫಲ ಕೊಡಲಿಲ್ಲ. ಪಿ. ಯು. ಸಿ. ಇರಬೇಕೇ, ಬೇಡವೇ, ಅದರ ಬಗ್ಗೆ ಏನೂ ತೀರ್ಮಾನ ಮಾಡಲಿಲ್ಲವೆಂದು ನಾನು ಹೇಳುತ್ತೇನೆ. ಸಾಮಾನ್ಯವಾಗಿ ನಮ್ಮ ದೇಶದಲ್ಲಿ ಸೇಕಡ 80 ಅಥವಾ 90 ಜನ ಉತ್ತೀರ್ಣರಾಗಬೇಕು, ಅದು ಇತ್ತೀಚೆಗೆ ನಮ್ಮ ರಾಜ್ಯದಲ್ಲಿ ತಲೆಕೆಳಕಾಗಿದೆ. ಕೇವಲ ಸೇಕಡ 18 ಜನರು ಉತ್ತೀರ್ಣರಾಗಿ ಬಾಕಿಯವರು ಫೇಲ್ ಆಗುವ ಕ್ರಮ ಬಂದಿದೆ. ಪಿ. ಯು. ಸಿ. ಯಲ್ಲಿ ಈರೀತಿಯಾಗುತ್ತಾ ಇದ್ದರೆ ಇದಕ್ಕೆ ಬಹುಮಟ್ಟಿಗೆ ಕಾರಣ ಶಿಕ್ಷಣ ಮಾಧ್ಯಮ ಮಾತೃಭಾಷೆಯಾಗದಿರುವುದು. ಎಸ್. ಎಸ್. ಎಲ್. ಸಿ.ಗೆ ಇಷ್ಟೊಂದು ಸಬ್‌ಜಕ್ಟ್ಸ್ ಇಟ್ಟು ಒಮ್ಮೆಯೇ ಪರೀಕ್ಷೆಯನ್ನು ಉದ್ದೇಶಪೂರ್ವಕವಾಗಿ ಮಾಡಿದ್ದಾರೋ ಏನೋ ಗೊತ್ತಿಲ್ಲ. ವಿದ್ಯಾರ್ಥಿಗಳು ಅದನ್ನು ಅಲ್ಲಿಯೇ ಬಿಡಬೇಕು ಎಂದು ಅರ್ಥವೋ ಏನೋ ನನಗೆ ಗೊತ್ತಿಲ್ಲ. ಅಂತಹ ಕಠಿಣವಾದ ಪರೀಕ್ಷೆಗಳನ್ನು ಮಕ್ಕಳಿಗೆ ಇಟ್ಟಿದ್ದಾರೆ. ಈ ವಿಚಾರವನ್ನು ಪರೀಕ್ಷೆ

(ಶ್ರೀ ಎಸ್. ಗೋಪಾಲಗೌಡ)

ಮಾಡಿ ಹಿಂದೆ ಇದ್ದಂತೆ ಎರಡುವರ್ಷಗಳು ಇಂಟರ್‌ಮೀಡಿಯಟ್ ಡಿಗ್ರಿ ಕೋರ್ಸ್ ಇರುವ ಹಾಗೆ ತೀರ್ಮಾನ ಮಾಡುವುದು ಒಳ್ಳೆಯದು.

ಸಮಾಜ ಸುಧಾರಣೆಯಲ್ಲಿ ವಿದ್ಯೆಯಲ್ಲಿ ಆಗತಕ್ಕ ಸುಧಾರಣೆ ಬಹಳ ಮುಖ್ಯವಾದುದು. ಇದು ರಾಷ್ಟ್ರದ ಬುನಾದಿ ಸ್ವರೂಪ. ಸುಧಾರಣೆ ಮಾಡತಕ್ಕ ಕೆಲಸ ಕಷ್ಟಕರವಾದುದು. ಮನುಷ್ಯನಿಗೆ ಕತ್ತಲೆಯಲ್ಲಿ ಬಹು ವೇಗವಾಗಿ ಹೋಗುತ್ತಿರುವ ರೈಲಿನ ಚಕ್ರವನ್ನು ಕಿತ್ತು ಮತ್ತೊಂದು ಚಕ್ರವನ್ನು ಜೋಡಿಸುವಂತಹ ಚಾಕಚಕ್ಯತೆ ಬೇಕು, ಜಾಗ್ರತಿ ಬೇಕು. ಹಾಗಿಲ್ಲದೆ ಅದನ್ನು ನಿಲ್ಲಿಸಿ ರಿಪೇರಿಮಾಡಿ ಮುಂದೆ ಚಲಿಸುವ ಹಾಗೆ ಹುಡುಗರನ್ನು ವಿದ್ಯೆಯಲ್ಲಿ ಮುಂದಕ್ಕೆ ತರುತ್ತೇವೆಂದು ಹೇಳುವುದು ಸಾಧ್ಯವಾದುದಲ್ಲ. ಶಕ್ಯವೂ ಅಲ್ಲ. ಅದನ್ನು ಜಾಗ್ರತಿಯಿಂದ ಮಾಡಬೇಕು. ಯಾರಿಗೂ ತೊಂದರೆಯಾಗದ ಹಾಗೆ ಮಾಡಬೇಕು. ಉತ್ತಮರೀತಿಯಲ್ಲಿ ಮಾಡಬೇಕು. ಅದೂ ಅಲ್ಲದೆ ಅನೇಕ ಪ್ರಯೋಗಗಳನ್ನು ಬೇರೆ ಮಾಡುತ್ತಿದ್ದಾರೆ. ಅನೇಕ ರೂಪದ ಹೆಸರುಗಳನ್ನು ಶಾಲೆಗಳಿಗೆ ಇಡುವುದರಿಂದ ಅನೇಕ ರೀತಿಯಲ್ಲಿ ಮತ್ತಷ್ಟು ಗೊಂದಲವನ್ನುಂಟುಮಾಡುತ್ತಿದ್ದಾರೆ. ಕೆಲವು ಸಂಸ್ಥೆಗಳಿಗೆ ಸರ್ಕಾರದವರು ಕಂಟ್ರಿಬ್ಯೂಷನ್ ಕೊಡುವ ವ್ಯವಸ್ಥೆಮಾಡುತ್ತಿದ್ದಾರೆ. ಇದನ್ನು ಎಲ್ಲಾ ಕಡೆಗಳಿಗೂ ಕೊಡಬೇಕು. ಕೆಲವು ಕಡೆಗಳಲ್ಲಿ ಈ ಬಗ್ಗೆ ಇರತಕ್ಕ ತೊಂದರೆಗಳನ್ನು ಸರಿಪಡಿಸುವುದಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳಬೇಕು.

ಇನ್ನು ಉಪಾಧ್ಯಾಯರ ನೇಮಕ, ಅವರ ಸಂಬಳ ಸಾರಿಗೆಗಳ ಬಗ್ಗೆ ಈಗ ಅನೇಕ ಕುಂದು ಕೊರತೆಗಳಿವೆ. ಅವನ್ನು ಸರ್ಕಾರದವರು ಹೇಗೆ ಪರಿಹಾರಮಾಡುತ್ತಾರೋ ಗೊತ್ತಿಲ್ಲ. ಆ ವಿಚಾರದಲ್ಲಿ ಸರ್ಕಾರ ಹೆಚ್ಚಿನ ನಿಗಾ ಕೊಡಬೇಕು.

ಕೊನೆಯದಾಗಿ ಖಾಸಗೀ ಸಂಸ್ಥೆಗಳ ಬಗ್ಗೆ ನಾನು ಹೇಳುವುದು ಬಹಳವಿದೆ. ಆದರೆ ಆ ವಿಚಾರದಲ್ಲಿ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ನಮ್ಮಲ್ಲಿ ಮೆಹರಾಸ್ ಟೀಚರ್ಸ್ ಟ್ರೈನಿಂಗ್ ಕಾಲೇಜ್ ಎಂಬುದಾಗಿ ಇದೆಯೆಂದು ನನ್ನ ಗಮನಕ್ಕೆ ಬಂತು. ಹೋದ ವರ್ಷ ಅದು ಆರಂಭವಾಯಿತು. ಅಲ್ಲಿ ಸುಮಾರು 150 ಜನರು ಓದುತ್ತಿದ್ದಾರೆ. 29 ಜನರು ನಮ್ಮ ರಾಜ್ಯದವರು ಬಾಕಿಯುಳ್ಳವರು ನೆರೆಯ ರಾಜ್ಯವಾದ ಕೇರಳ ರಾಜ್ಯಕ್ಕೆ ಸಂಬಂಧಪಟ್ಟವರು. ಆ ಕಾಲೇಜಿಗೆ ಒಂದು ಸೌಲಭ್ಯವಿದೆ. ಅಲ್ಲಿ 180 ರೂಪಾಯಿಗಳು ಟ್ಯೂಷನ್ ಫೀಸ್ ಇದೆ. ಈಗ ಇವರು 300, 400, 500 ರೂಪಾಯಿಗಳನ್ನು ಟ್ಯೂಷನ್‌ಫೀಸ್ ಕೊಡಬೇಕೆಂದು ಮಾಡುತ್ತೇವೆ. ಹುಡುಗರು ಆ ರೀತಿ ಕೊಡಬೇಕೆಂದು ಹೇಳುತ್ತಿದ್ದಾರೆ. ಆ ರೀತಿ ಕೊಡದಿದ್ದರೆ ಹುಡುಗರಿಗೆ ಸ್ಕೂಲಿಗೆಬರಬಾರದು ಅಟೆಂಡೆನ್ಸ್ ಕೊಡುವುದಿಲ್ಲ, ಅಥವಾ ಪರೀಕ್ಷೆಗೆ ಅಡ್‌ಮಿಷನ್ ಟಿಕೆಟ್ಸ್ ಕೊಡುವುದಿಲ್ಲವೆಂದು ಬೇರೆ ಹೇಳುತ್ತಿದ್ದಾರೆ. ಇದನ್ನು ನಾನು ಸುಮ್ಮನೆ ಒಂದು ಉದಾಹರಣೆಯಾಗಿ ಕೊಟ್ಟಿದ್ದೇನೆ. ಈ ಬಗ್ಗೆ ನಾನು ಒಂದು ಖೋತಾ ನಿರ್ಣಯವನ್ನೂ ಸಹ ಕಳುಹಿಸಿದ್ದೆ. ಕಾರಣಾಂತರದಿಂದ ಅದು ಈ ಸಭೆಯಲ್ಲಿ ಅಂಗೀಕಾರವಾಗಲಿಲ್ಲ. ಈಗ ಆ ವಿಚಾರದಲ್ಲಿ ಬಹಳ ಕಷ್ಟವೆಂದು ಹುಡುಗರಿಂದ ತಿಳಿದಮೇಲೆ ಅವರಿಗೆಲ್ಲಾ ಅಡ್ಮಿಷನ್ ಟಿಕೆಟ್ಟುಗಳನ್ನು ಕೊಡಿಸಿದ್ದೇನೆ. ಪ್ರತಿಯೊಬ್ಬ ಹುಡುಗನ ಹತ್ತಿರ 100 ರೂಪಾಯಿಗಳನ್ನು ಕೊಡಿಸಿದ್ದೇನೆ. ಆದರೆ ಅವರು ನನ್ನ ಸಂಬಂಧಿಕರಲ್ಲ. ಅರ್ಜಿಗಳನ್ನೂ ಸಹ ಹಾಕಿಸಿಕೊಟ್ಟಿದ್ದೇನೆ. ಇಂತಹುಗಳು ಬೆಂಗಳೂರಿನಲ್ಲಿ 13 ಇವೆ. ಆದ್ದರಿಂದ ಇವರಿಗೆ ಎಷ್ಟು ತರಪೇತಾದ ಉಪಾಧ್ಯಾಯರುಗಳು ಬೇಕೋ ಅಷ್ಟು ಸಿಗುವ ಅನುಕೂಲಗಳನ್ನು ಕಲ್ಪಿಸಿಕೊಳ್ಳಬಹುದು. ಅದಕ್ಕಾಗಿ ಸಂಜೆ ಕಾಲೇಜುಗಳನ್ನು ಇವರು ತೆರೆಯಬೇಕು. ಸಂಜೆಯಹೊತ್ತು ಅವರಿಗೆ ಪಾಠ ಕಲಿಸುವ ವ್ಯವಸ್ಥೆ ಮಾಡಬೇಕು. ಈ ದೇಶದಲ್ಲಿ ಜನರು ದುಡಿಯಬೇಕು, ಓದಲೂ ಬೇಕು. ಏಕೆಂದರೆ ಬಹಳ ಜನರು ಬಡವರು. ಆದರೂ ಕೂಡ ಅವರಿಗೆ ಅನುಕೂಲವಾಗುವ ರೀತಿಯಲ್ಲಿ ತರಪೇತನ್ನು ಕೊಡುತ್ತಾ ಇಲ್ಲ. ಆ ಒಂದು ತರಪೇತಿನ ಅವಧಿ ಈ ಸಾಲಿನಲ್ಲಿ ಒಂದು ವರ್ಷ ಸಾಕು, ಮುಂದಿನ ವರ್ಷ ಎರಡು ವರ್ಷಗಳಿರಲಿ ಎಂಬುದಾಗಿ ಇವರು ಹೇಳುತ್ತಿದ್ದಾರೆ. ಇವರು ಯಾವುದಾದರೂ ಒಂದು ಪ್ರಯೋಗವನ್ನು ಮಾಡಿದರೆ ಅದನ್ನು ಹತ್ತಾರು ವರ್ಷಗಳು, ನೂರಾರು ವರ್ಷಗಳವರೆಗೂ ನೋಡಬೇಕು. ಪ್ರತಿವರ್ಷವೂ ಈಗಿನ ರೀತಿಯಲ್ಲಿ ಬದಲಾವಣೆ ಮಾಡುತ್ತಾ ಹೋದರೆ ಬಹಳ ತಪ್ಪಾಗುತ್ತದೆ, ಅಲ್ಲದೆ ಬಹಳ ಕೆಟ್ಟ ಪರಿಣಾಮವುಂಟಾಗುತ್ತದೆ. ಆದ್ದರಿಂದ ಸರ್ಕಾರದವರು ಇದನ್ನು ಕೂಲಂಕುಶವಾಗಿ ವಿಚಾರ ಮಾಡಬೇಕು. ಇನ್ನೂ ಎಷ್ಟೋ ವಿಷಯಗಳಿವೆ ಹೇಳುವುದು. ಆದರೆ ಕಾಲಾವಕಾಶವಿಲ್ಲ. ನಾನು ನನ್ನ ಸ್ನೇಹಿತರಿಗೆ ಕೊಟ್ಟ ಸಮಯವನ್ನು ತೆಗೆದುಕೊಂಡಿದ್ದೇನೆ. ಅದಕ್ಕಾಗಿ ಅಧ್ಯಕ್ಷರು ನನ್ನನ್ನು ಕ್ಷಮಿಸುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಮಾನ್ಯ ವಿದ್ಯಾ ಸಚಿವರು ಬಹಳ ಆಸಕ್ತಿಯನ್ನು

ಇದರಲ್ಲಿ ತೋರಿಸುತ್ತಿದ್ದಾರೆ. ವಿಧ್ಯಾ ಕ್ಷೇತ್ರವನ್ನು ಉತ್ತಮ ಪಡಿಸಬೇಕೆಂಬ ಆಸಕ್ತಿ ಅವರಿಗೆ ಯಾವ ರೀತಿಯಲ್ಲಿ ಹೆಚ್ಚಾಗುತ್ತಿದೆಯೋ ಏನೋ ನನಗೆ ಸರಿಯಾಗಿ ಗೊತ್ತಿಲ್ಲ. ಆದರೆ ಬಹಳ ಸಲ ಅನೇಕ ತೊಡಕುಗಳಿಗೆ ಇವರು ಸಿಕ್ಕಿಕೊಳ್ಳುತ್ತಿದ್ದಾರೆ. ಆದ್ದರಿಂದ ಇವರು ಸರಿಯಾದ ರೀತಿಯಲ್ಲಿ ಸಲಹೆಗಳನ್ನು ಪಡೆದು ದೃಢವಾದ ಹೆಜ್ಜೆಯನ್ನು ಇಡುವುದನ್ನು ಕಲಿಯ ಬೇಕು. ಪರೀಕ್ಷೆಯಲ್ಲಿ ಹುಡುಗರು ಫೇಲಾದರೆ ಉಪಾಧ್ಯರ ಸಂಬಳವನ್ನು ನಿಲ್ಲಿಸುತ್ತೇವೆ, ಆ ಸ್ಕೂಲಿಗೆ ಗ್ರಾಂಟು ಕೊಡುವುದನ್ನು ನಿಲ್ಲಿಸುತ್ತೇವೆಂದು ಹೇಳುವಾಗ ಇವರಿಗೆ ಸರಿಯಲ್ಲ. ಇವರು ಆ ರೀತಿ ಹೇಳಿದರೆ ನಾನು ಒಂದು ಮಾತನ್ನು ಹೇಳುತ್ತೇನೆ. ಇನ್ನು ಮುಂದೆ ಹುಡುಗರೇನಾದರೂ ಹೆಚ್ಚು ಫೇಲಾದರೆ ಈ ಮಂತ್ರಿಗಳನ್ನೇ ವಜಾ ಮಾಡಬೇಕು ಎಂಬುದಾಗಿ ನಾನು ಹೇಳುತ್ತೇನೆ. ಆದ್ದರಿಂದ ಅದಕ್ಕೆ ಕಾರಣರು ಯಾರು ಎಂಬುದನ್ನು ನೋಡಬೇಕು. ಪಠ್ಯ ಪುಸ್ತಕಗಳು ಸಕಾಲದಲ್ಲಿ ಹುಡುಗರಿಗೆ ಸಿಗುವುದಿಲ್ಲ, ಸಾಕಷ್ಟು ಉಪಾಧ್ಯಾಯರನ್ನು ಸಕಾಲದಲ್ಲಿ ಇವರು ಕಳುಹಿಸುವುದಿಲ್ಲ. ಹೀಗೆ ಇವರೇ ಮಾಡತಕ್ಕದ್ದು ನೂರಾರು ತಪ್ಪುಗಳಿವೆ.

6-00 P.M.

ಅದಕ್ಕೆ ಯಾರನ್ನೂ ಶಿಕ್ಷೆಗೆ ಗುರಿ ಮಾಡುವುದು ಸರಿಯಲ್ಲ. ನೀವೇ ನಿಮ್ಮನ್ನು ಶಿಕ್ಷೆಗೆ ಗುರಿ ಮಾಡಿಕೊಳ್ಳಿ. ಎನ್ನುವ ಮಾತನ್ನು ನಾನು ಹೇಳುತ್ತೇನೆ.

ಇನ್ನು ಕೊನೆಯದಾಗಿ ಕನ್ನಡ ಮಾಧ್ಯಮ ಆಗಬೇಕೆಂದು ನಾನು ಒತ್ತಿ ಹೇಳುತ್ತೇನೆ. ಹಿಂದಿ ರಾಷ್ಟ್ರಭಾಷೆಯಾಗುವುದು ಗೊತ್ತು. ಆದರೆ ಅದರ ಬಗ್ಗೆ ಪ್ರಚಾರ ಏನೂ ಮಾಡುತ್ತಿಲ್ಲ. ಹಿಂದಿ ಪಾಠವನ್ನು ಹೇಳಿ ಪರೀಕ್ಷೆ ಮಾಡುತ್ತಿಲ್ಲ. ಒಂದು ವೇಳೆ ಪರೀಕ್ಷೆಯನ್ನು ಮಾಡಿದರೂ ಅದನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲ ಎಂದು ಹೇಳುತ್ತಾರೆ. ಈ ವಿಚಾರದಲ್ಲಿ ಒಂದು ಮಾತನ್ನು ಹೇಳುತ್ತೇನೆ. ನಾವು ಹಿಂದಿಯನ್ನು ಕಲಿಸದೇ ಹೋದರೆ ಒಂದು ದೊಡ್ಡ ತಪ್ಪನ್ನು ಮಾಡಿದ ಹಾಗಾಗುತ್ತದೆ ಈ ರಾಜ್ಯದ ಎಲ್ಲೆಗಳನ್ನು ಮೀರಿ ಯಾವ ಕಾಲದಲ್ಲಿ ಯಾವ ದೇಶಕ್ಕೆ ಹೋದರೂ ಕೂಡ ಅವರ ಎದುರು ನಾವು ಯಾವ ಮಾತನ್ನೂ ಆಡುವುದಕ್ಕಾಗುವುದಿಲ್ಲ. ಭಾಷೆಯ ಸಂಪರ್ಕ ಕಡಿದು ಹೋಗುತ್ತದೆ. ಇಂಗ್ಲೀಷಿನಲ್ಲಿ ಮಾತನಾಡಿದರೆ ಇಂಗ್ಲೀಷಿನಲ್ಲಿ ಉತ್ತರ ಕೊಡುವ ಜನ ಇಲ್ಲ. ಹಿಂದಿಯನ್ನು ಮಾತನಾಡಿ ಎಂದು ಹೇಳುವುದು ವಾಸ್ತವಾಂಶ. ಈ ರಾಜ್ಯದಲ್ಲಿ ಈಗಿರತಕ್ಕ ಮಕ್ಕಳಿಗೆ ಹಿಂದಿ ಬೋಧೆಯನ್ನು ಮಾತ್ರ ಮಾಡದೇಹೋದರೆ, ಅದರಲ್ಲಿ ಸಾಕಷ್ಟು ವ್ಯವಹಾರಿಕ ಜ್ಞಾನವನ್ನು ಪಡೆಯದೇ ಹೋದರೆ ಐ.ಎ.ಎಸ್. ಪಾಸು ಮಾಡಿದರೂ ಉತ್ತರ ಪ್ರದೇಶಗಳವರ ಜೊತೆಗೆ ಬಾಳುವುದಕ್ಕಾಗುವುದಿಲ್ಲ. ತೊಂದರೆಯಾಗುತ್ತದೆ. ಈ ದೃಷ್ಟಿಯಿಂದ ನಾನು ಹೇಳುತ್ತೇನೆ. ಹಿಂದಿಯನ್ನು ಕಲಿಯಬೇಕು. ಮಕ್ಕಳಿಗೆ ಹಿಂದಿಯ ಬೋಧೆಯನ್ನು ಮಾಡಬೇಕು. ಸಾಕಷ್ಟು ಹಿಂದಿ ಉಪಾಧ್ಯಾಯರನ್ನು ನೇಮಕ ಮಾಡಿಕೊಳ್ಳಬೇಕು. ಅವರನ್ನು ಟ್ರೇನ್ ಮಾಡಬೇಕು. ಅದಕ್ಕಾಗಿ ಹೊರಗಡೆಯಿಂದ ಯಾರನ್ನಾದರೂ ಕರೆಸಿದರೂ ಒಳ್ಳೆಯದು. ಹಿಂದಿ ಮಾತೃಭಾಷೆಯಾಗಿ ಉಳ್ಳವರನ್ನು ಉಪಯೋಗಿಸಿಕೊಳ್ಳಬೇಕು. ಅದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

(Sri Sanjeevanath Aikala stood)

Mr. SPEAKER.—What is it that Sri Sanjeevanath wants to say?

Sri H. D. DEVEGOWDA (Holenarasipur).—Sir, his name is there in the list.

Mr. SPEAKER.—I have made no mistake. In fact, I delayed calling his name, because I did not find him here. He was absent when I called his name. He has no business to go about roaming. If I allow him, it becomes a precedent and I have to allow everybody.

Sri SANJEEVANATH AIKALA.—Sir, I want to speak about Sainik School, Bharat Sevak Samaj and Government Printing Press.

Mr. SPEAKER.—The Hon'ble Minister may kindly deal with all these three points during the course of his reply.

Sri SANJEEVANATH AIKALA.—Sir, the House will bear with me and I may be permitted to speak a few words now.

Mr. SPEAKER.—I am trying to be as indulgent as possible. The Member may please give his points in writing to me, I will pass them on to the Hon'ble Minister and he will deal with them tomorrow in his reply. How can I make an exception in his case? If I do that, it becomes a precedent. I have called his name and he was not there. Name once called, is not usually called afterwards.

Sri A. P. APPANNA (Virajpet).—That precedent cannot be created, Sir.

Mr. SPEAKER.—That is why I suggested that the Hon'ble member may pass on his points to me. I have done it on a prior occasion.

Sri SANJEEVANATH AIKALA.—It cannot be passed on like that. It would be better if I explain them here.

Mr. SPEAKER.—The House will now stand adjourned to reassemble tomorrow at 12-30 P. M.

The House adjourned at Five Minutes past Six of the Clock to meet again at Thirty Minutes past Twelve of the Clock on Friday, the 18th March 1966.

WD 6604—GPB—500—17-6-66